ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ



ಕನ್ನಡ ವಾರಪತ್ರಿಕೆ

ಸಂಪುಟ 8 ಸಂಚಿಕೆ 38
ಸೆಪ್ಟಂಬರ್ 21, 2014

ಪುಟ 16 ರೂ. 10/-

Blog :janashakthi.wordpress.com e-mail : js_weekly@yahoo.com

ಶೈಕ್ಷಣಿಕ ಸಮಸ್ಯೆಗಳು:



ರಾಜ್ಯಾದ್ಯಂತ ಬೀದಿಗಿಳಿದ ವಿದ್ಯಾರ್ಥಿಗಳು

ಜಿಡಿಪಿ ಏರಿಕೆ ಹಾಗೂ ಮೋದಿ ಮ್ಯಾಜಿಕ್ ಎಂಬ ಬೊಗಳೆ





ಮೋದಿಪಾಲ ರಾಜ್ಯಪಾಲ



ಪಶ್ಚಿಮ ಬಂಗಾಳ: ಟಿಎಂಸಿ ಆಡಳಿತ ನೀಚತನ ಭಯೋತ್ಪಾದಕತೆಯ ಮಿಶ್ರಣ

ಗ್ರಾಮ ಪಂಚಾಯತಿ ನೌಕರರ ಖಾಯಮಾತಿ ಆಗಲಿ

ಗ್ರಾಮ ಪಂಚಾಯಿತಿ ಎಲ್ಲಾ ನೌಕರರನ್ನು ಖಾಯಾಮಾತಿ ಮಾಡಲು ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಎಲ್ಲಾ ನೌಕರರನ್ನು ತಾರತಮ್ಯವಿಲ್ಲದೆ ಖಾಯಂ ಮಾಡಬೇಕೆಂದು ಗ್ರಾಮ ಪಂಚಾಯಿತಿ ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ಹರಳಹಳ್ಳಿ ಗೋಪಾಲಕೃಷ್ಣ ಒತ್ತಾಯಿಸಿದರು.

ಹುಣಸೂರು ತಾಲೂಕಿನ ಬಿಳಿಕೆರೆ ಗ್ರಾಮದ ನಂಜುಂಡೇಶ್ವರ ಕಲ್ಯಾಣ ಮಂಟಪದಲ್ಲಿ ಸೆಪ್ಟೆಂಬರ್ 6 ಮತ್ತು 7 ರಂದು ನಡೆದ ಎರಡು ದಿನದ ಜಿಲ್ಲಾ ಮಟ್ಟದ ಕಾರ್ಯಗಾರವನ್ನು ಉದ್ಘಾಟಿಸಿ ಮಾತಾನಾಡಿದ ಅವರು ರಾಜ್ಯದಲ್ಲಿ ಸರ್ಕಾರ 49,423 ನೌಕರರನ್ನು ಗುರುತಿಸಿದೆ, ಇದರಲ್ಲಿ ಕೇವಲ 27,000 ನೌಕರರನ್ನು ಖಾಯಂ ಮಾಡುವುದಾಗಿ ಹೇಳುತ್ತಿದೆ. ಇದರಿಂದ ಹತ್ತಾರು ವರ್ಷಗಳಿಂದ ಪಂಚಾಯಿತಿಯಲ್ಲಿ ಕೆಲಸ ಮಾಡಿರುವ ನೌಕರರಿಗೆ ತಾರತಮ್ಯ ಮಾಡಲಾಗುತ್ತಿದೆ. ಇಂತಹ ನೌಕರ ವಿರೋಧಿ ನೀತಿಯನ್ನು ಕೈಬಿಟ್ಟು ಎಲ್ಲಾ ನೌಕರರನ್ನು ಏಕಕಾಲಕ್ಕೆ ಖಾಯಂ ಮಾಡಬೇಕೆಂದು ಒತ್ತಾಯಿಸಿದರು.

ಪಂಚಾಯಿತಿಗಳಲ್ಲಿ ಕನಿಷ್ಟ ವೇತನ ಮತ್ತು ಯಾವುದೇ ಸೌಲಭ್ಯ ಪಡೆಯದೆ ಹತ್ತಾರು ವರ್ಷಗಳಿಂದ ಜೀತಾದಾಳುಗಳಾಗಿ ದುಡಿಯುತ್ತಿದ್ದಾರೆ. ಇಷ್ಟಾದರು ಕೂಡ ಸರ್ಕಾರ ನೌಕರರಿಗೆ ತಿಂಗಳಿಗೆ ಸರಿಯಾಗಿ ಸಂಬಳ ನೀಡುತ್ತಿಲ್ಲ. ಇದರಿಂದ ನೌಕರರು ಅತಂತ್ರ ಸ್ಥಿತಿಯಲ್ಲಿ ಬದುಕುವಂತಾಗಿದೆ. ಸಂಘದ ನಿರಂತರ ಹೋರಾಟದ ಭಾಗವಾಗಿ ಅಲ್ಪ ಮಟ್ಟಿನ ಯಶಸ್ಸು ಸಾಧಿಸಲಾಗಿದ್ದರೂ ಗ್ರಾಮ ಪಂಚಾಯ್ತಿ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವವರೆಗೂ ಹೋರಾಟವನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಪಂಚಾಯಿತಿಗಳಿಗೆ ಕಡಿಮೆ ಅನುದಾನ ನೀಡುತ್ತಿರುವುದರಿಂದ ಇಂದು ಗ್ರಾಮೀಣ ಪ್ರದೇಶದಲ್ಲಿ ಅಭಿವೃದ್ಧಿ ಕುಟಿಂತವಾಗಿದೆ. ಇದ-ರಿಂದಾಗಿ ನೌಕರರಿಗೆ ಹತ್ತಾರು ತಿಂಗಳ ವೇತನ ಬಾಕಿ ಆಗಿದೆ. ಇಷ್ಟಾದರೂ ಸರ್ಕಾರ ಹೆಚ್ಚಿನ ಅನುದಾನ ನೀಡುವಲ್ಲಿ ನಿರಾಸಕ್ತಿ ತೋರುತ್ತಿದೆ



ಎಂದ ಅವರು ಪಕ್ಕದ ಕೇರಳ ರಾಜ್ಯದಲ್ಲಿ ಪಂಚಾಯಿತಿಗೆ ವರ್ಷಕ್ಕೆ ಒಂದು ಕೋಟಿಗೂ ಹೆಚ್ಚು ಅನುದಾನ ನೀಡಿ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ. ಇದರಿಂದ ಅಧಿಕಾರ ವಿಕೇಂದ್ರೀಕರಣ ಸರ್ಮಪಕವಾಗಿ ಜಾರಿಯಾಗಿದೆ. ಸಿಬ್ಬಂದಿಗಳಿಗೂ ಕೂಡ ಕನಿಷ್ಟ ವೇತನ ಜಾರಿ ಮಾಡಿ ಪ್ರತಿ ತಿಂಗಳು ನೀಡಲಾಗುತ್ತದೆ. ರಾಜ್ಯದಲ್ಲಿ ಪಂಚಾಯಿತಿ ಅಭಿವೃದ್ಧಿ ಸರ್ಕಾರಕ್ಕೆ ಬೇಕಾಗಿಲ್ಲ ಎಂದು ಹೇಳಿದರು.

ಸಿ.ಐ.ಟಿ.ಯು. ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ. ಜಯರಾಮು ಮಾತಾನಾಡಿ ಕಾರ್ಮಿಕರನ್ನು ಸರ್ಕಾರಗಳು ಶೋಷಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇಂತಹ ತಾರತಮ್ಯ ಕೊನೆಗಾಣಿಸಲು ಸಂಘವನ್ನು ಗಟ್ಟಿಗೊಳಿಸಬೇಕೆಂದು ಕರೆ ನೀಡಿದರು. ಕಾರ್ಮಿಕರು ಮತ್ತು ರೈತರು ಒಟ್ಟಾದ-ರೆ ಸರ್ಕಾರಗಳಿಗೆ ಸರಿಯಾದ ದಿಕ್ಕು ತೋರಿಸಲು ಸಾಧ್ಯವಾಗುತ್ತದೆ. ಇಂದಿಗೂ ಕೂಡ ಗ್ರಾಮೀಣ ಭಾಗದಲ್ಲಿ ಜನಸಾಮಾನ್ಯರು ವಸತಿ, ಭೂಮಿ, ರೇಷನ್ ಕಾರ್ಡ್ ಸಮಸ್ಯೆಯಿಂದ ಬಳಲುತ್ತಿದ್ದರೂ ಕೂಡ ಸರ್ಕಾರ ಯಾವುದೇ ಪ್ರಯತ್ನ ಮಾಡುತ್ತಿಲ್ಲ ಎಂದು ಟೀಕಿಸಿದರು.

ಬಿಳಿಕೆರೆ ಪಿ.ಡಿ.ಓ. ಶ್ರೀನಿವಾಸ್ ಮಾತನಾಡಿ ನೌಕರರ ವೇತನಕ್ಕೆ ಸಂಪೂರ್ಣ ಪ್ರತ್ಯೇಕ ಅನುಧಾನ ಬಿಡುಗಡೆ ಮಾಡಬೇಕು, ಸ್ಥಳೀಯ ಸಂಪನ್ಮೂಲದಿಂದ ಸಿಬ್ಬಂದಿಯವರಿಗೆ ವೇತನ ನೀಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಸಾಕಷ್ಟು ಸಮಸ್ಯೆ ಉಂಟಾಗುತ್ತಿದೆ ಎಂದು ಹೇಳಿದರು.

ಜಿಲ್ಲಾಧ್ಯಕ್ಷ ಕೆ. ಬಸವರಾಜು ಮಾತಾನಾಡಿ ಎರಡು ದಿನದ ಕಾರ್ಯಗಾರದಲ್ಲಿ ನೌಕರ ಸಮಸ್ಯೆಗಳನ್ನು ಕುರಿತು ಚರ್ಚಿಸಿ ಮತ್ತು ಪಂಚಾಯಿತಿ ನೌಕರರಿಗೆ ಕಾರ್ಮಿಕ ಕಾನೂನುಗಳ ಕುರಿತು ಹಾಗೂ ಹಕ್ಕುಗಳ ಕುರಿತು ತಿಳಿಸಿ ಜಾಗೃತಗೊಳಿಸಲಾಗುವುದು.

ವೇದಿಕೆಯಲ್ಲಿ ಬಿಳಿಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್. ಬಾಲೇಂದ್ರ, ಪಂಚಾಯಿತಿ ಪಿ.ಡಿ.ಓ ಗಳಾದ ಅರುಣ್ ಮಹದೇವು, ಬೋಳನಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ಎ.ಕುಮಾರ್, ಸದಸ್ಯ ನಾಗಣ್ಣ, ಬಿಳಿಕೆರೆ ಗ್ರಾ.ಪಂ. ಸದಸ್ಯರಾದ ಮಹೇಶ್, ನಂಜುಡೇಶ್ವರ ಕಲ್ಯಾಣ ಮಂಟಪದ ಮಾಲೀಕರಾದ ಪ್ರಸನ್ನಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜು ಕಲ್ಕುಣಿಕೆ, ಜಿಲ್ಲಾ ಖಜಾಂಚಿ ವರುಣಾ ನಾಗರಾಜು, ಜಿಲ್ಲಾ ಉಪಾಧ್ಯಕ್ಷರಾದ ಕಿರಿಜಾಜಿ ಲೋಕೇಶ್, ಪುಟ್ಟಸ್ವಾಮಪ್ಪ. ಸಹ ಕಾರ್ಯದರ್ಶಿ ತ್ಯಾಗರಾಜು, ಸೋಮೇಶ್, ಸ್ವಾಗತ ಸಮಿತಿ ಅಧ್ಯಕ್ಷರಾದ ರುದ್ರಪ್ಪ, ಕಾರ್ಯದರ್ಶಿ ಟಿ.ಎಸ್.ದಿನೇಶ್, ಗೌರವ ಅಧ್ಯಕ್ಷ ಬಿಳಿಕೆರೆ ನಿಂಗಪ್ಪ, ಮುಖಂಡರಾದ ಕೃಷ್ಣೆಗೌಡ, ಶೇಖರ್, ಮಹೇಶ್, ಕವಿರಾಜ್, ರಾಮಚಂದ್ರರೆಡ್ಡಿ ಮುಂತಾದವರು ಇದ್ದರು. ●

ಅಮಾಸೆಬೈಲ್ : ಅಂಗವಿಕಲರ ಹಾಗೂ ಪಾಲಕರ ಬೃಹತ್ ಸಮಾವೇಶ

ಗ್ರಾಮ ಪಂಚಾಯತ್ ಅಮಾಸೆಬೈಲ್, ಉಡುಪಿ ಜಿಲ್ಲಾ ಅಂಗವಿಕಲರ ಮತ್ತು ಕರ್ನಾಟಕ ರಾಜ್ಯ ಅಂಗವಿಕರ ಹಾಗೂ ಪಾಲಕರ ಒಕ್ಕೂಟ, ಉಡುಪಿ ಜಿಲ್ಲಾ ಸಮಿತಿ ಇದರ ಸಹಯೋಗದೊಂದಿಗೆ ಅಂಗವಿಕಲರಿಗೆ ಸರಕಾರದಿಂದ ಸಿಗುವ ವಿವಿಧ ಸೌಲಭ್ಯಗಳು ವಿಶೇಷ ಮಾಹಿತಿ ಶಿಬಿರವು ದಿನಾಂಕ 10 ಸೆಪ್ಟೆಂಬರ್, 2014ರಂದು ಬುಧವಾರ ಅಮಾಸೆಬೈಲ್ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಸುವರ್ಣ ಸಭಾಭವನದಲ್ಲಿ ಜರಗಿತು.

ಅಂಗವಿಕಲರ ಹಾಗೂ ಪಾಲಕರ ಸಮಾವೇಶವನ್ನು ಅಮಾಸೆಬೈಲ್ ಜಿಲ್ಲಾ ಪಂಚಾಯತ್ ಸದಸ್ಯ ರಶ್ವತ್ ಕುಮಾರ್ ಶೆಟ್ಟಿ ಉದ್ಘಾಟಿಸಿ ಮಾತನಾಡಿದರು. ಅವರು 'ಅಂಗವಿಕಲರು ಈ ಸಮಾಜದ ಅವಿಭಾಜ್ಯ ಅಂಗ. ಸಮಾನರಾಗಿ ಘನತೆ, ಗೌರವದಿಂದ ಬದುಕಲು ಅವರಿಗೂ ಹಕ್ಕಿದೆ. ಈ ಹಕ್ಕಿನಿಂದ ಬದುಕಲು ಅವರಿಗೆ ವಿಶೇಷವಾದ ಅವಕಾಶ, ಅವಶ್ಯಕತೆಗಳು ಬೇಕು ಎಂದು ಹೇಳಿದರು. ಅಮಾಸೆಬೈಲು ತಾಲೂಕು ಪಂಚಾಯತ್ ಸದಸ್ಯ ಆರ್. ನವೀನ ಚಂದ್ರಶೆಟ್ಟಿ, ಅಮಾಸೆಬೈಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ। ಹೇಮಲತಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರತೀ ಗ್ರಾಮ ಮತ್ತು ಗ್ರಾಮ ಪಂಚಾಯತ್ ಮಟ್ಟಗಳಲ್ಲಿ ಅಂಗವಿಕಲರ ಹಾಗೂ ಪಾಲಕರ ಸಂಘಟನೆ ಮಾಡಿ, ಸರಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಮುಂದಾಗಬೇಕು ಎಂದು ಹೇಳಿದರು. ಜಿಲ್ಲಾ ಅಂಗವಿಕಲರ ಸಬಲೀಕರಣ ಅಧಿಕಾರಿ ನಿರಂಜನ ಭಟ್ ಇಲಾಖೆಯ ವಿವಿಧ ಸೌಲಭ್ಯಗಳ ಮಾಹಿತಿ ನೀಡಿದರು. ಅಮಾಸೆಬೈಲು ಗ್ರಾಮ ಪಂಚಾಯತ್ ಅಧ್ಯಕ್ಷ ಸದಾಶಿವ ಶೆಟ್ಟಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಅಂಗವಿಕಲ ಹಾಗೂ ಪಾಲಕರ ಒಕ್ಕೂಟದ ಮುಖಂಡರಾದ ವೆಂಕಟೇಶ ಕೋಣಿ, ಕೃಷ್ಣ ಪೂಜಾರಿ ಕೋಟೇಶ್ವರ, ಗಣಪತಿ ಪೂಜಾರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎ.ಗೋಪಾಲ ದೇವಾಡಿಗ ಉಪಸ್ಥಿತರಿದ್ದರು. ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತ ಮಂಜುನಾಥ ಕಾಲ್ತೋಡು ಕಾರ್ಯಕ್ರಮ ನಿರ್ವಹಿಸಿದರು.

ವರದಿ : ವೆಂಕಟೇಶ ಕೋಣಿ


ಬೆಂಗಳೂರು

ದಶಮಾಪುರ ಗ್ರಾಮ ಪಂಚಾಯ್ತಿ ಮುಂದೆ ಅಂಗವಿಕಲರ ಪ್ರತಿಭಟನೆ

ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಅರ್ಹ ಅಂಗವಿಕಲರಿಗೆ ನಿವೇಶನ, ವಸತಿ, ವಿಶೇಷ ಶೌಚಾಲಯ ನೀಡಲು ಮತ್ತು ಬಜೆಟ್‌ನಲ್ಲಿ ಶೇ. 3% ರಷ್ಟು ಅಂಗವಿಕಲರ ಅನುದಾನ ಬಳಕೆ ಮಾಡುವುದು ಮತ್ತು ಅದರ ಕ್ರಿಯಾ ಯೋಜನೆ ರೂಪಿಸುವಂತೆ ಒತ್ತಾಯಿಸಿ ಆಗಸ್ಟ್ 25, 2014 ರಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟವು ದಶಮಾಪುರ ಗ್ರಾಮ ಪಂಚಾಯ್ತಿ ಘಟಕದ ನೇತೃತ್ವದಲ್ಲಿ ಅಲ್ಲಿನ ಗ್ರಾಮ ಪಂಚಾಯ್ತಿ ಕಛೇರಿ ಮುಂದೆ ಪ್ರತಿಭಟನಾ ಹೋರಾಟ ನಡೆಸಿತು.


ಹೋರಾಟವನ್ನು ಉದ್ದೇಶಿಸಿ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಹೆಚ್. ಉಸ್ಮಾನ್ ಬಾಷರವರು ಮಾತನಾಡಿ ಪಂಚಾಯ್ತಿ ವ್ಯಾಪ್ತಿಯಲ್ಲಿನ ಸಾಕಷ್ಟು ಅಂಗವಿಕಲರಿಗೆ ನಿವೇಶನ, ವಸತಿ, ವಿಶೇಷ ಶೌಚಾಲಯವಿಲ್ಲದೇ ತುಂಬಾ ಕಷ್ಟದಲ್ಲಿ ಬದುಕುತ್ತಿದ್ದಾರೆ. ಸರ್ಕಾರದ ನಿಯಮದ ಪ್ರಕಾರ ಈ ಯೋಜನೆಗಳಲ್ಲಿ ಅಂಗವಿಕಲರಿಗೆ ಶೇ. 5% ರಷ್ಟು ಮೀಸಲಾತಿ ಇದ್ದರೂ ಗ್ರಾಮ ಪಂಚಾಯ್ತಿಯಲ್ಲಿ ಇದನ್ನು ಕಡೆಗಣಿಸಿ ನಿಜವಾದ ಅರ್ಹ ಅಂಗವಿಕಲರಿಗೆ ಯೋಜನೆಯಿಂದ ವಂಚಿಸುತ್ತಿದ್ದಾರೆ. ಇದರಿಂದ ಅಂಗವಿಕಲರಿಗೆ ತುಂಬಾ ಅನ್ಯಾಯವಾಗುತ್ತಿದೆ. ಇದೇ ರೀತಿ ನಿಯಮ ಉಲ್ಲಂಘಿಸಿ ಅಂಗವಿಕಲರಿಗೆ ಯೋಜನೆಗಳಲ್ಲಿ ಅನ್ಯಾಯ ಮಾಡಿದರೆ ಪಂಚಾಯ್ತಿಗಳಲ್ಲಿ ಅಂಗವಿಕಲರಿಗೆ ಆಗುವ ಅನ್ಯಾಯದ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿ ಹೋರಾಟ ನಡೆಸಬೇಕಾಗುತ್ತದೆ. ಆದ್ದರಿಂದ ನಿವೇಶನ, ವಸತಿ, ಶೌಚಾಲಯ ರಹಿತ ಅಂಗವಿಕಲರನ್ನು ಸಮೀಕ್ಷೆ ಮಾಡಿ ನಿಯಮಾನುಸಾರ ಅಂಗವಿಕಲರಿಗೆ ವಾರ್ಡ್, ಗ್ರಾಮ ಸಭೆಯಲ್ಲಿ ಲಾಟರಿ ಮೂಲಕ ಅರ್ಹ ಅಂಗವಿಕಲರನ್ನು ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿದರು.

ಘಟಕದ ಕಾರ್ಯದರ್ಶಿ ಕೆ. ಹುಲುಗಪ್ಪ ಮಾತನಾಡಿ ಪಂಚಾಯ್ತಿಯಲ್ಲಿ ಅಂಗವಿಕಲರಿಗೆ ಮೀಸಲಿರುವ ಶೇ. 3% ರಷ್ಟು ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಲಾಗುತ್ತಿದೆ. ಆದ್ದ-ರಿಂದ ಶಿಕ್ಷಣ, ವೈದ್ಯಕೀಯ, ಆರ್ಥಿಕ, ಸಾಮಾಜಿಕ ಉದ್ದೇಶಗಳಿಗೆ ಶೇ. 3% ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಬೇಕು ಮತ್ತು ಗ್ರಾಮ ಪಂಚಾಯ್ತಿಯು ಇದಕ್ಕೆ ಕ್ರಿಯಾ ಯೋಜನೆ ರೂಪಿಸಬೇಕೆಂದು ಒತ್ತಾಯಿಸಿದರು.

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಾದ ವಿಜಯಕುಮಾರ್ ರವರು ಮನವಿ ಸ್ವೀಕರಿಸಿ ನಿಯಮಾನುಸಾರ ಅಂಗವಿಕಲರಿಗೆ ಸೌಲಭ್ಯಗಳನ್ನು ನೀಡುವುದಾಗಿ ಭರವಸೆ ನೀಡಿದರು. ಇದಕ್ಕಾಗಿ ಒಕ್ಕೂಟದ ಮುಖಂಡರ ಜೊತೆ ಸಭೆ ನಡೆಸುವುದಾಗಿಯೂ ಒಪ್ಪಿಕೊಂಡರು. ತಾಲೂಕು ಅಧ್ಯಕ್ಷರಾದ ಜವಳಿ ಕೊಟ್ರೇಶಪ್ಪ, ನಂದಿ ಹನುಮಂತಪ್ಪ ಮಾತನಾಡಿದರು. ಘಟಕದ ಅಧ್ಯಕ್ಷರಾದ ಹೆಚ್. ದೇವಕ್ಕ, ಮುಖಂಡರಾದ ನಿಂಗಪ್ಪ, ಬಿ.ಕೊಟ್ರೇಶ, ತಿರುಮಲ, ವೀಣಾ ಬಾಯಿ, ಚನ್ನಬಸಮ್ಮ ಇತರರು ಹೋರಾಟದ ನೇತೃತ್ವವಹಿಸಿದ್ದರು.

– ಹೆಚ್. ಉಸ್ಮಾನ್ ಬಾಷ ●

ಸಂಪಾದಕೀಯ



▌ನಿತ್ಯಾನಂದಸ್ವಾಮಿ

ಶೌಚಾಲಯ ನಿರ್ಮಾಣ ಅಭಿಯಾನ: ಉದ್ಯೋಗ ಖಾತ್ರಿ ಹಣಕ್ಕೆ ಕತ್ತರಿ

ಗ್ರಾಮಗಳನ್ನು ಬಯಲು ಶೌಚಾಲಯ ಮುಕ್ತಗೊಳಿಸುವ ಮಹತ್ವಾಕಾಂಕ್ಷೆಯ ಗುರಿಯೊಂದಿಗೆ ದೇಶದಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಜೊತೆಯಲ್ಲಿ ನಿರ್ಮಲ ಭಾರತ ಅಭಿಯಾನ ಎಂಬ ಯೋಜನೆಯನ್ನು ಜೋಡಿಸಿ ಹಳ್ಳಿಗಳಲ್ಲಿ ಶೌಚಾಲಯ ನಿರ್ಮಾಣ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ 2018 ರ ವೇಳೆಗೆ ರಾಜ್ಯವನ್ನು ಬಯಲು ಶೌಚ ಮುಕ್ತವನ್ನಾಗಿಸುವ ಗುರಿ ಇರಿಸಿಕೊಳ್ಳಲಾಗಿದೆ.

ಹಳ್ಳಿಗಳನ್ನು ಬಯಲು ಶೌಚ ಮುಕ್ತಗೊಳಿಸುವ ಉದ್ದೇಶವೇನೋ ಸ್ವಾಗತಾರ್ಹವಾಗಿದೆ. ಆದರೆ ಅದನ್ನು ಸಾಧಿಸಲು ಅನುಸರಿಸಲಾಗುತ್ತಿರುವ ಕ್ರಮಗಳು ಗೊಂದಲಮಯವಾಗಿವೆ.

ಮೊದಲನೆಯದಾಗಿ, ಬಯಲು ಶೌಚವನ್ನು ಅವಲಂಭಿಸಿರುವವರು ಗ್ರಾಮೀಣ ಬಡವರು. ಅವರಲ್ಲಿ ಶೇ.90 ರಷ್ಟು ಜನ ಸ್ವಂತ ಮನೆ ಅಥವಾ ನಿವೇಶನ ಇಲ್ಲದವರು. ವಾಸಕ್ಕೆ ಒಂದು ಚಿಕ್ಕ ಮನೆಯನ್ನು ಹೊಂದಿರದೆ ಇರುವವರು, ಸ್ವಂತ ನಿವೇಶನವೊಂದನ್ನು ಹೊಂದಿರದೆ ಇರುವವರು ಹೇಗೆ ತಾನೇ ವೈಯಕ್ತಿಕ ಶೌಚಾಲಯವನ್ನು ಕಟ್ಟಿಕೊಳ್ಳಲು ಸಾಧ್ಯ? ಆದ್ದರಿಂದ ಶೌಚಾಲಯದ ಪ್ರಶ್ನೆಯು ಅತ್ಯಂತ ಮೂಲಭೂತವಾದ ವಸತಿಯ ಪ್ರಶ್ನೆಯೊಂದಿಗೆ ಜೋಡಣೆಯಾಗಿರುವುದು ಸ್ಪಷ್ಟವಾಗುತ್ತದೆ. ಎಲ್ಲಾ ವಸತಿ ರಹಿತ ಕುಟುಂಬಗಳಿಗೆ ಮನೆ ನಿವೇಶನವನ್ನು ಒದಗಿಸಿದ ನಂತರವಷ್ಟೇ ಬಯಲು ಶೌಚದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ವೈಯಕ್ತಿಕ ಶೌಚಾಲಯಕ್ಕಿಂತಲೂ ಹೆಚ್ಚಾಗಿ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನಗಳನ್ನು ಒದಗಿಸುವುದು ಸರ್ಕಾರಗಳ ಆದ್ಯತೆ ಆಗಬೇಕಿದೆ.

ಈಗ ಸಧ್ಯ ಸ್ವಂತ ನಿವೇಶನ ಹೊಂದಿರುವ ಕುಟುಂಬಗಳಿಗೆ ಮಾತ್ರ ಸ್ವಂತ ಶೌಚಾಲಯವನ್ನು ಒದಗಿಸುವ ಗುರಿಯಿಟ್ಟುಕೊಂಡು ಹೊರಟರೂ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಗ್ರಾಮೀಣ ಕೆಲಸಗಾರರಿಗೆ ಉದ್ಯೋಗ ಒದಗಿಸುವ ಮೂಲ ಉದ್ದೇಶಕ್ಕೆ ಚ್ಯುತಿ ಉಂಟಾಗುತ್ತದೆ. ಒಂದು ಶೌಚಾಲಯ ನಿರ್ಮಾಣಕ್ಕೆ ನೀಡುವ ಅನುದಾನದಲ್ಲಿ ಶೇ.60 ರಷ್ಟು 'ಮೆಟೀರಿಯಲ್' ವೆಚ್ಚಕ್ಕೆ ಹೋಗಿ ಕೇವಲ ಶೇ.40 ರಷ್ಟು ಮಾತ್ರ ಕೂಲಿಕಾರರಿಗೆ ವೇತನವಾಗಿ ದೊರೆಯಲಿದೆ. ಇದೂ ಸಹ ಯೋಜನೆಯ ಮೂಲ ಉದ್ದೇಶಕ್ಕೆ ವ್ಯತಿರಿಕ್ತವಾಗಿದೆ.


ಶೌಚಾಲಯ ನಿರ್ಮಾಣ ಗ್ರಾಮೀಣ ಕೂಲಿಕಾರರಿಗೆ ಸಿಗಬೇಕಾದ ಕೆಲಸದ ಅವಕಾಶವನ್ನು ಕಡಿತಗೊಳಿಸುತ್ತದೆ. ಶೌಚಾಲಯ ನಿರ್ಮಾಣದಲ್ಲಿ ಕೂಲಿಕಾರರಿಗೆ ಶೌಚಾಲಯದ ಗುಂಡಿ ತೋಡುವ ಕೆಲಸವನ್ನು ಮಾತ್ರ ನೀಡಲಾಗುವದರಿಂದ ಹೆಚ್ಚು ಮಾನವ ದಿನಗಳನ್ನು ಅದು ಸೃಷ್ಟಿಸುವುದಿಲ್ಲ. ದಿನಗಟ್ಟಲೆ ನೂರಾರು ಜನಗಳಿಗೆ ಅದು ಕೆಲಸವನ್ನು ಒದಗಿಸುವುದಿಲ್ಲ.

ಶೌಚಾಲಯ ನಿರ್ಮಾಣದ ಫಲಾನುಭವಿಗಳಿಗೆ ಸಕಾಲದಲ್ಲಿ ಹಣ ಪಾವತಿಯಾಗುವುದಿಲ್ಲ. ಭ್ರಷ್ಟಾಚಾರಕ್ಕೆ ಹೆಚ್ಚು ಅವಕಾಶವಾಗುತ್ತದೆ. ಅಧಿಕೃತ ಲೆಕ್ಕದಂತೆ ಒಂದು ಶೌಚಾಲಯ ನಿರ್ಮಾಣಕ್ಕೆ ಫಲಾನುಭವಿಗಳಿಗೆ ಒಟ್ಟು ರೂ. 10,100 ಅನುದಾನ ಸಿಗಬೇಕಾಗಿದೆ. ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರೂ. 1,500 ನೀಡುತ್ತದೆ. ಕೇಂದ್ರ ಸರ್ಕಾರ ನಿರ್ಮಲ ಭಾರತ ಅಭಿಯಾನ ಮೂಲಕ ರೂ. 3,200 ಕೊಡುತ್ತದೆ. ಉದ್ಯೋಗ ಖಾತ್ರಿ ಯೋಜನೆ ರೂ. 5,400 ಅನ್ನು ಒದಗಿಸುತ್ತದೆ. ಆದರೆ ವಾಸ್ತವದಲ್ಲಿ ಫಲಾನುಭವಿಗಳಿಗೆ ಸಿಗುತ್ತಿರುವುದು ರೂ. 4,000 ಮಾತ್ರ. ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಿದ ಒಂದು ತಿಂಗಳಲ್ಲಿ ಪಿಡಿಓ ಗಳು ರೂ. 4,700 ಗಳ ಚೆಕ್ ನೀಡುತ್ತಾರೆ. ಚೆಕ್ ಪಡೆಯಲು ರೂ. 700 ಗಳನ್ನು ಪಿಡಿಓಗೆ ಕೊಡಲೇಬೇಕು. ಇದರಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿಗೂ ಪಾಲಿರುತ್ತದೆ. ಉಳಿದ ರೂ. 5,400 ಗಳಿಗೆ ಕತ್ತರಿ ಹಾಕುತ್ತಾರೆ. ಒಮ್ಮೆ ನಿರ್ಮಲ ಭಾರತ ಅಭಿಯಾನ ಮೂಲಕ ಅನುದಾನ ಪಡೆದವರಿಗೆ ಮತ್ತೆ ಉದ್ಯೋಗ ಖಾತ್ರಿ ಮೂಲಕ ಹಣ ಪಡೆಯಲು ಅವಕಾಶವಿಲ್ಲ ಎಂದು ಮೋಸ ಮಾಡುತ್ತಾರೆ. ಇದನ್ನು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಆಯುಕ್ತರ ಗಮನಕ್ಕೆ ತಂದರೆ ಶೌಚಾಲಯ ನಿರ್ಮಿಸಲು ಉದ್ಯೋಗ ಖಾತ್ರಿಯಲ್ಲಿ ಹಣ ನೀಡಲು ನಿರಾಕರಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಹೇಳುತ್ತಾರೆ. ಈ ಬಗ್ಗೆ ದೂರು ನೀಡಲು ಹೋದರೆ ಯಾರೂ ಸ್ಪಂಧಿಸುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ದೂರು ಸ್ವೀಕರಿಸಲು ಒಂಬಡ್ಸ್‌ಮನ್‌ಗಳೇ ಇಲ್ಲ! ■

ಮೋದಿ 'ವಾಲಾ' ರಾಜ್ಯ ಪಾಲ!

ಗುಜರಾತ್‌ನ ಶ್ರೀ ವಾಜುಭಾಯಿ ರೂಢಭಾಯಿ ವಾಲಾ ಇದೀಗ ಕರ್ನಾಟಕದ ನೂತನ ರಾಜ್ಯಪಾಲರು. ಯಥಾ ಸಂಪ್ರದಾಯದಂತೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾದ ಡಿ.ಹೆಚ್. ವಘೇಲಾ ರವರು 2014 ಸೆಪ್ಟಂಬರ್.2ರಂದು ಅವರಿಗೆ ಪ್ರಮಾಣ ವಚನ ಬೋಧಿಸಿದ್ದಾರೆ. ಈ 'ಸ್ವಗತ' ಸಮಾರಂಭದಲ್ಲಿ ಮುಖ್ಯಮಂತ್ರಿಯವರನ್ನೂ ಒಳಗೊಂಡು ಹಲವು ಸಚಿವರು ಹಾಜರಿದ್ದದ್ದು, ಶಿಷ್ಟಾಚಾರದ ಔಪಚಾರಿಕತೆಗೆ ಮಾತ್ರ. ಇದಕ್ಕೆ ಎರಡು ದಿನಗಳ ಮೊದಲೇ ರಾಜ್ಯಪಾಲರನ್ನು ನೇಮಿಸುವಾಗ ತಮ್ಮೊಂದಿಗೆ ಸಮಾಲೋಚಿಸಲಿಲ್ಲ ಎಂದು ಪ್ರತಿಭಟನೆಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಎತ್ತಿದ್ದು ಇದೇ ಹಿನ್ನೆಲೆಯಲ್ಲೇ. ಆದರೆ ನಿಜಕ್ಕೂ ಸಂಭ್ರಮವಿದ್ದದ್ದು ಬಿಜೆಪಿ ಪಾಳಯದಲ್ಲಿ!

ಅನಿಷ್ಟ ಸೂಚನೆಗಳು



▌ಎಸ್.ವೈ.ಗುರುಶಾಂತ್

ಅವರೆಲ್ಲಾ ಇಂತಹ ರಾಜ್ಯಪಾಲರ ಆಗಮನಕ್ಕೆ ತುದಿಗಾಲಲ್ಲೇ ಕಾದು ನಿಂತಿದ್ದರೇನೋ ಎಂಬಂತೆ, ತಮ್ಮ ಒಬ್ಬ ನಿಷ್ಠಾವಂತ ಕಾರ್ಯಕರ್ತನೊಬ್ಬ ಮನೆಗೆ ಬಂದಂತೆ ಸಂಭ್ರಮ ಪಟ್ಟರು. ಈ ರಾಜ್ಯಪಾಲರ ಆಗಮನದಿಂದಾಗಿ ವಿರೋಧ ಪಕ್ಷದ ಜಾಗದಲ್ಲಿ ಕುಳಿತಿರುವ ಬಿಜೆಪಿ ಶಕ್ತಿ ಕೇಂದ್ರದ ಸ್ಥಾನಕ್ಕೇರಿ ಬಿಟ್ಟಿದೆ ಎಂಬಂತೆ ಬೀಗುತ್ತಿದ್ದುದು ಮುಂದೆ ಸಂಭವಿಸಲಿರುವ ಕೆಸರೆರಚಾಟದ ರಾಜಕಾರಣದ ಸೂಚಕ. ಅದರ ಸಂಕೇತವಾಗಿ ಇಲ್ಲಿನ ಕಾಂಗ್ರೆಸ್ ಸರಕಾರಕ್ಕೆ ಹೇಗೆಲ್ಲಾ ಕಿರಿ ಕಿರಿ ಇಡಬಹುದು ಎಂದು ಬಿಜೆಪಿ ಬಹಿರಂಗವಾಗಿಯೇ ತನ್ನ ಲೆಕ್ಕಾಚಾರವನ್ನು ಬಿಚ್ಚಿಡತೊಡಗಿದೆ. ಈ ಕೂಡಲೇ ಅರ್ಕಾವತಿ ಲೇಔಟ್‌ನ ಡೀ-ನೋಟಿಫಿಕೇಷನ್ ವಿವಾದವನ್ನು ರಾಜ್ಯಪಾಲರ ಮುಂದೆ ಕೊಂಡೊಯ್ದು ರಂಪಾಟ ಮಾಡಲು ಸ್ಕೆಚ್ ಹಾಕಿದೆ. ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್‌ರವರು 'ಸಿದ್ಧರಾಮಯ್ಯಗೆ ಕಾದಿದೆ ಈಗ' ಎಂದು ಕತ್ತಿ ಝಳಪಿಸುತ್ತಾ ಓಡಾಡುತ್ತಿದ್ದಾರೆ. ಅಂತಹ ಯಾವುದೇ ಉದ್ದೇಶಕ್ಕೆ ರಾಜಭವನವನ್ನು ಬಳಸುವುದಿಲ್ಲವೆಂದು ಯಡಿಯೂರಪ್ಪನವರು ವಿಶೇಷವಾಗಿ ಸ್ಪಷ್ಟೀಕರಣ ನೀಡುತ್ತಿರುವುದರ ಔಚಿತ್ಯವೇನು?

ಶ್ರೀ ಹೆಚ್.ಆರ್. ಭರದ್ವಾಜ್ ರವರ ಅವಧಿ ಮುಗಿದು ಪ್ರಯಾಣಕ್ಕೆ ಸಿದ್ಧವಾಗುವ ಮೊದಲೇ ಇಲ್ಲಿಗೆ ಕೇರಳದ ಬಿಜೆಪಿ ನಾಯಕ ಓ. ರಾಜಗೋಪಾಲನ್ ರಾಜಭವನದೊಳಗೆ ಸೇರಲಿದ್ದಾರೆ ಎಂಬ ದಟ್ಟವಾದ ವದಂತಿ ಇತ್ತು. ಆದರೆ ಕೊನೆ ಗಳಿಗೆಯಲ್ಲಿ ಬದಲಾದುದು ಹೇಗೆ? ಬದಲಾವಣೆಯೆಂದರೆ ಬಿಜೆಪಿಯ ಗುಪ್ತ ಅಜೆಂಡಾವೇನೂ ಬದಲಾಗಿಲ್ಲ. ಬದಲಾವಣೆ ಆಗಿರುವುದು ಕೇವಲ ಹೆಸರಷ್ಟೇ. ಅಂ-ದರೆ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ರಾಜ್ಯಪಾಲರನ್ನು ನೇಮಿಸುವಾಗ ಆರ್. ಎಸ್.ಎಸ್‌ನ ಅಥವಾ ಪರಿವಾರಕ್ಕೆ ನಿಷ್ಠವಾಗಿರುವ, ರಾಜಕೀಯ ತಂತ್ರಗಾರಿಕೆಯಲ್ಲಿ ನಿಪುಣರಾಗಿರುವವರನ್ನೇ ನೇಮಿಸಲಾಗುತ್ತಿರುವುದು ಬಹುಸ್ಪಷ್ಟ. ಆ ಮೂಲಕ ಆ ರಾಜ್ಯ ಸರಕಾರಗಳ ಮೇಲೆ ತನ್ನ ನಿಯಂತ್ರಣ ಸಾಧಿಸಬೇಕು ಎಂಬುದರಲ್ಲಿ ಯಾವುದೇ ರಿಯಾಯಿತಿ ನೀಡುವ ಪ್ರಶ್ನೆಯನ್ನೇ ಆರ್.ಎಸ್.ಎಸ್. -ಬಿಜೆಪಿ ಪಕ್ಷ ಇರಿಸಿಕೊಂಡಿಲ್ಲ. ಹೀಗಾಗಿಯೇ ಬಿಜೆಪಿ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ವಿರೋಧ ಪಕ್ಷಗಳ ಸರಕಾರ ಇರುವಲ್ಲಿ,



ಅದರಲ್ಲೂ ಹಿಂದಿನ ಯು.ಪಿ.ಎ. ಸರಕಾರ ನೇಮಿಸಿದ್ದ ರಾಜ್ಯಪಾಲರನ್ನೆಲ್ಲಾ ಅವಧಿಯಿನ್ನೂ ಬಾಕಿ ಇರುವಾಗಲೇ ಕಿತ್ತೆಸೆಯುವ 'ಕರಸೇವೆ' ಯನ್ನು ಕೈಗೆತ್ತಿಕೊಂಡು ಝಾಡಿಸಿದರು. ಅವಧಿ ಮುಗಿದವರ ಸ್ಥಾನದಲ್ಲಿ ನಿಷ್ಠರನ್ನು ಸ್ಥಾಪಿಸಿದರು. ಅದರಲ್ಲಿ ಬಂದಿಳಿದವರು ಈ ವಾಲಾರವರು!

ಹೌದು! ಈ ರಾಜ್ಯಪಾಲ ವಾ.ರೂ.ವಾಲಾ ಯಾರು? ಅದೂ ಕರ್ನಾಟಕಕ್ಕೆ ಇವರ ಆಯ್ಕೆಯ ಅಗತ್ಯವಾದರೂ ಏನಿತ್ತು?

ಪುಟ 4 ಕ್ಕೆ

ಈ ವಾರ ....

ಪುಟ 3 ರಿಂದ

ನೇಮಕದ ಹಿಂದೆ

ವಾ.ರೂ.ವಾಲಾರವರು ಗುಜರಾತ್‌ನ ಒಬ್ಬ ಅತ್ಯಂತ ಹಿರಿಯ ರಾಜಕೀಯ ನಾಯಕ. ಬಿಜೆಪಿ ಸರಕಾರದಲ್ಲಿ ಮಂತ್ರಿಯಾಗಿ ನಗರಾಭಿವೃದ್ಧಿ, ಇಂಧನ–ವಿದ್ಯುತ್, ಕಂದಾಯ, ಸಾರಿಗೆ, ಕಾರ್ಮಿಕ ಖಾತೆಗಳು ಮುಖ್ಯವಾಗಿ ಹಣಕಾಸು ಮಂತ್ರಿಯಾಗಿ 18 ಬಾರಿ ಬಜೆಟ್ ಮಂಡಿಸಿ ದಾಖಲೆಯಾದವರು. ಕಾನೂನು ಅನುಭವಿಯಾಗಿ, ಸ್ಪೀಕರ್ ಆಗಿ,ಪಕ್ಷದ ರಾಜ್ಯ ಅಧ್ಯಕ್ಷರಾಗಿ ಹೊಣೆ ನಿರ್ವಹಿಸಿದವರು ಎಂದರೆ ಮೋದಿ ಸರಕಾರದಲ್ಲಿ ವಾಲಾ ಅವರ ಮಹತ್ವ, ಸ್ಥಾನ–ಮಾನ ನಿಮಗೆ ಅರ್ಥವಾದೀತು. ಇವಕ್ಕೆಲ್ಲಾ 'ಗರಿ ಇಟ್ಟಂತೆ' ಆರ್.ಎಸ್.ಎಸ್.ನಲ್ಲಿ ಜೀವನ ಆರಂಭಿಸಿದ್ದು ಅವರು ವಿದ್ಯಾರ್ಥಿಯಾಗಿರುವಾಗ ಬಾಲ ಸ್ವಯಂಸೇವಕನಾಗಿ. ಆ ಸಂಬಂಧ ಈಗಲೂ ಅಭಾಧಿತ. ಹೀಗೆ ನಮ್ಮ ರಾಜ್ಯದ ಜನರಿಗೆ ಸೇವೆಗೆಂದು ಸಿಕ್ಕಿರುವುದು ಒಬ್ಬ ನುರಿತ, ನಿಪುಣ, ಅದೃಶ್ಯ 'ಗಣವೇಷಧಾರಿ' ಸ್ವಯಂಸೇವಕ!

ಇಂತಹ ಸ್ವಯಂಸೇವಕನಿಗಾಗಿಯೇ ರಾಜ್ಯದ ಬಿಜೆಪಿಯ ನಾಯಕರು ಹಳಹಳಿಸುತ್ತಿದ್ದರು. ಅವರು ತಮಗೆ ಬೇಕಾದವರ ಹೆಸರುಗಳ ಪಟ್ಟಿಯನ್ನೂ ಮೋದಿಗೆ ನೀಡಿ ಬಂದಿದ್ದರು! ರಾಜ್ಯಾಧ್ಯಕ್ಷ ಪ್ರಲ್ಹಾದಜೋಷಿ ಯಾವ ಶಿಷ್ಠಾಚಾರ, ಅಳುಕೂ ಇಲ್ಲದೇ ಸಂವಿಧಾನಾತ್ಮಕ ಸ್ಥಾನಕ್ಕೆ ಆಗಲಿರುವ ನೇಮಕವನ್ನು ಒಂದು ಮುನ್ಸಿಪಾಲಿಟಿಗೆ ಮೆಂಬರನ್ನಾಗಿ ನೇಮಕ ಮಾಡುವ ರೀತಿಯಲ್ಲಿ ಬಹಿರಂಗವಾಗಿಯೇ ಈ ಸಂಗತಿಗಳನ್ನು 'ವದರಿದ್ದರು'. ಹೊಸ ರಾಜ್ಯಪಾಲ ಬರುತ್ತಿದ್ದಂತೆಯೇ ಅರ್ಕಾವತಿ ಬಡಾವಣೆಯ ಡೀ–ನೋಟಿಫಿಕೇಷನ್ ವ್ಯವಹಾರವನ್ನು ರಾಜ್ಯಪಾಲರ ಗಮನಕ್ಕೆ ತಂದು ತಕ್ಕ ಶಾಸ್ತಿ ಮಾಡಿಸುವುದಾಗಿ ಶೆಟ್ಟರ್ ಗುಡುಗಿದ್ದರು. ಹೀಗೆ ತಮ್ಮ ಡೀಲಿಂಗ್ ಅಜೆಂಡಾಗಳನ್ನು ಕಮಲದ ಪಾಳ್ಯ ಇರಿಸಿಕೊಂಡದ್ದು ನಿರೀಕ್ಷಿತವೇ. ಈ ಒಟ್ಟು ಪ್ರಸಂಗಗಳಲ್ಲಿ ಬಿಜೆಪಿ ನಾಯಕರ ತಲೆಯಲ್ಲಿ ಹರಿದಾಡುತ್ತಿದ್ದ ಹುಳುಗಳೆಲ್ಲಾವುಗಳ ಹೂರಣ ಒಂದೇ. ಹಿಂದೆ ತಮ್ಮ ಸರಕಾರವಿರುವಾಗ ಭರದ್ವಾಜ್‌ರವರ ಮೂಲಕ ಕಾಂಗ್ರೆಸ್ ಕಾಡಿದಂತೆ, ಈಗಲೂ ಕಾಂಗ್ರೆಸ್ ಸರಕಾರವನ್ನು ಪೀಡಿಸಲು ಒಬ್ಬ ಸಮರ್ಥ ಕಾರ್ಯಕರ್ತ ಬೇಕು ಎಂದು. ರಾಜಭವನವೇ ತಮ್ಮ ರಾಜಕೀಯ ತಂತ್ರ ಹೆಣೆಯುವ ಕಛೇರಿಯಾಗಬೇಕು ಎಂದು ಅಥವಾ ಕೇಶವಶಿಲ್ಪದ ಮಂತ್ರ ಜಾರಿಗೊಳಿಸುವ ಯಂತ್ರ ಇವರಾಗಿರಬೇಕು ಎಂದು. ಅದಕ್ಕೆಂದೇ ಹಿಂದಿನ ರಾಜ್ಯಪಾಲರ ಬಗ್ಗೆ, ಸ್ಥಾನದ ಬಗ್ಗೆ ಇವರಾಡಿದ ನೀತಿ ಮಾತುಗಳನ್ನು ಜನರಿಗೆ ಮರೆಸಿ ಬಿಟ್ಟಿದ್ದಾರೆ?

ಇಲ್ಲಿ ಬರುವ ಪ್ರಶ್ನೆಯೆಂದರೆ: ನೆನ್ನೆಯವರೆಗೂ ಅತ್ಯಂತ ಸಕ್ರಿಯ ರಾಜಕಾರಣಿಯಾಗಿದ್ದವರನ್ನು, ಅದರಲ್ಲೂ ಅಧಿಕಾರದಲ್ಲಿರುವ ಪಕ್ಷಕ್ಕೆ, ಆಳುವ ಸರಕಾರಕ್ಕೆ, ಪ್ರಧಾನಿಯಾಗಿರುವ ಮೋದಿಗೆ (ಸಂವಿಧಾನೇತರ ಶಕ್ತಿಯಾಗಿರುವ ಸಂಘಕ್ಕೆ) ಕಡು ನಿಷ್ಠರಾಗಿರುವವರನ್ನು ರಾಜ್ಯಪಾಲರನ್ನಾಗಿ ನೇಮಿಸಬಹುದೇ? ಅದೂ ವಿರೋಧ ಪಕ್ಷದ ಸರಕಾರವಿರುವಲ್ಲಿಗೆ?

ನಮ್ಮ ಸಂವಿಧಾನದ ಕಲಮು 153 ಗವರ್ನರ್ ಬಗ್ಗೆ ಹೇಳುತ್ತದೆ. 154ನೇ ಕಲಮು ಅವರ ಅಧಿಕಾರಗಳನ್ನು ವಿವರಿಸಿದರೆ 155 ರಾಷ್ಟ್ರಪತಿಗಳಿಂದಾಗುವ ನೇಮಕದ ಬಗ್ಗೆ ಹೇಳುವುದು. ಕಲಂ 156 ಅವರ ಅವಧಿಯನ್ನು 5 ವರ್ಷವೆಂದೂ ಆದರೆ 'ರಾಷ್ಟ್ರಪತಿ ಬಯಸುವವರೆಗೂ ಮಾತ್ರ ಅಧಿಕಾರದಲ್ಲಿ ಇರಬಹುದು' ಎಂದು ಹೇಳುತ್ತದೆ. ಸಂವಿಧಾನದ ರಕ್ಷಣೆ, ಅದರ ಸಮರ್ಥನೆ, ಕಾನೂನು–ಸುವ್ಯಸ್ಥೆ ಕಾಪಾಡುವುದು, ಪ್ರಭುತ್ವದ ಹೆಸರಿನಲ್ಲಿ ಜನರಿಗೆ ಸೇವೆ ಸಲ್ಲಿಸುವುದು ಮುಖ್ಯ ಹೊಣೆಯನ್ನಾಗಿ ಸೂಚಿಸಿದೆ.

ನಕಾರಾತ್ಮಕ ಪಾತ್ರ

ಆದರೆ ಈ ರಾಜ್ಯಪಾಲರ ಹುದ್ದೆ, ಅವರು ವಹಿಸುತ್ತಿರುವ ನಕಾರಾತ್ಮಕ ಪಾತ್ರ ಅತ್ಯಂತ ತೀವ್ರವಾದ ಟೀಕೆಗೂ ಗುರಿಯಾಗಿದೆ. ರಾಜ್ಯಪಾಲರೆಂದರೆ 'ಕೇಂದ್ರದ ಏಜೆಂಟ್, ಆಳುವ ಪಕ್ಷದ ಏಜೆಂಟ್' ಎನ್ನುವವರೆಗೂ ತೀವ್ರ ವಿಮರ್ಶೆಗೂ ಈಡಾಗಿದೆ. ಈ ಸಂವಿಧಾನಾತ್ಮಕ ಸ್ಥಾನವನ್ನು ಕೇಂದ್ರದಲ್ಲಿ ಆಳುವ ಪಕ್ಷಗಳು ಎಡ ಪಕ್ಷಗಳನ್ನೂ ಸೇರಿಸಿ ತಮಗಾಗದ ವಿರೋಧ ಪಕ್ಷಗಳ ಮೇಲೆ ರಾಜಕೀಯ ಸೇಡಿಗಾಗಿ ಮನಬಂದಂತೆ ದುರುಪಯೋಗ ಪಡಿಸಿಕೊಂಡಿವೆ. 1957 ರಿಂದ 59ರಲ್ಲಿ ಕೇರಳದಲ್ಲಿ ಜನರಿಂದ ಆಯ್ಕೆಯಾಗಿದ್ದ ಮೊಟ್ಟ ಮೊದಲ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಇ.ಎಂ.ಎಸ್ ರವರ ಸರಕಾರವನ್ನು ಉರುಳಿಸಿದ್ದು ಚರಿತ್ರೆಯಲ್ಲಿ ಒಂದು ಕರಾಳ ಅಧ್ಯಾಯವಾಗಿದೆ.

ಬೇಡವಾದ ಸೂಚನೆಗಳು

ಮುಂದೆ ಇಂತಹ ಅನೇಕ ಪ್ರಕರಣಗಳು ರಾಜ್ಯಪಾಲರ ಮೂಲಕ ಸಂವಿಧಾನದ ಕಲಂ 356 ನ್ನು ಬಳಸಿ ಚುನಾಯಿತ ಸರಕಾರಗಳನ್ನು ಉರುಳಿಸುವ ಕುಕೃತ್ಯಗಳು ದೇಶ್ಯಾದ್ಯಂತ ಎಗ್ಗಿಲ್ಲದೇ ನಡೆದವು. ಇದಲ್ಲದೇ ಸಂಪನ್ಮೂಲಗಳು, ಅಧಿಕಾರ ಹಂಚಿಕೆ, ಸಂಬಂಧಗಳ ಪುನರ್‌ರಚನೆ ಆಗ್ರಹಗಳು, ಹೀಗೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಇಂತಹ ಘರ್ಷಣೆಯ ಸನ್ನಿವೇಶದ ಹಿನ್ನೆಲೆಯಲ್ಲಿ ನೇಮಿಸಲ್ಪಟ್ಟ ನ್ಯಾಯಮೂರ್ತಿ.ಆರ್. ಎಸ್.ಸರ್ಕಾರಿಯಾ ನೇತೃತ್ವದ ಆಯೋಗವು 1988ರಲ್ಲಿ ನೀಡಿದ ವರದಿಯಲ್ಲಿ ರಾಜ್ಯಪಾಲರ ವಿಷಯದಲ್ಲಿ ಸ್ಪಷ್ಟ ಮಾರ್ಗಸೂಚಿ ಶಿಫಾರಸುಗಳನ್ನು ನೀಡಿದೆ. ಮೊದಲನೆಯದಾಗಿ ರಾಜ್ಯಪಾಲನನ್ನಾಗಿ ಆರಿಸುವಾಗ ಮತ್ತು ನೇಮಿಸುವಾಗ ಆತ ಸಾಮಾಜಿಕ ಜೀವನದಲ್ಲಿ ಗಣ್ಯನಾಗಿರಬೇಕು. ಎರಡನೆಯದಾಗಿ, ಆತ ರಾಜ್ಯದ ಹೊರಗಿನ ವ್ಯಕ್ತಿಯಾಗಿದ್ದು ರಾಜ್ಯದ ರಾಜಕಾರಣದಲ್ಲಿ ಆಳ ಸಂಬಂಧಗಳನ್ನು ಹೊಂದಿರಬಾರದು. ಮೂರನೆಯದಾಗಿ, ಸಾಮಾನ್ಯವಾಗಿ ರಾಜಕೀಯದಲ್ಲಿ ಬಹು ಮಹತ್ವದ ಪಾತ್ರವನ್ನು ಹೊಂದಿರಬಾರದು. ವಿಶೇಷವಾಗಿ ನೇಮಕವಾಗುವ ಅವಧಿಯ ಹಿಂದೆ ಸಕ್ರಿಯ ರಾಜಕಾರಣದಲ್ಲಿ ಇರಲೇಬಾರದು. ಆಯ್ಕೆ ಮಾಡುವಾಗ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಿಗೆ ಆದ್ಯತೆಯನ್ನು ನೀಡಬೇಕು ಎಂದೂ ಹೇಳಿದೆ.

ಇಷ್ಟು ಮಾತ್ರವಲ್ಲ, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಕ್ಕೆ ಸೇರಿದ ಯಾವುದೇ ವ್ಯಕ್ತಿಯನ್ನು, ಅದರಲ್ಲೂ ವಿರೋದ-ಪಕ್ಷಗಳು ಆಡಳಿತ ನಡೆಸುವ ರಾಜ್ಯಗಳಿಗೆ ರಾಜ್ಯಪಾಲರನ್ನಾಗಿ ನೇಮಿಸಲೇ ಕೂಡದು ಎಂದೂ ಜಸ್ಟೀಸ್ ಸರ್ಕಾರಿಯಾ ಆಯೋಗ ಸೂಚಿಸಿದೆ. ಆಯಾ ರಾಜ್ಯದ ಮುಖ್ಯಮಂತ್ರಿಯೊಂದಿಗೆ ಸಮಾಲೋಚಿಸಿಯೇ ನೇಮಿಸಬೇಕು ಎಂದೂ ಹೇಳಿದೆ. ರಾಜ್ಯಪಾಲರ ಕಾರ್ಯಾವಧಿ ಇತ್ಯಾದಿಗಳ ಬಗ್ಗೆ ಮುಂದೆ 2002ರಲ್ಲಿ ಜ.ವೆಂಕಟಾಚಲಯ್ಯ ಆಯೋಗ ಮತ್ತು 2010ರಲ್ಲಿ ಪಂಚ್ಚಿ ಆಯೋಗಗಳು ಇನ್ನಷ್ಟು ನಿರ್ದಿಷ್ಟ ಸೂಚನೆಗಳನ್ನು ನೀಡಿವೆ.

ಇಂತಹ ಎಚ್ಚರಗಳನ್ನು ಪ್ರಜ್ಞಾಪೂರ್ವಕವಾಗಿ ಉಲ್ಲಂಘಿಸುತ್ತಲೇ ಬಂದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಸರ್ವಾಧಿಕಾರಿ ಕೇಂದ್ರ ಸರಕಾರಗಳು ಬಗೆದ ಕೇಡುಗಳು, ಕಹಿ ಅನುಭವಗಳ ಹಲವಾರು ಸಂಗತಿಗಳನ್ನು ಎದುರಿಗಿಟ್ಟು ನೋಡಿದರೆ ಮೋದಿಯವರ ಸರಕಾರ ಈಗಲೂ ಏನು ಮಾಡಲು ಹೊರಟಿದೆ ಎಂಬುದು ತಿಳಿಯುತ್ತದೆ. ತಮ್ಮ ನಿಷ್ಠರನ್ನೇ ನೇಮಿಸಿ ರಾಜಭವನವನ್ನು ರಾಜಕೀಯ ಆಡುಂಬೋಲದ ಕಣವಾಗಿಸುವ ಹುನ್ನಾರ ನಿಚ್ಚಳ. ಅಂದರೆ ರಾಜಭವನವನ್ನು ಘಂಟಾಘೋಷವಾಗಿ ರಾಜಕೀಯ ಭವನವನ್ನಾಗಿಸಿ ಅದರ ಸಂವಿಧಾನಾತ್ಮಕ ಘನತೆಯನ್ನು ಮಣ್ಣು ಮುಕ್ಕಿಸುವುದು ಎಂದರ್ಥ.

ಅನಾಹುತಕಾರಿ ಕ್ರಮಗಳು

ಇತ್ತೀಚೆಗೆ ಕರ್ನಾಟಕವನ್ನೂ ಒಳಗೊಂಡು ಇತರೆ ರಾಜ್ಯಗಳಿಗೆ ಸಕ್ರಿಯ ರಾಜಕಾರಣಿಗಳನ್ನು ನೇಮಕ ಮಾಡುವಾಗ ಕೈಗೊಂಡ ನಿರ್ಧಾರ ಅತ್ಯಂತ ಸಂಕುಚಿತ ರಾಜಕೀಯ ಹಿತಾಸಕ್ತಿಯಿಂದ ಕೂಡಿದ್ದು ಪ್ರಜಾಸತ್ತಾತ್ಮಕ, ಒಕ್ಕೂಟದ ವ್ಯವಸ್ಥೆಗೆ ಗಂಡಾಂತರಕಾರಿಯಾಗಿವೆ. ಅವಧಿ ಮುಗಿಯುವ ಮೊದಲೇ ಹಲವಾರು ರಾಜ್ಯಗಳಲ್ಲಿನ ರಾಜ್ಯಪಾಲರನ್ನು ಕಿತ್ತೆಗೆಯುವ ವರಸೆ, ಒತ್ತಡಗಳು, ಸೃಷ್ಟಿಸಿದ ಇರುಸು ಮುಜುಗರದ ಪ್ರಸಂಗಗಳು ಮೋದಿ ಸರಕಾರ ಒಂದು ಸಂವಿಧಾನಾತ್ಮಕ ಸ್ಥಾನವನ್ನು ಎಷ್ಟು ನಿಕೃಷ್ಟವಾಗಿ ನಡೆಸಿ ಕೊಳ್ಳಬಲ್ಲುದು ಎಂಬುದನ್ನು ತೋರಿಸಿದೆ. ತಮ್ಮ ಈ ಹೀನ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಕಾಂಗ್ರೆಸ್ ಹೀಗೆ ಮಾಡಿತ್ತಲ್ಲಾ ಎಂದು ಹೇಳುತ್ತಿದೆ. ಅಂದರೆ ಕಾಂಗ್ರೆಸ್‌ಗಿಂತ ತಾವು ಭಿನ್ನರು ಎಂದು ಬಿಜೆಪಿ–ಚೆಡ್ಡಿಪಡೆ ಕೊಚ್ಚಿಕೊಳ್ಳುವುದರಲ್ಲಿ ಏನರ್ಥವಿದೆ?

ಮೋದಿ ಸರಕಾರ ಅಧಿಕಾರಕ್ಕೆ ಬಂದಂದಿನಿಂದಲೂ ನಿರಂತರವಾಗಿ ಸಂವಿಧಾನದ ಮೇಲೆ, ನ್ಯಾಯಾಂಗ, ಕಾರ್ಯಾಂಗ, ಸಂವಿಧಾನಾತ್ಮಕ ಸಂಸ್ಥೆಗಳ ಮೇಲೆ ಒಂದಿಲ್ಲೊಂದು ಬಗೆಯಲ್ಲಿ ಧಾಳಿ ಮಾಡುತ್ತಲೇ ಇದೆ. ಅವುಗಳನ್ನು ಸಂಕುಚಿತ ರಾಜಕೀಯದ ವಿಷಾನಿಲದಿಂದ ತೋಯಿಸಿ ದುರ್ಬಲಗೊಳಿಸುವುದು ಅದರ ಗುರಿ ಇದ್ದಂತೆ ಕಾಣುತ್ತದೆ. ಕೇರಳದ ರಾಜ್ಯಪಾಲರನ್ನಾಗಿ ಸುಪ್ರಿಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಸಥಾಸಿವಂ ರವರ ನೇಮಕ ನ್ಯಾಯಾಂಗವನ್ನು ದುರ್ಬಲಗೊಳಿಸುವ, ರಾಜಕೀಯ ಅಧಿಕಾರದ ದುರಾಸೆ–ಲಾಲಸೆಗೆ ನ್ಯಾಯಾಂಗವನ್ನು ಈಡು ಮಾಡುವ ಕೇಂದ್ರದ ಕುತಂತ್ರಕ್ಕೆ ನಿದರ್ಶನ. ಅತ್ಯಂತ ಉನ್ನತ ಹುದ್ದೆಯಲ್ಲಿದ್ದ ವ್ಯಕ್ತಿಯೊಬ್ಬ ಇಂತಹ ಸ್ಥಾನ ಒಪ್ಪಿಕೊಳ್ಳುವುದೇ ಘನತೆಗೆ ಕೇಡು ಮತ್ತು ಅಧಿಕಾರಕ್ಕೆ ಹಪಾಹಪಿಸುವ ದುರಾಸೆಯ ಪ್ರತೀಕ. ಕೇರಳ ಹೈಕೋರ್ಟ್‌ನ ನ್ಯಾಯವಾದಿಗಳ ಸಂಘದ ಎಲ್ಲಾ 177 ಸದಸ್ಯರುಗಳು 'ಈ ನೇಮಕವನ್ನು ಅಂಗೀಕರಿಸಬಾರದು, ಅದು ನ್ಯಾಯಾಂಗವನ್ನು ಕೆಟ್ಟದಾಗಿ ಪ್ರಭಾವಿಸಲಿದೆ' ಎಂದು ಮಾನ್ಯ ರಾಷ್ಟ್ರಪತಿಗಳಿಗೆ ಮನವಿ ನೀಡಿದರೂ ಕೇಳದ ಕೇಂದ್ರ ಸರಕಾರ ಮತ್ತು ಹಿಂದೆ ಸರಿಯದ ಈ ನ್ಯಾಯಮೂರ್ತಿಯವರ ವರ್ತನೆಗೆ ಏನೆನ್ನ ಬೇಕು? ಇವರು ಸುಪ್ರಿಂಕೋರ್ಟ್‌ನಲ್ಲಿರುವಾಗ ಗುಜರಾತ್‌ನ ಸೊಹ್ರಾಬುದ್ದೀನ್ ಕೊಲೆ ಕೇಸ್‌ನಲ್ಲಿ ಈಗಿನ ಬಿಜೆಪಿ ಅಖಿಲ ಭಾರತ ಅಧ್ಯಕ್ಷ ಅಮಿತ್ ಶಾನಿಗೆ ಅನುಕೂಲಕರವಾಗಿ ನೀಡಿದ ತೀರ್ಪಿಗೆ ನೀಡಿದ ಪ್ರತಿಫಲವಿದು ಎಂದು ಎಲ್ಲೆಡೆ ಗಟ್ಟಿಯಾಗಿ ಕೇಳಿಬರುತ್ತಿರುವ ತೀವ್ರ ಆರೋಪವನ್ನು ನಿರ್ಲಕ್ಷಿಸಲಾದೀತೆ?

ರದ್ದಾಗಬೇಕಾದ ಹುದ್ದೆ

ಇಷ್ಟೆಲ್ಲಾ ಆದ ಮೇಲೆ ಉಳಿಯುವ ಒಂದು ಮುಖ್ಯ ಪ್ರಶ್ನೆಯೆಂದರೆ, ಈ ರಾಜ್ಯಪಾಲರ ಹುದ್ದೆ ಅವಶ್ಯಕವಿದೆಯೇ? ಪ್ರಜಾಸತ್ತಾತ್ಮಕ, ಒಕ್ಕೂಟ ತತ್ವದ ಆಧಾರದಲ್ಲಿನ ಈ ವ್ಯವಸ್ಥೆಯಲ್ಲಿ ಸಂವಿಧಾನ ಬದ್ಧವಾಗಿ ಜನತೆಯಿಂದ ಚುನಾಯಿತವಾದ ಸರಕಾರ ಮತ್ತು ಶಾಸಕಾಂಗ ಇರುವಾಗ ರಾಜ್ಯಪಾಲ ಹುದ್ದೆ ಮತ್ತು ಅಂತಹ ವ್ಯವಸ್ಥೆ ಇರುವುದೇ ಅನಗತ್ಯ. ಕೇಂದ್ರ ಸರಕಾರ ರಾಜ್ಯಗಳ ಅಧಿಕಾರದಲ್ಲಿ ಹಸ್ತಕ್ಷೇಪ ಮಾಡಲೆಂದೇ ಈ ಹುದ್ದೆ, ವ್ಯವಸ್ಥೆ ರೂಪಿಸಲಾಗಿದೆ. ರಾಜಕೀಯ ನಿರಾಶ್ರಿತರ ಶಿಬಿರವೂ ಆಗಿರುವ, ಜನರ ಹೆಗಲಿಗೆ ಭಾರವಾಗಿರುವ ಈ ರಾಜಭವನ ಮತ್ತು ರಾಜ್ಯಪಾಲರ ಹುದ್ದೆಯನ್ನು ಈ ಕೂಡಲೇ ರದ್ದು ಮಾಡುವುದು ಆಗಬೇಕಾದ ಕೆಲಸ.

●

ವಾಚಕರ ವಾಣಿ

ಸಂಪಾದಕರೇ,

ಹಾವೇರಿಯಿಂದ ರುದ್ರಪ್ಪ ಜಾಬಿನ್ ಮಾಡುವ ನಮಸ್ಕಾರಗಳು.

ನೀವು ಕಳಿಸಿರುವ ಜನಶಕ್ತಿ ಪತ್ರಿಕೆಯ 2014ರ ಸ್ವಾತಂತ್ರೋತ್ಸವದ ವಿಶೇಷ ಸಂಚಿಕೆ ನಮಗೆ ಪೋಸ್ಟ್ ಮೂಲಕ ಮುಟ್ಟಿರುತ್ತದೆ. ಅದನ್ನು ನೋಡಿ, ತಿರುವು ಹಾಕುತ್ತಿರುವಾಗ ನಮಗೆ ಬಹಳವಾಗಿ ಹಿಡಿಸಿರುತ್ತದೆ ಮತ್ತು ವಿಷಯಗಳು ಮುಖ್ಯವಾಗಿರುತ್ತವೆ. ಪತ್ರಿಕೆಯ ಮುಖಪುಟವೂ ಕೂಡಾ ಅಂದವಾಗಿ ಮೂಡಿ ಬಂದಿರುತ್ತದೆ.

ತಮ್ಮಗಳವರ ಈ ಪ್ರಯತ್ನವು ಯಶಸ್ವಿ ಆಗಿರುವುದು ನಮಗೆ ಸಂತಸವನ್ನು ತಂದಿರುತ್ತದೆ.

– ರುದ್ರಪ್ಪ ಜಾಬಿನ


ಬೆಂಗಳೂರು



ಮಂಗಳೂರು

ಮರುಕುಂಬಿ: ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ರಾಜ್ಯವ್ಯಾಪಿ ಪ್ರತಿಭಟನೆ

ಗಂಗಾವತಿ ತಾಲೂಕಿನ ಮರುಕುಂಬಿಯಲ್ಲಿ ಇತ್ತೀಚೆಗೆ ದಲಿತರ ಮೇಲೆ ಸವರ್ಣಿಯರ ದೌರ್ಜನ್ಯ ಮರುಕಳಿಸಿದ್ದು, ದಲಿತರ ಕೇರಿಗೆ ನೂರಾರು ಸಂಖ್ಯೆಯಲ್ಲಿ ನುಗ್ಗಿ ಕಲ್ಲು, ದೊಣ್ಣೆಗಳಿಂದ ದಲಿತರ ಮೇಲೆ, ದಲಿತ ಮಹಿಳೆಯರ ಮೇಲೆ, ಸಿಪಿಐ(ಎಂ) ಪಕ್ಷದ ಮುಖಂಡರಾದ ಗಂಗಾಧರಸ್ವಾಮಿ ಅವರ ಮೇಲೆ ಹಲ್ಲೆ ಮಾಡಿ ಗಾಯಗೊಳಿಸಿದ್ದು, ದಲಿತರ ಗುಡಿಸಲುಗಳಿಗೆ ಬೆಂಕಿಹಚ್ಚಿ ಸುಟ್ಟುಹಾಕಿದ್ದು ಈ ಎಲ್ಲವನ್ನು ಜನಶಕ್ತಿಯ ಓದುಗರಿಗೆ ತಿಳಿದ ವಿಷಯವಾಗಿದೆ.

ಗಾಯಗೊಂಡವರನ್ನು ಸರಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಆರೋಪಿಗಳಲ್ಲಿ ಕೆಲವರನ್ನು ಮಾತ್ರ ಬಂಧಿಸಲಾಗಿದೆ. ಪ್ರಮುಖ ಆರೋಪಿಗಳನ್ನು ಇದುವರೆಗೂ ಬಂಧಿಸಿಲ್ಲ. ಬಂಧನ ತಪ್ಪಿಸಿಕೊಂಡು ಅಕ್ಕಪಕ್ಕದ ಗ್ರಾಮಗಳಲ್ಲಿ ತಲೆ ಮರೆಸಿಕೊಂಡಿರುವ ಆರೋಪಿಗಳು ಬಹಿರ್ದೆಸೆಗಾಗಿ ಹೋಗುವ ಮರುಕುಂಬಿಯ ದಲಿತ ಮಹಿಳೆಯರಿಗೆ ಬೆದರಿಕೆ ಹಾಕುತ್ತಿದ್ದಾರೆ. ಪೊಲೀಸರು ದಲಿತರ ಮೇಲೆ, ದಲಿತ ಮುಖಂಡರ ಮೇಲೆ ಸುಳ್ಳು ಕೌಂಟರ್ ಕೇಸ್ ದಾಖಲು ಮಾಡಿದ್ದಾರೆ.

ಕಳೆದ ಎರಡು ತಿಂಗಳಿನಿಂದ ಗ್ರಾಮದಲ್ಲಿ ದಲಿತರಿಗೆ ಕ್ಷೌರದ ಅಂಗಡಿಗಳಲ್ಲಿ ಪ್ರವೇಶ ನಿರಾಕರಿಸಿ, ಸಾಮಾಜಿಕ ಬಹಿಷ್ಕಾರ ಹಾಕಿದ ಗ್ರಾಮದ



ಮೈಸೂರು

ಸವರ್ಣಿಯ ಪುಂಡರ ವಿರುದ್ಧ ಪೊಲೀಸರು ದೃಢವಾದ ಕ್ರಮ ಜರುಗಿಸದಿದ್ದುದರಿಂದ ಗ್ರಾಮದಲ್ಲಿ ಮತ್ತೆ, ಮತ್ತೆ ದೌರ್ಜನ್ಯ ಮರುಕಳಿಸುತ್ತಿದೆ. ದಲಿತ ಕೂಲಿಕಾರರಿಗೆ ಗ್ರಾಮದಲ್ಲಿ ಕೆಲಸ ನಿರಾಕರಿಸಿ ಕಿರುಕುಳ ನೀಡಲಾಗುತ್ತಿದೆ.

ಈ ನಿಟ್ಟಿನಲ್ಲಿ ಸರ್ಕಾರದ ತುರ್ತು ಮಧ್ಯಪ್ರವೇಶ ಹಾಗು ಸೂಕ್ತ ಪರಿಹಾರದ ಕ್ರಮಗಳಿಗಾಗಿ ಆಗ್ರಹಿಸಿ ಪೊಲೀಸ್ ಇಲಾಖೆ ವೈಪಲ್ಯವನ್ನು ಖಂಡಿಸಿ ಸಿಪಿಐ(ಎಂ) ರಾಜ್ಯ ಸಮಿತಿಯು ನೀಡಿದ ಕರೆ–ಯಂತೆ ಸಪ್ಟೆಂಬರ್ 11 ರಂದು ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆದಿವೆ.

ಕೊಪ್ಪಳ ಎಸ್‌ಪಿ ಕಚೇರಿ ಮುಂದೆ ಪ್ರತಿಭಟನೆ

ಸಪ್ಟೆಂಬರ್ 11, 2014 ರಂದು ಗುರುವಾರ ಕೊಪ್ಪಳದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಮಂಗಳೂರು: ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ

ಗಂಗಾವತಿ ತಾಲೂಕಿನ ಮರುಕುಂಬಿ ಗ್ರಾಮದಲ್ಲಿ ದಲಿತರಿಗೆ ಕ್ಷೌರ ನಿರಾಕರಣೆ, ದಲಿತರ ಮೇಲೆ ಹಲ್ಲೆ, ದಲಿತರ ಮನೆಗೆ ಬೆಂಕಿ ಹಚ್ಚಿದ್ದನ್ನು ಪ್ರತಿಭಟಿಸಿ ಹಾಗೂ ದೌರ್ಜನ್ಯಕಾರರ ಮೇಲೆ "ದಲಿತರ ಮೇಲೆ ದೌರ್ಜನ್ಯ ತಡೆ ಕಾಯ್ದೆ" ಹಾಗೂ ಇತರ ಕಾಯ್ದೆಗಳನ್ವಯ ಕೂಡಲೇ ಪ್ರಕರಣ ದಾಖಲಿಸಿ ಸರಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಸೆಪ್ಟೆಂಬರ್ 11ರಂದು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಸರಕಾರವು ದೌರ್ಜನ್ಯ ನಡೆಸಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸದೆ, ದೌರ್ಜನ್ಯಕ್ಕೆ ಒಳಗಾದ ದಲಿತರ ಮೇಲೆಯೇ ಪ್ರಕರಣ ದಾಖಲಿಸಿದ್ದನ್ನು ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿಮಂಡಳಿ ಸದಸ್ಯ ವಸಂತ ಆಚಾರಿ ಖಂಡಿಸಿದರು. ಸಮಾಜವಾದಿ ಹಾಗೂ ಅಹಿಂದ ಚಳುವಳಿ ಹಿನ್ನೆಲೆಯ ಮುಖ್ಯಮಂತ್ರಿ ಇದ್ದಾಗಲೂ, ದಲಿತರ ಮೇಲೆ ದೌರ್ಜನ್ಯ ನಡೆಸಿದವರನ್ನು ಬಂಧಿಸಿ ಕ್ರಮ ಕೈಗೊಳ್ಳದೆ ಇರುವುದು ಖಂಡನೀಯ ಎಂದು ಅವರು ತಿಳಿಸಿದರು.

ಸಮುದಾಯ ಸಂಘಟನೆಯ ವಲಯ ಸಂಚಾಲಕ ವಾಸುದೇವ ಉಚ್ಚಿಲ ಅವರು ಕೂಡಾ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಮಂಗಳೂರು ನಗರ ಪಾಲಿಕೆಯ ಸಿಪಿಐ(ಎಂ) ಸದಸ್ಯ ದಯಾನಂದ ಶೆಟ್ಟಿ ಧನ್ಯವಾದವಿತ್ತರು. ಜಿಲ್ಲಾ ಸಮಿತಿ ಸದಸ್ಯ ಜಯಂತಿ ಬಿ. ಶೆಟ್ಟಿ ಅಲ್ಲದೆ ಸಿಪಿಐ(ಎಂ) ಪಕ್ಷದ ವಲಯ ಸಮಿತಿ ಸದಸ್ಯರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕುಂದಾಪುರದಲ್ಲಿ ಖಂಡನಾ ಪ್ರದರ್ಶನ

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ಸೆಪ್ಟೆಂಬರ್ 12 ರಂದು ಶಾಸ್ತ್ರಿ ಸರ್ಕಲ್‌ನಲ್ಲಿ ಸಿಪಿಐ(ಎಂ)ನ ಪ್ರತಿಭಟನೆ ನಡೆದಿದೆ. ಜಿಲ್ಲಾ ಕಾರ್ಯದರ್ಶಿ ಕೆ. ಶಂಕರ್, ಮುಖಂಡರಾದ ಎಚ್. ನರಸಿಂಹ, ಮಹಾಬಲ ವಡೇರ ಹೋಬಳಿ, ಸುರೇಶ್ ಕಲ್ಲಾಗರ ಮುಂತಾದವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ದಲಿತರ ಮೇಲಿನ ಹಲ್ಲೆಯನ್ನು ಖಂಡಿಸಲಾಗಿದೆ.

ಬಳ್ಳಾರಿಯಲ್ಲಿ ಪ್ರತಿಭಟನೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಳ್ಳಾರಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬಳ್ಳಾರಿಯ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು. ನೊಂದು ಬೆಂದ ದಲಿತರಿಗೆ ನ್ಯಾಯ ನೀಡಲು ರಾಜ್ಯ ಸರ್ಕಾರ ಹಾಗೂ ಪೋಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು. ಬಸವರಾಜ್ ಪಾಲ್ಗೊಂಡಿದ್ದರು. ಪಕ್ಷದ ಜಿಲ್ಲಾ ಮುಖಂಡರಾದ ಆರ್.ಭಾಸ್ಕರರೆಡ್ಡಿ, ವಿಶ್ವನಾಥಸ್ವಾಮಿ, ಎಂ.ಜಂಬಯ್ಯ ನಾಯಕ್, ವಿ.ಎಸ್.ಶಿವಶಂಕರ, ಹುಳ್ಳಿ ಉಮೇಶ್, ಗಾಳಿ ಬಸವರಾಜ್, ಗಾದಿಲಿಂಗಪ್ಪ, ಗೋಪಾಲ್.ಎಂ, ದರಗಪ್ಪ, ಮುಂತಾದವರು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಆರ್. ಎಸ್. ಬಸವ ರಾಜ್ ನೇತೃತ್ವ ವಹಿಸಿದ್ದರು.

ಬೆಂಗಳೂರಿನಲ್ಲಿ ಪ್ರತಿಭಟನಾ ಪ್ರದರ್ಶನ

ರಾಜಧಾನಿ ಬೆಂಗಳೂರಿನ ಮೈಸೂರು ಬ್ಯಾಂಕ್

ಪುಟ 10 ಕ್ಕೆ


ಮಂಡ್ಯ



ಪಶ್ಚಿಮ ಬಂಗಾಳ : ಮಮತಾ ಬ್ಯಾನರ್ಜಿ ಮತ್ತು ತೃಣಮೂಲದ ಕೊರಳಿಗೆ ಸುತ್ತಿಕೊಳ್ಳುತ್ತಿರುವ ಶಾರದ ಚಿಟ್ ಫಂಡ್ ಹಗರಣ

ಈಗ, ಪಶ್ಚಿಮ ಬಂಗಾಳದಲ್ಲಿ ಎಲ್ಲರ ಬಾಯಲ್ಲೂ ಹಗರಣಗಳ ಮಾತು. ಶಾರದಾ ಚಿಟ್‌ಫಂಡ್ ಹಗರಣಕ್ಕೆ ಸಂಬಂಧಿಸಿ ಸಿ.ಬಿ.ಐ. ತನಿಖೆ ಮುಂದುವರಿಯುತ್ತಿದೆ. ಅದರಿಂದಾಗಿ ಇಡೀ ಪ್ರಕರಣವನ್ನೇ ಜನರ ಮುಂದೆ ತೆರೆದಿಟ್ಟಂತಾಗಿದೆ. ಪ್ರತಿ ದಿನ ಒಬ್ಬಬ್ಬ ಮಂತ್ರಿ ಅಥವಾ ಆಳುವ ಪಕ್ಷದ ಮುಖಂಡ/ ಅವರ ಚೇಲಾಗಳು ಸಿ.ಬಿ.ಐ. ತಂಡದ ಪ್ರಶ್ನೆಗಳನ್ನು ಉತ್ತರಿಸುವಂತಾಗಿದೆ ಮತ್ತು ಅವರ ಮನೆಗಳ ಮೇಲೂ ಸಿ.ಬಿ.ಐ. ಶೋಧನಾ ದಾಳಿ ನಡೆಯುತ್ತಿದೆ. ರಾಜ್ಯದ ಇತಿಹಾಸದಲ್ಲೇ ಈ ಪ್ರಮಾಣದ ಹಣಕಾಸು ವಂಚನೆ ಪ್ರಕರಣ ನಡೆದಿರಲಿಲ್ಲ.

ಮಮತಾ ಮನೆ ಬಾಗಿಲು ತಟ್ಟುತ್ತಿರುವ ತನಿಖೆ

ಶಾರದಾ ಹಗರಣದ ಸಿ.ಬಿ.ಐ. ತನಿಖೆ ಈಗ ತೃಣಮೂಲ ಪಕ್ಷದ ಬಾಗಿಲಿಗೆ ಬಂದು ನಿಂತಿದೆ. ಮಮತಾ ಬ್ಯಾನರ್ಜಿಯ ಕಣ್ಮಣಿಯಾಗಿದ್ದ ಹಾಗೂ ಶಾರದಾ ಸಮೂಹದ ಬಲಗೈ ಬಂಟನಂತಿದ್ದ ತೃಣಮೂಲ ಪಕ್ಷದ ರಾಜ್ಯ ಸಭಾ ಸದಸ್ಯ ಕುನಾಲ್ ಘೋಷ್ ಈಗಾಗಲೇ ಒಂದು ವರ್ಷ ಜೈಲುವಾಸ ಅನುಭವಿಸಿದ್ದಾನೆ. ಆ ಪಕ್ಷದ ಇನ್ನೊಬ್ಬ ರಾಜ್ಯ ಸಭಾ ಸದಸ್ಯ ಹಾಗೂ ಪತ್ರಿಕೋದ್ಯಮಿ ಅಹಮದ್ ಹಸನ್ ಇಮ್ರಾನ್ ಶಾರದಾ ಸಮೂಹದೊಂದಿಗೆ ಇರಿಸಿಕೊಂಡಿದ್ದ ಮುಸುಕಿನ ಸಂಬಂಧದ ಬಗ್ಗೆ, ಆತನ ವರಮಾನದ ಬಗ್ಗೆ, ಆತ ಶಾರದಾ ಗುಂಪಿನ ಪತ್ರಿಕೆ ಕೊಂಡುಕೊಂಡಿದ್ದರ ಬಗ್ಗೆ, ಆತ ಪಕ್ಕದ ದೇಶವೊಂದಕ್ಕೆ ಮೂಲಭೂತವಾದಿ ಚಟುವಟಿಕೆ ನಡೆಸಲು ಇಲ್ಲಿಂದ ಶಾರದಾ ಗುಂಪಿನ ಹಣ ಸಾಗಿಸಿದ್ದನೆಂದು ಪತ್ರಿಕೆಗಳಲ್ಲಿ ಕಾಣಿಸಿಕೊಂಡಿರುವ ವರದಿಗಳ ಬಗ್ಗೆ ಇ.ಡಿ. ಅಧಿಕಾರಿಗಳು ಪ್ರಶ್ನಿಸಿದ್ದಾರೆ. ಈ ಬಗ್ಗೆ ಸಿ.ಬಿ.ಐ. ಸಹ ಆತನ ಬೆನ್ನಟ್ಟಿದೆ.

ರಾಜ್ಯದ ಜವಳಿ ಮಂತ್ರಿ ಶ್ಯಾಮಪಾದ ಮುಖರ್ಜಿ ಶಾರದಾ ಗುಂಪಿನೊಂದಿಗೆ ಇರಿಸಿಕೊಡಿರುವ ಸಂಬಂಧದ ಬಗ್ಗೆ ಸಿ.ಬಿ.ಐ. ಪ್ರಶ್ನಿಸಿದೆ. ಈ ಮಂತ್ರಿಯ ಒಡೆತನದ ಬಂಕುರಾ ಜಿಲ್ಲೆಯಲ್ಲಿದ್ದ ಮುಚ್ಚುವ ಹಂತದಲ್ಲಿದ್ದ ಒಂದು ಫ್ಯಾಕ್ಟರಿಯನ್ನು ಶಾರದಾ ಗುಂಪಿಗೆ ಭಾರಿ ಮೊತ್ತಕ್ಕೆ ಮಾರಾಟ ಮಾಡಿರುವ ಆಪಾದನೆಗಳಿವೆ. ಈ ವರೆಗೂ ಅದು ಕೆಲಸ ಆರಂಭಿಸದಿರುವುದರಿಂದ ಅದೊಂದು ಸಾಧಾರಣವಲ್ಲದ ವ್ಯವಹಾರ ವೆಂಬುದು ಗೊತ್ತಾಗುತ್ತದೆ.

ಶಾರದಾ ಗುಂಪಿನ ಸೆಕ್ಯೂರಿಟಿ ಅಡ್ವೈಸರ್ ಆಗಿದ್ದ ರಾಜ್ಯದ ಮಾಜಿ ಡಿಜಿಪಿ ಮತ್ತು ಈಗ ತೃಣಮೂಲ ಪಕ್ಷದ ನಾಯಕನೂ ಆಗಿರುವ ರಜತ್ ಮಜುಂದಾರ್ ಮನೆಯ ಮೇಲೆ ಸಿ.ಬಿ.ಐ. ದಾಳಿ ನಡೆದಿದೆ. ಈಗ ಆತನ ಬಂಧನವೂ ಆಗಿದೆ. ಈಸ್ಟ್ ಬೆಂಗಾಲ್ ಕ್ಲಬ್‌ನ ದೇಬಬ್ರತ ಸರ್ಕಾರ್ ಮತ್ತು ಉದ್ಯಮಿ ಸಂಧೀರ್ ಅಗರ್‌ವಾಲ್ ಈಗಾಗಲೇ ಬಂಧನದಲ್ಲಿದ್ದಾರೆ.

ರಾಜ್ಯದ ಕ್ರೀಡಾ ಮಂತ್ರಿ ಮದನ್ ಮಿತ್ರಾಗೆ ಹಿಂದೆ ಪಿ.ಎ. ಆಗಿದ್ದ ಬಾಪಿ ಕರೀಂ ಎಂಬಾತನ ಬಂಧನ ಕುತೂಹಲ ಕೆರಳಿಸಿದೆ. ಆತ ಮದನ್ ಮಿತ್ರಾಗೆ ಶಾರದಾ ಗುಂಪಿನ ಹಣ ಸಾಗಿಸಿರುವುದನ್ನು ಒಪ್ಪಿಕೊಂಡಿದ್ದಾನೆ. ಮದನ್ ಮಿತ್ರಾ ಪತ್ರಕರ್ತರೊಂದಿಗೆ ಮಾತನಾಡುತ್ತಾ, ತನ್ನ ಕ್ಷೇತ್ರದಲ್ಲಿ ದೇವಸ್ಥಾನ ಕಟ್ಟಲು ಶಾರದಾ ಗುಂಪು ಹಣ ನೀಡಿದೆಯೆಂದು ಹೇಳಿದ್ದಾನೆ. ಆದರೆ, ಬಾಪಿ ಕರೀಂ ಹೇಳಿಕೆಗಳು ಮತ್ತು ಶಾರದಾ ಗುಂಪಿನ ಅಧ್ಯಕ್ಷ ಹಾಗೂ ಎಂ.ಡಿ. ಆದ ಸುದೀಪ್ ತೋ ಸೇನ್ ಜೊತೆ ಮದನ್ ಮಿತ್ರಾ ಹಲವಾರು ಬಾರಿ ಕಾಣಿಸಿಕೊಂಡು ಆತನನ್ನು ಹಾಡಿ ಹೊಗಳಿರುವ ವಿಡಿಯೊ ತುಣುಕುಗಳು ಮದನ್ ಮಿತ್ರಾಗೆ ತೊಡಕಾಗುವ ಸಾಧ್ಯತೆಗಳಿವೆ.



ಸಿ.ಬಿ.ಐ. ತನಿಖೆ ಮುಂದುವರಿಯುತ್ತಿದ್ದು ಅದು ತೃಣಮೂಲ ಆಡಳಿತದ ವರಿಷ್ಠರ ಮನೆಯ ಕದ ತಟ್ಟುವ ಸಾಧ್ಯತೆಗಳು ದಟ್ಟವಾಗುತ್ತಿವೆ. ತೃಣಮೂಲ ವರಿಷ್ಠರ ಜೊತೆ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಸಿಪಿಐ(ಎಂ) ವಿರುದ್ಧ ಉಗ್ರ ದ್ವೇಷ ಹೊಂದಿದ್ದ ಬುದ್ಧಿ ಜೀವಿಗಳು, ಹೆಸರಾಂತ ಸಿನಿಮಾ ನಟ ನಟಿಯರು ಮತ್ತು ಕಲಾವಿದರುಗಳನ್ನು ಸಂಪ್ರೀತಗೊಳಿಸಲು ಬೆಚ್ಚಿ ಬೀಳಿಸುವ ಮೊತ್ತದ ಹಣವನ್ನು ಈ ದಗಾ-ಕೋರರು ವ್ಯಯಿಸಿದ್ದಾರೆ.

ವಾಸ್ತವಾಂಶವೆಂದರೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿಚಾರಣೆಗೊಳಗಾಗುವ ಕಾಲ ಸನ್ನಿಹಿತವಾಂತಿದೆ. ಸಿ.ಬಿ.ಐ. ಕೆಲವು ಕಾಗದ ಪತ್ರಗಳ ತಪಾಸಣೆ ಮಾಡುತ್ತಿದ್ದಾಗ ಒಂದು ಗಮ್ಮತ್ತಿನ ವಿಷಯ ಹೊರ ಬಂದಿದೆ. ಮಮತಾ ರೈಲು ಮಂತ್ರಿಯಾಗಿದ್ದಾಗ ಮಮತಾ ಬ್ಯಾನರ್ಜಿಗೆ ಪ್ರಿಯವಾದ 'ಭಾರತ ತೀರ್ಥ' ಯೋಜನೆ ನಿರ್ವಹಣೆಯ ಗುತ್ತಿಗೆಯನ್ನು 2010ರಲ್ಲಿ ಶಾರದಾ ಗುಂಪಿಗೆ ಕೊಡಲಾಗಿತ್ತು. ಇದು, 2012ರಲ್ಲಿ ಶಾರದಾ ಗುಂಪು ಮುಳುಗುವವರೆಗೂ ತನಗೂ ಆ ಗುಂಪಿಗೂ ಸಂಬಂಧವೇ ಇರಲಿಲ್ಲ ಎಂಬ ಮಮತಾ ಹೇಳುತ್ತಿದ್ದುದು ಸುಳ್ಳು ಎಂದು ಸಾಬೀತಾಗುತ್ತದೆ.



ಪಶ್ಚಿಮ ಬಂಗಾಳದ ಸರ್ಕಾರವು ಆರಂಭದಿಂದಲೂ ಸಿ.ಬಿ.ಐ. ತನಿಖೆಯನ್ನು ವಿರೋಧಿಸುತ್ತಿತ್ತು. ಸುಪ್ರೀಂ ಕೋರ್ಟ್ ಅದೇಶದಿಂದಾಗಿ ಸಿ.ಬಿ.ಐ. ತನಿಖೆ ನಡೆಯುತ್ತಿದ್ದು ತನಿಖೆ ಮುಂದುವರಿಯುತ್ತಿರುವಾಗ ಆಡಳಿತ ಪಕ್ಷದಲ್ಲಿ ನಡುಕ ಹೆಚ್ಚಾಗುತ್ತಿದೆ.

ದೊಂಬರಾಟಕ್ಕೆ ಸೊಪ್ಪು ಹಾಕಲಿಲ್ಲ

ಸಿ.ಬಿ.ಐ.ನ ಚರಿತ್ರೆ ಮತ್ತು ಅದರ ಮೇಲೆ ಚಲಾಯಿಸುತ್ತಿರುವ ರಾಜಕೀಯ ಪ್ರಭಾವವನ್ನು ಪರಿಗಣಿಸಿದರೆ, ಈ ತನಿಖೆಯು ರಾಜಕೀಯ ವರಿಷ್ಠರು ಹಗರಣದಲ್ಲಿ ತೊಡಗಿಕೊಂಡಿರುವುದನ್ನು ಸಾಬೀತು ಮಾಡುತ್ತದೋ ಇಲ್ಲವೋ ಅನ್ನುವುದು ಒಂದು ತೀರ್ಮಾನವಾಗದ ಪ್ರಶ್ನೆಯಾಗಿ ಉಳಿಯುತ್ತದೆ. ಆದರೆ, ಈ ಹಗರಣದಲ್ಲಿ ಆಳುವ ಪಕ್ಷ ಮತ್ತು ರಾಜ್ಯ ಸರ್ಕಾರವು ಶಾರದಾ ಗುಂಪಿನೊಂದಿಗೆ ಶಾಮೀಲಾಗಿ ಸಾರ್ವಜನಿಕರ ಹಣವನ್ನು ಲೂಟಿ ಮಾಡಿರುವುದು ಸಂಪೂರ್ಣವಾಗಿ ಬಯಲಾಗಿದೆ. ಇದು ತೃಣಮೂಲ ಸರ್ಕಾರದ ಬಗ್ಗೆ ಜನರಿಗಿದ್ದ ಕಲ್ಪನೆಗೆ ಭಾರಿ ಹೊಡೆತ ಕೊಟ್ಟಿದೆ.

ಆಳುವ ಪಕ್ಷದ ಮುಖಂಡರು ಮತ್ತು ಅವರ ಗೂಂಡಾ ಪಡೆಯ ಹಣ ಕೀಳುವ ಪ್ರವೃತ್ತಿಯಿಂದಾಗಿ ಅನೇಕ ಸಣ್ಣ ಮಧ್ಯಮ ಗಾತ್ರದ ಕೈಗಾರಿಕೆಗಳು ಮುಚ್ಚಿಹೋಗಿವೆ. ತೊಂಭತ್ತರ ದಶಕದಿಂದಲೂ ಪೆಟ್ರೋಲಿಯಂ ಕ್ಷೇತ್ರದಲ್ಲಿ ಮುಂದಿದ್ದ 'ಹಾಲ್ದಿಯಾ ಪೆಟ್ರೋಕೆಮಿಕಲ್ಸ್' ಮುಚ್ಚಿದೆ. ಅನೇಕ ದೊಡ್ಡ ಕೈಗಾರಿಕೆಗಳೂ ಮುಚ್ಚಿವೆ. ಕೃಷಿ ಉತ್ಪಾದನೆ ನೆಲ ಕಚ್ಚಿದೆ. ಉದ್ಯೋಗ ಸೃಷ್ಟಿಸುವ ಯಾವ ಪ್ರಯತ್ನವನ್ನೂ ರಾಜ್ಯ ಸರ್ಕಾರ ಮಾಡುತ್ತಿಲ್ಲ. ಬದಲಿಗೆ ಲೆಕ್ಕವಿಲ್ಲದಷ್ಟು ಮೇಳಗಳಿಗೆ ಸಾರ್ವಜನಿಕರ ಹಣ ಪೋಲುಮಾಡುತ್ತಿದ್ದಾರೆ. ಅವರ ದೊಡ್ಡ ದೊಡ್ಡ ಭರವಸೆಗಳು ಮತ್ತು ಪೊಳ್ಳು ಘೋಷಣೆಗಳು ಅಪಹಾಸ್ಯಕ್ಕೀಡಾಗಿವೆ.

ಇಂತಹ ಪ್ರತಿಕೂಲ ವಾತಾವರಣದ ಹಿನ್ನೆಲೆಯಲ್ಲಿಯೇ ಮಮತಾ ಬ್ಯಾನರ್ಜಿಯವರು ಬಿ.ಜೆ.ಪಿ. ವಿರುದ್ಧದ ವೇದಿಕೆಯ ಬಗ್ಗೆ ಮಾತನಾಡಿರುವುದು. ಬಿಹಾರದಲ್ಲಿ ಇತ್ತೀಚೆಗೆ ನಡೆದ ಉಪಚುನಾವಣೆಗಳಲ್ಲಿ, ಬಿ.ಜೆ.ಪಿ. ವಿರುದ್ಧ ಲಾಲೂ– ನಿತೀಶ್ ಒಟ್ಟಾಗಿದ್ದರ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ "ಬಂಗಾಳದಲ್ಲಿ ಅಂತಹ ಪರಿಸ್ಥಿತಿ ಬಂದಾಗ ಯೋಚನೆ ಮಾಡಬೇಕಾಗುತ್ತದೆ. ನಮಗೆ ಯಾರೂ ಅಸ್ಪೃಶ್ಯರಲ್ಲ. ಯಾರಾದರು ಮುಂದೆ ಬಂದರೆ ಅವರೊಂದಿಗೆ ಮಾತನಾಡಬಹುದು. ನಮ್ಮ ಬಾಗಿಲು ತೆರೆದಿದೆ." ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ. ಸಿಪಿಐ(ಎಂ)ನೊಂದಿಗೆ ಕೈ ಜೋಡಿಸುತ್ತೀರಾ ಎಂದು ಕೇಳಿದಾಗ "ನಾನು ಹಾಗೆ ಹೇಳಲಿಲ್ಲ. ಆದರೆ, ಅಂತಹ ಪ್ರಸ್ತಾಪ ಬಂದರೆ ನಮ್ಮ ಪಕ್ಷ ಅದನ್ನು ಪರಿಗಣಿಸುತ್ತದೆ." ಎಂದರು.

ಸಿಪಿಐ(ಎಂ) ಪಾಲಿಟ್ ಬ್ಯುರೋ ಸದಸ್ಯರೂ, ಪಶ್ಚಿಮ ಬಂಗಾಳದ ಮಾಜಿ ಮುಖ್ಯ ಮಂತ್ರಿಗಳೂ ಆದ ಬುದ್ಧದೇವ ಭಟ್ಟಾಚಾರ್ಯ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ ಪ್ರತಿಕ್ರಿಯಿಸಿದ್ದು ಹೀಗೆ: "ತೃಣಮೂಲ ಕಾಂಗ್ರೆಸ್ ಒಂದು ಸಮಾಜ–ಘಾತುಕರ ಪಕ್ಷ. ಅವರೊಂದಿಗೆ ಚರ್ಚೆಯ ಪ್ರಶ್ನೆಯೇ ಇಲ್ಲ". ಅವರು ಮುಂದುವರಿಯುತ್ತಾ "ತೃಣಮೂಲದ ಆಡಳಿತದಲ್ಲಿ, ಕಾನೂನು ಮತ್ತು ಶಿಸ್ತು ಪಾಲನೆ, ಕೈಗಾರಿಕೆ, ಕೃಷಿ, ಕಲೆ ಮತ್ತು ಸಂಸ್ಕೃತಿ ಎಲ್ಲವೂ ಅಧೋಗತಿಗಿಳಿದಿವೆ. ಅಂತಹ ಪುಂಡರ ಜೊತೆ ಮಾತುಕತೆ ಇಲ್ಲವೇ ಇಲ್ಲ. ರಾಜಕೀಯ ರಣ–ರಂಗದ ಬೀದಿಗಳಲ್ಲಿ ಅವರನ್ನು ಎದುರಿಸುತ್ತೇವೆ." ಎಂದು ಹೇಳಿದರು.

ಪಶ್ಚಿಮ ಬಂಗಾಳದ ಎಡರಂಗದ ಅಧ್ಯಕ್ಷರೂ ಮತ್ತು ಸಿಪಿಐ(ಎಂ) ಪಾಲಿಟ್ ಸದಸ್ಯರೂ ಆದ ಬಿಮನ್ ಬಸು ಹೇಳಿದ್ದು: "ತೃಣಮೂಲದ ಕೋಮು–ವಿರೋಧಿ ಮಾತುಗಳಲ್ಲಿ ಬರೇ ಆಡಂಬರ ಮಾತ್ರವಲ್ಲ; ವಿರೋಧಾಭಾಸವೂ ಇದೆ. ಅದು ಕೋಮುವಾದಿ ಶಕ್ತಿಗಳನ್ನು ವಿರೋಧಿಸಿರುವ ಘಟನೆಗಳು ಅದರ ಇತಿಹಾಸದಲ್ಲೆ ಇಲ್ಲ. ಎಡ ಶಕ್ತಿಗಳು ಮಾತ್ರ ಕೋಮುವಾದಿ ಶಕ್ತಿಗಳನ್ನು ವಿರೋಧಿಸಿವೆ."

ನೀನು ಒದ್ದಂಗೆ ಮಾಡು; ನಾನು ಅತ್ತಂಗೆ ಮಾಡ್ತೀನಿ

ಅವರೇನೂ ಸಂಗ ಮಾಡಬಾರದ ಅಸ್ಪೃಶ್ಯರಲ್ಲ ಎಂದು ಪೀಠಿಕೆ ಹಾಕಿದ ಮಮತಾ ಬ್ಯಾನರ್ಜಿ, 1998 ಮತ್ತು 1999ರ ಲೋಕ ಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲು ಬಿ.ಜೆ.ಪಿ.ಯೊಂದಿಗೆ ಒಂದು ಮೈತ್ರಿ ಮಾಡಿಕೊಂಡರು. ವಾಜಪೇಯಿ ಸರ್ಕಾರದಲ್ಲಿ ಮಮತಾ ಬ್ಯಾನರ್ಜಿ ಮಂತ್ರಿಯೂ ಆದರು. ಆರ್.ಎಸ್.ಎಸ್. ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಆರ್.ಎಸ್.ಎಸ್. ಅವರನ್ನು ಕಮ್ಯೂನಿಸ್ಟ್ ಹಾವಳಿಯ ವಿರುದ್ಧ ಹೋರಾಡುತ್ತಿರುವ 'ದುರ್ಗಾ'ಎಂದು ಹೊಗಳಿತು. ಅದಕ್ಕೆ ಪ್ರತಿಯಾಗಿ ಅವರನ್ನು 'ನೈಜ ದೇಶಪ್ರೇಮಿಗಳು' ಎಂದು ಮಮತಾ ಹೊಗಳಿದರು. ಇಷ್ಟೆಲ್ಲಾ ಆದ ಮೇಲೂ 2001 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳಲ್ಲಿ, ಮಮತಾ ಎನ್.ಡಿ.ಎ. ತೊ–ರೆದು ಕಾಂಗ್ರೆಸ್ ಪಕ್ಷದ ಜೊತೆ ಕೈ ಜೋಡಿಸಿದರು. ಆ ಚುನಾವಣೆಗಳಲ್ಲಿ ಆದ ಮುಖಭಂಗದ ನಂತರ ಬಿ.ಜೆ.ಪಿ. ಕ್ಯಾಂಪಿಗೆ ಮರಳಿದರು. ಲೋಕಸಭೆಯಲ್ಲಿ ಗುಜರಾತ್ ನರಮೇಧದ ವಿಷಯದಲ್ಲಿ ಚರ್ಚೆಯಾದಾಗ ಬಿ.ಜೆ.ಪಿ.ಯನ್ನು ಬಲವಾಗಿ ಸಮರ್ಥಿಸಿದರು. 2004ರ ಲೋಕ ಸಭಾ ಚುನಾವಣೆಗಳಲ್ಲಿ ಮತ್ತು 2006ರ ವಿಧಾನ ಸಭಾ ಚುನಾವಣೆಗಳಲ್ಲಿ ಬಿ.ಜೆ.ಪಿ.ಯೊಂದಿಗೆ

ಪುಟ 15 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ



> 17 ಲಕ್ಷಕ್ಕೂ ಹೆಚ್ಚು ಬಡಜನರನ್ನು ಲೂಟಿ ಮಾಡಿದ ಸಾರಧಾ ಚಿಟ್‌ಫಂಡಿನ ಭ್ರಷ್ಟ ವ್ಯವಹಾರದಲ್ಲಿ ತೃಣಮೂಲ ಕಾಂಗ್ರೆಸ್ ಕೂಡ ಅಷ್ಟೇ ದೊಡ್ಡ ಅಪರಾಧಿ ಎಂಬುದು ದಿನೇದಿನೇ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಇಂತಹ ನೀಚತನ ಭಯೋತ್ಪಾದನೆ ಮತ್ತು ಚಿತ್ರಹಿಂಸೆಯ ರಾಜಕೀಯದೊಂದಿಗೆ ಸೇರಿಕೊಂಡು ಇಂದು ಬಂಗಾಲದ ಜನತೆಯನ್ನು ಒಂದು ನಿಜವಾದ ಅಪಾಯಕ್ಕೆ ಗುರಿಪಡಿಸಿದೆ.
>
> - ಸೀತಾರಾಮ್ ಯೆಚೂರಿ

ನೀಚತನ ಮತ್ತು ಭಯೋತ್ಪಾದನೆಯ ಘಾತಕ ಮಿಶ್ರಣ

ಪಶ್ಚಿಮ ಬಂಗಾಲದ 17 ಲಕ್ಷಕ್ಕೂ ಹೆಚ್ಚು ಬಡ ಜನರನ್ನು ಲೂಟಿ ಮಾಡಿದ ಬಹುಕೋಟಿ ಶಾರದಾ ಚಿಟ್ ಫಂಡ್ ಹಗರಣ ಈಗ ಎಂತಹ ಪ್ರಮಾಣವನ್ನು ತಲುಪಿದೆಯೆಂದರೆ ರಾಜ್ಯದಲ್ಲಿ ಆಳುತ್ತಿರುವ ತೃಣಮೂಲ ಕಾಂಗ್ರೆಸಿನ ಹಲವು ಪ್ರಮುಖ ಮುಖಂಡರುಗಳು ಅದರಲ್ಲಿ ಕುತ್ತಿಗೆಯ ವರೆಗೂ ಮುಳುಗಿರುವುದು ದಿನಗಳೆದಂತೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಈ ಹಗರಣವನ್ನು ಬಯಲಿಗೆ ತರಲು, ತಪ್ಪಿತಸ್ಥರನ್ನು ಗುರುತಿಸಲು ಮತ್ತು ನಾಡಿನ ಕಾನೂನಿನ ಪ್ರಕಾರ ಅವರನ್ನು ಶಿಕ್ಷಿಸಲು ಕೇಂದ್ರೀಯ ತನಿಖಾ ಸಂಸ್ಥೆಗಳು ಮಧ್ಯಪ್ರವೇಶಿಸಬೇಕೆಂದು ಸಿಪಿಐ(ಎಂ) ಕಳೆದ ಮೂರು ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಸಕ್ರಿಯವಾಗಿ ಆಗ್ರಹಿಸುತ್ತಲೇ ಬಂದಿದೆ. ಎಡರಂಗ ಸರಕಾರದ ಅಡಿಯಲ್ಲಿ ಹಣಕಾಸು ನಿಯಂತ್ರಣಾ ಸಂಸ್ಥೆಯಾದ ಸೆಬಿ(ಭಾರತದ ಶೇರು ವಿನಿಮಯ ಮಂಡಳಿ)ಗೆ ಒಂದು ಪತ್ರ ಕಳಿಸಿ ಈ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕು ಎಂದು ಕೇಳಲಾಗಿತ್ತು. ಆಮೇಲೆ, 2011ರ ವಿಧಾನ ಸಭಾ ಚುನಾವಣೆಗಳ ನಂತರ ಸಿಪಿಐ(ಎಂ) ಮತ್ತು ಎಡರಂಗದ ನಿಯೋಗಗಳು ರಾಷ್ಟ್ರಪತಿಗಳನ್ನು ಎರಡು ಬಾರಿ, ಪ್ರಧಾನ ಮಂತ್ರಿಗಳನ್ನು ಮೂರು ಬಾರಿ ಮತ್ತು ಕಾರ್ಪೊರೇಟ್ ವ್ಯವಹಾರಗಳ ಮಂತ್ರಿಯನ್ನು ಎರಡು ಬಾರಿ ಭೇಟಿಯಾದವು. ಈ ಎಲ್ಲ ಭೇಟಿಗಳಲ್ಲಿ ಸಿಪಿಐ(ಎಂ) ಕೇಂದ್ರ ಸಂಸ್ಥೆಗಳು ಮಧ್ಯಪ್ರವೇಶಿಸುವ ತುರ್ತು ಅಗತ್ಯ, ಶಾರದಾ ಕಂಪನಿಗಳ ಗುಂಪಿನ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಅದರಿಂದ ಬರುವ ಹಣವನ್ನು ಈ ಹಗರಣಕ್ಕೆ ಬಲಿಯಾದವರಿಗೆ ಸಾಕಷ್ಟು ಪರಿಹಾರ ಒದಗಿಸಲು ಬಳಸುವಂತಾಗಬೇಕು ಎಂಬ ಬಗ್ಗೆ ಒತ್ತು ನೀಡುತ್ತ ಬಂದಿದೆ.

ಹಗರಣಕೋರರ ಮೋಸಕ್ಕೆ ರಾಜ್ಯದ ಬೊಕ್ಕಸದಿಂದ ಪರಿಹಾರ!

ತೃಣಮೂಲ ಕಾಂಗ್ರೆಸ್ ಮತ್ತು ಅದರ ಸರಕಾರ ಇಂತಹ ಒಂದು ತನಿಖೆಯನ್ನು ಏಕೆ ನಿರಾಕರಿಸುತ್ತ ಬಂತು ಎಂಬುದೀಗ ಸ್ಪಷ್ಟ. ಈ ಹಗರಣವನ್ನು ಮುಚ್ಚಿ ಹಾಕಲೆಂದೇ, ಮತ್ತು ಹಗರಣಕೋರರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬದಲು, ಹಣ ಕಳಕೊಂಡ ಕೆಲವರಿಗೆ ರಾಜ್ಯದ ಬೊಕ್ಕಸದ ಮೂಲಕ ನಾಮಮಾತ್ರದ ಪರಿಹಾರ ಒದಗಿಸಲು ಅದು ನಿರ್ಧರಿಸಿತು. ಒಂದು ಪೂರ್ಣ ಪ್ರಮಾಣದ ನಾಟಕವೇ ನಡೆಯಿತು. ಬಂಗಾಲದ ಎಲ್ಲೆಡೆಗಳಿಂದ ಸರಕಾರದ ಖರ್ಚಿನಲ್ಲಿ ಜನರನ್ನು ಕರಕೊಂಡು ಬಂದು ಮುಖ್ಯಮಂತ್ರಿಗಳು ಕೊಲ್ಕತಾದ ನೇತಾಜಿ ಒಳಾಂಗಣ ಸ್ಟೇಡಿಯಂನಲ್ಲಿ ವಂಚನೆಗೊಳಗಾದ ಕೆಲವರಿಗೆ ಅಲ್ಪ ಮೊತ್ತದ ಚೆಕ್‌ಗಳನ್ನು ಕೊಡಮಾಡಿದರು. ಕೊನೆಗೂ ಹಗರಣಕೋರರು ಮಾಡಿದ ಮೋಸಕ್ಕೆ ಪಶ್ಚಿಮ ಬಂಗಾಲದ ಜನತೆ ಬೆಲೆ ತೆರಬೇಕಾಗಿ ಬಂತು. ಈ ಹಗರಣಕೋರರನ್ನು ತೃಣಮೂಲ ಕಾಂಗ್ರೆಸ್ ಮತ್ತು ರಾಜ್ಯ ಸರಕಾರ ರಕ್ಷಿಸಲು ಮುಂದಾಗಿತ್ತು ಎಂಬುದು ಸ್ಪಷ್ಟ.



You got looted in my regime? Don't worry. I'll tax you and use the money to recover your loss.

ನನ್ನ ಆಳ್ವಿಕೆಯಲ್ಲಿ ನಿನ್ನನ್ನು ಲೂಟಿ ಮಾಡಿದರೇ? ಚಿಂತೆ ಬೇಡ, ನಿನ್ನ ಮೇಲೆ ತೆರಿಗೆ ಹಾಕಿ ನಿನಗಾದ ನಷ್ಟವನ್ನು ವಸೂಲಿ ಮಾಡುತ್ತೇನೆ
ಡಿಎನ್‌ಎ ಯಲ್ಲಿ ಮಂಜುಲ್ ಅವರ ವ್ಯಂಗ್ಯ

ಅಂತಿಮವಾಗಿ 2011ರ ಮೂರು ವರ್ಷಗಳ ನಂತರ ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿತು. ಈ ಹಗರಣಕ್ಕೆ ಇನ್ನೂ ದೊಡ್ಡ ಆಯಾಮಗಳಿವೆ ಎಂದು ವರ್ಣಿಸಿದ ದೇಶದ ಸರ್ವೋಚ್ಚ ನ್ಯಾಯಾಲಯ ಈ ಬಗ್ಗೆ ತನಿಖೆ ನಡೆಸುವಂತೆ ಸಿಬಿಐಗೆ ಹೇಳಿತ್ತು.

ಟಿಎಂಸಿ ಮುಖಂಡರ ವಿಚಾರಣೆ

ರಾಜ್ಯಸಭೆಯ ಒಬ್ಬ ತೃಣಮೂಲ ಕಾಂಗ್ರೆಸ್ ಸದಸ್ಯ ಈ ಹಗರಣದ ಇಡೀ ಕತೆಯನ್ನು, ಇದರಲ್ಲಿ ಮುಖ್ಯಮಂತ್ರಿಯೂ ಒಳಗೊಂಡಿರುವುದನ್ನು ಹೊರಗೆಡಹುವುದಾಗಿ ಬೆದರಿಕೆ ಹಾಕಿದಾಗ, ತಕ್ಷಣವೇ ಆತನನ್ನು ರಾಜ್ಯ ಸರಕಾರದ ವಿಶೇಷ ತನಿಖಾ ತಂಡ ಬಂಧಿಸಿ ತನ್ನ ಸುಪರ್ದಿಗೆ ತೆಗೆದುಕೊಂಡಿತು. ಆತ ಒಂದು ವರ್ಷ ಕಳೆದ ನಂತರವೂ ಈಗಲೂ ಜೈಲಿನಲ್ಲಿದ್ದಾರೆ.

ಇನ್ನೊಬ್ಬ ಟಿಎಂಸಿ ರಾಜ್ಯಸಭಾ ಸದಸ್ಯ, ಅಹ್ಮದ್ ಹಸನ್ ಇಮ್ರಾನ್‌ರನ್ನು ಹಗರಣದಲ್ಲಿ ಸಿಲುಕಿದ್ದ ಚಿಟ್‌ಫಂಡ್ ಗುಂಪಿಗೆ ಸಂಬಂಧಪಟ್ಟಂತೆ ಜಾರಿ ನಿರ್ದೇಶನಾಲಯ(ಇಡಿ) ವಿಚಾರಣೆಗೆ ಒಳಪಡಿಸಿತು. 'ವಿಶೇಷ ವಂಚನೆ ತನಿಖಾ ಸಂಘಟನೆ' (ಎಸ್‌ಎಫ್‌ಐಒ) ನಡೆಸಿದ ತನಿಖೆಗಳಲ್ಲಿ ಈ ಸಂಸತ್ ಸದಸ್ಯ 200 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತದ ಹವಾಲಾ ವ್ಯವಹಾರಗಳಲ್ಲಿ ತೊಡಗಿದ್ದುದು ಕಂಡು ಬಂದಿದೆ ಎನ್ನಲಾಗಿದೆ. ಈ ಕೇಸನ್ನು ಒಂದು ನೆರೆದೇಶದಲ್ಲಿ ಭಯೋತ್ಪಾದನಾ ಸಂಪರ್ಕ ಹೊಂದಿರಬಹುದಾದ ಸಾಧ್ಯತೆಯ ಬಗ್ಗೆ ತನಿಖೆ ನಡೆಸಲು ಸಿಬಿಐಗೆ ವಹಿಸಲಾಗಿದೆ.

ವಿವಿಧ ತೃಣಮೂಲ ಕಾಂಗ್ರೆಸ್ ಮುಖಂಡರನ್ನು, ರಾಜ್ಯ ಸಂಪುಟದ ಹಲವಾರು ಮಂತ್ರಿಗಳನ್ನು ಕೂಡ ತನಿಖೆಗೆ ಕರೆಸಿಕೊಂಡು ವಿಚಾರಣೆಗೆ ಒಳಪಡಿಸಲಾಗಿದೆ. ಇದರಲ್ಲಿ ಇತ್ತೀಚಿನದ್ದು ಎಂದರೆ ಸಶಸ್ತ್ರ ಪೋಲೀಸ್ ಪಡೆಯ ಮಾಜಿ ಮಹಾನಿರ್ದೇಶಕ ರಜತ್ ಮಜುಂದಾರ್‌ರವರ ಬಂಧನ. ಈತ ಈಗ ತೃಣಮೂಲ ಕಾಂಗ್ರೆಸಿನ ಉಪಾಧ್ಯಕ್ಷರು. ಈ ಹಿಂದೆ ರಾಜ್ಯದ ಡಿಐ-ಜಿಯಾಗಿ, ಡಿಐಜಿ(ಕಾರ್ಯಾಚರಣೆ) ಆಗಿ ಕೆಲಸ ಮಾಡಿದ್ದರು.

ಮುಖ್ಯಮಂತ್ರಿ ಸಹ ಶಾಮೀಲು?

ಈ ಇಡೀ ಹಗರಣದಲ್ಲಿ ಮುಖ್ಯಮಂತ್ರಿ ಸಹ ಶಾಮೀಲಾಗಿರಬಹುದು ಎಂಬ ಊಹಾಪೋಹಗಳು ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹರಡಿವೆ. ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳು ಮತ್ತು ಶಾರದಾ ಗುಂಪಿನ ಬಾಸ್ ಸುದಿಪ್ತೊ ಸೆನ್(ಈಗ ಬಂಧಿತನಾಗಿ ಪೋಲಿಸ್ ಕಸ್ಟಡಿಯಲ್ಲಿದ್ದಾರೆ) 2012ರಲ್ಲಿ ಕಲಿಂಪೊಂಗ್‌ನಲ್ಲಿ ಭೇಟಿಯಾಗಿದ್ದರು ಎಂಬ ವರದಿಗಳು ಇರುವ ಬಗ್ಗೆ ತನಗೆ ತಿಳಿದಿರುವುದಾಗಿ ಸಿಬಿಐ ನಿರ್ದೇಶಕರು ಹೇಳಿದ್ದಾರೆ ಎಂದು 'ಟೆಲಿಗ್ರಾಫ್'(ಸಪ್ಟಂಬರ್ 10, 2014) ವರದಿ ಮಾಡಿದೆ. "ನಾವು ಸರಿಯಾದ ದಿಕ್ಕಿನಲ್ಲಿ ಸಾಗಿದ್ದೇವೆ, ಸ್ವಲ್ಪ ಸಮಯದಲ್ಲೇ ದೊಡ್ಡ ಫಲಿತಾಂಶಗಳನ್ನು ಪಡೆಯುವ ನಿರೀಕ್ಷೆ ಇದೆ" ಎಂದು ಅವರು ಹೇಳಿರುವುದಾಗಿಯೂ ವರದಿಯಾಗಿದೆ. ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳು 2010ರಲ್ಲಿ ಕೇಂದ್ರ ರೈಲ್ವೆ ಮಂತ್ರಿಯಾಗಿದ್ದಾಗ ಶಾರದಾ ಗುಂಪು ರೈಲ್ವೆ ಮಂತ್ರಿಗಳ ಖಯಾಲಿಯ ಪ್ರಾಜೆಕ್ಟ್ 'ಭಾರತ ತೀರ್ಥ'ವನ್ನು ಜಾರಿಗೊಳಿಸುವ ರೈಲ್ವೆ ಕಾಂಟ್ರಾಕ್ಟನ್ನು ಪಡೆಯಿತು ಎಂಬ ವರದಿಗಳೂ ಕಾಣ ಬಂದಿವೆ.


ಡಿಎನ್‌ಎ ಯಲ್ಲಿ ಮಂಜುಲ್ ಅವರ ವ್ಯಂಗ್ಯ

ಇವೆಲ್ಲವೂ, 17 ಲಕ್ಷಕ್ಕೂ ಹೆಚ್ಚು ಬಡಜನರನ್ನು ಲೂಟಿ ಮಾಡಿದ ಈ ಭ್ರಷ್ಟ ವ್ಯವಹಾರದಲ್ಲಿ ತೃಣಮೂಲ ಕಾಂಗ್ರೆಸ್ ಕೂಡ ಅಷ್ಟೇ ದೊಡ್ಡ ಅಪರಾಧಿ ಎಂಬುದನ್ನು ಸ್ಪಷ್ಟಗೊಳಿಸುತ್ತವೆ. ಸಿಬಿಐ, ಎಸ್‌ಎಫ್‌ಐಒ, ಇಡಿ ಮತ್ತಿತರ ಸಂಸ್ಥೆಗಳೆಲ್ಲ ಇಡೀ ಹಗರಣವನ್ನು ಬಯಲಿಗೆ ತಂದು ತಪ್ಪಿತಸ್ಥರನ್ನು ಶಿಕ್ಷಿಸುತ್ತವೆ, ಲೂಟಿಗೆ ಬಲಿಯಾದವರಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ಒದಗಿಸುತ್ತವೆ ಎಂದು ಆಶಿಸಬೇಕಷ್ಟೇ.

ಈಗಾಗಲೇ ತೃಣಮೂಲ ಕಾಂಗ್ರೆಸ್ ರಾಜ್ಯದಾದ್ಯಂತ ಭಯೋತ್ಪಾದನೆ ಮತ್ತು ಚಿತ್ರಹಿಂಸೆಯ ರಾಜಕೀಯದ ಮೂಲಕ ಪ್ರಜಾಪ್ರಭುತ್ವದ ಮೇಲೆ ವ್ಯಾಪಕ ಪ್ರಮಾಣದಲ್ಲಿ ವಿಶೇಷವಾಗಿ ಎಡಪಕ್ಷಗಳ ಮೇಲೆ ಗುರಿಯಿಟ್ಟು ದಾಳಿ ನಡೆಸುತ್ತಲೇ ಇದ್ದು, ಅದರೊಂದಿಗೆ ಈ ನೀಚ ವ್ಯವಹಾರವೂ ಸೇರಿಕೊಂಡಿದೆ. ಮಹಿಳೆಯರ ಮೇಲೆ ನಿಲ್ಲದ ಹಿಂಸಾಚಾರ ಮತ್ತು ಲೈಂಗಿಕ ಅಪರಾಧಗಳು, ಬಲವಂತದ ವಸೂಲಿಗಳು, ಶಿಕ್ಷಕರು ಮತ್ತು ಶಿಕ್ಷಣ ಸಂಸ್ಥೆಗಳ ಮೇಲೆ ದಾಳಿಗಳು, ಬಹಿರಂಗವಾಗಿಯೇ ಚುನಾವಣೆಗಳಲ್ಲಿ ಮೋಸ, ಪ್ರಜಾಸತ್ತಾತ್ಮಕ ಚುನಾವಣಾ ಪ್ರಕ್ರಿಯೆಯನ್ನೇ ವಿರೂಪಗೊಳಿಸುವುದು ಇತ್ಯಾದಿಗಳಿಂದಾಗಿ ಬಂಗಾಲದಲ್ಲಿ ಪ್ರಜಾಪ್ರಭುತ್ವ ರಚನೆ ಮತ್ತು ಸಂಸ್ಥೆಗಳು ಮುರಿದು ಬೀಳುವಂತಾಗಿದೆ.

ಅಪಾಯಕಾರಿ ಸನ್ನಿವೇಶ

ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ಎಲ್ಲ ದಾಳಿಗಳನ್ನು ಎಡೆಬಿಡದೆ ಎದುರಿಸಿಕೊಂಡು ಬಂದಿವೆ. ನೂರಾರು ಧೀರ ಹೋರಾಟಗಾರರನ್ನು ಈ ದಾಳಿಗಳು ಬಲಿ ತೆಗೆದುಕೊಂಡಿವೆ. ಸಾವಿರಾರು ಮಂದಿ ಮನೆಮಾರು ಕಳಕೊಂಡಿದ್ದಾರೆ. ಬಂಗಾಲದಲ್ಲಿ ಎಡರಂಗ ಬೇಗನೇ ಪುಟಿದೆದ್ದು ಬರುತ್ತದೆ ಎಂಬ ಭಯದಿಂದ ತೃಣಮೂಲ ಕಾಂಗ್ರೆಸ್ ಕೋಮು ಭಾವನೆಗಳನ್ನು ಬಡಿದೆಬ್ಬಿಸಿ ಅಲ್ಪಸಂಖ್ಯಾತರ ಬೆಂಬಲ ಗಿಟ್ಟಿಸುವ ನಿರೀಕ್ಷೆ ಇಟ್ಟುಕೊಂಡಿದೆ. ಆದರೆ ಇದು ಆರೆಸ್ಸೆಸ್/ಬಿಜೆಪಿಗೆ ಒಂದು ಕೋಮುವಾದಿ ಪ್ರತಿದಾಳಿಯನ್ನು ನಡೆಸಿ ತನ್ನ ಚುನಾವಣಾ ನೆಲೆಯನ್ನು ಕ್ರೋಢೀಕರಿಸಿಕೊಳ್ಳಲು, ಬಹುಶಃ ಬಂಗಾಲದ ವಿಧಾನ ಸಭೆಗೆ ಮೊದಲ ಬಾರಿಗೆ ಪ್ರವೇಶ ಪಡೆಯುವ ಅಪಾಯಕಾರೀ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇಂತಹ ಕೋಮುವಾದಿ ಸ್ಪರ್ಧೆ ರಾಜ್ಯದಲ್ಲಿ ಎಡರಂಗ ಸರಕಾರದ ಮೂರು ದಶಕಗಳ ಆಳ್ವಿಕೆ ಕಟ್ಟಿ ಬೆಳೆಸಿದ ಕೋಮುಶಾಂತಿ ಮತ್ತು ಸಾಮಾಜಿಕ ಸಾಮರಸ್ಯದ ವಾತಾವರಣವನ್ನು ಸಂಪೂರ್ಣವಾಗಿ ನಾಶಪಡಿಸುವಂತಹ ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಿದೆ.

ಇದೀಗ ಇಂದು ಬಂಗಾಲದ ಜನತೆಯನ್ನು ಒಂದು ನಿಜವಾದ ಅಪಾಯಕ್ಕೆ ಗುರಿಪಡಿಸಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಇಂತಹ ಎಲ್ಲ ಪ್ರಯತ್ನಗಳನ್ನು ವಿಫಲಗೊಳಿಸಲು ಮತ್ತು ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತತೆಯನ್ನು ಮರುಸ್ಥಾಪಿಸಲು ಕಟಿಬದ್ಧವಾಗಿವೆ. ಎಡರಂಗದ ಆಳ್ವಿಕೆಯ ಅಡಿಯಲ್ಲಿ ವಿಶಾಲ ಜನಸಮೂಹಗಳು ಗಳಿಸಿದ್ದನ್ನು ಸತತವಾಗಿ ಮತ್ತು ಸಂಪೂರ್ಣವಾಗಿ ಅಳಿಸಿ ಹಾಕುವ ಪ್ರಯತ್ನ ನಡೆಯುತ್ತಿರುವಾಗ, ಅವರ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು, ಕಾಯ್ದುಕೊಳ್ಳಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ಕೆಲಸ ಮಾಡುತ್ತವೆ.

ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ವ್ಯಾಪಕ ಶಾಲಾ–ಕಾಲೇಜು ಬಂದ್

ಶಿಕ್ಷಣ ವಿರೋಧಿ ಸರ್ಕಾರದ ಪ್ರತಿಕೃತಿ ದಹನ


ಬೆಂಗಳೂರು

ಭಾರತ ವಿದ್ಯಾರ್ಥಿ ಫೆಡರೆಷನ್ (ಎಸ್‌ಎಫ್‌ಐ) ಸಂಘಟನೆಯು ವಿದ್ಯಾರ್ಥಿ ಸಮುದಾಯವನ್ನು ಕಾಡುತ್ತಿರುವ ನಾನಾ ಶೈಕ್ಷಣಿಕ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಆಗ್ರಹಿಸಿ ಇದೇ ಸೆಪ್ಟೆಂಬರ್ 10 ರಂದು ರಾಜ್ಯಾದ್ಯಂತ ಶಾಲಾ–ಕಾಲೇಜು–ಹಾಗೂ ವಿ.ವಿ. ಬಂದ್‌ಗೆ ಕರೆ ನೀಡಿತ್ತು.

ಈ ಕರೆಗೆ ರಾಜ್ಯದ ವಿದ್ಯಾರ್ಥಿ ಸಮುದಾಯವು ವ್ಯಾಪಕವಾಗಿ ಸ್ಪಂದಿಸಿರುವ ವರದಿಗಳು ಬರುತ್ತಿವೆ. ರಾಜ್ಯದಾದ್ಯಂತ ವಿದ್ಯಾರ್ಥಿಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ರಾಜಧಾನಿ ಬೆಂಗಳೂರಿನಲ್ಲಿ ಅಂದು ನಗರದ ನಾನಾ ಕಾಲೇಜುಗಳನ್ನು ಬಹಿಷ್ಕರಿಸಿದ ವಿದ್ಯಾರ್ಥಿಗಳು ಪುರಭವನದ ಮುಂದೆ ನೆರೆದು ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಎಸ್‌ಎಫ್‌ಐ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯ ಸಂದರ್ಭದಲ್ಲಿ ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿ ಗುರುರಾಜ್ ದೇಸಾಯಿ, ರಾಜ್ಯ ಉಪಾಧ್ಯಕ್ಷರಾದ ಬಸವ ರಾಜ್ ಪೂಜಾರ್ ಪಾಲ್ಗೊಂಡು ಮಾತಾನಾಡಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಅ ಧ್ಯಕ್ಷರಾದ ವೆಂಕಟೇಶ್, ಕಾರ್ಯದರ್ಶಿ ಹರಿಪ್ರಸಾದ್, ಮಹೇಶ್ ಮುಂತಾದವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ವಿದ್ಯಾರ್ಥಿ ಪಾಲ್ಗೊಂಡು ಸಮಸ್ಯೆಗಳ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ನೇತೃತ್ವದ ಪ್ರತಿಭಟನೆಯು ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆದಿದೆ. ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಅ ಧ್ಯಕ್ಷರಾದ ಅಂಬರೀಶ್, ಉತ್ತರ ಜಿಲ್ಲಾ ಸಮಿತಿಯ ಅ ಧ್ಯಕ್ಷರಾದ ಯುವರಾಜ್, ಕಾರ್ಯದರ್ಶಿ ಚಿಕ್ಕರಾಜ್ ಮುಂತಾದವರು ಮಾತನಾಡಿದ್ದಾರೆ. ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡ ಈ ಪ್ರತಿಭಟನೆಯ ಸಂದಭದಲ್ಲಿ ಸಾಂಕೇತಿಕವಾಗಿ ಶಿಕ್ಷಣ ವಿರೋಧಿ ಸರ್ಕಾರದ ಭೂತದಹನ ಮಾಡಲಾಗಿದೆ.

ಹಾವೇರಿ

ಹಾವೇರಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾ ಕೇಂದ್ರದಲ್ಲಿ ಶಾಲಾ ಕಾಲೇಜು ಬಂದ್ ಮಾಡಿ ಪ್ರತಿಭಟನೆ ನಡೆಸಲಾಗಿದೆ. ನಗರದ ಸಿ.ಬಿ.ಕೊಳ್ಳಿ ಪಾಲಿಟೆಕ್ನಿಕ್ ಕಾಲೇಜಿನಿಂದ ಮತ್ತು ಕೀರ್ತಿ ಐಟಿಐ ಕಾಲೇಜಿನಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಂತರ ಹೊಸಮನಿ ಸಿದ್ದಪ್ಪ ವೃತ್ತಕ್ಕೆ ಬಂದು ಸಮಾವೇಶಗೊಂಡಿದೆ. ನಗರದ 2 ಕಡೆಯಿಂದ ಪ್ರತಿಭಟನಾ ನಡೆಸಿದ ಎಸ್‌ಎಫ್‌ಐ ಕಾರ್ಯಕರ್ತರು ರಾಜ್ಯದ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿದರು. ಜಿಲ್ಲೆಯ ಶಾಲಾ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಆಗ್ರಹಿಸಿದರು ಮತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರದ ಶಿಕ್ಷಣ ವಿರೋಧಿ ನೀತಿಗಳ ವಿರುದ್ಧ ಘೋಷಣೆ ಕೂಗಿದರು. ನಂತರ ಸಾಂಕೇತಿಕವಾಗಿ ರಾಜ್ಯ ಸರ್ಕಾರದ ಪ್ರತಿಕೃತಿ ದಹನ ಮಾಡಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ನಂತರ ಪ್ರತಿಭಟನಾ ನಿರತರನ್ನು ಉದ್ದೇಶಿಸಿ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ ಮಾತನಾಡಿ, ಕರ್ನಾಟಕ ರಾಜ್ಯದ ಜ್ವಲಂತ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯಾದ್ಯಂತ ಚಳುವಳಿಯನ್ನು ನಡೆಸಲಾಗುತ್ತಿದೆ. ರಾಜ್ಯಾದ್ಯಂತ ಇರುವ ಸರ್ಕಾರಿ ಶಾಲಾ–ಕಾಲೇಜುಗಳು ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದೇ ನರಳುತ್ತಿವೆ. ದೇಶದಲ್ಲಿ ಶೇ. 68 ರಷ್ಟು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ ಎಂಬ ಅಂಕಿ ಅಂಶವನ್ನು ಸರ್ಕಾರವೇ ಹೇಳುತ್ತಿದೆ. ಮರದ ನೆರಳಲ್ಲಿ, ಬಿಸಿಲಿನಲ್ಲಿ, ಕೆಲವಡೆ ಪಾಠ ನಡೆಯುತ್ತಿವೆ. ಶುದ್ದ ಕುಡಿಯುವ ನೀರು, ಸುಸಜ್ಜಿತ ಕಟ್ಟಡ, ಬೆಂಚುಗಳು, ಗ್ರಂಥಾಲಯ, ಕ್ರೀಡಾಂಗಣಗಳು ಸೇರಿದಂತೆ ಇನ್ನಿತರ ಮೂಲಭೂತ ಸೌಲಭ್ಯವಿಲ್ಲದೇ ಸರ್ಕಾರಿ ಶಿಕ್ಷಣ ಸಂಸ್ಥೆಗಳು ನರಳುತ್ತಿವೆ. ಜಿಲ್ಲೆಯಾದ್ಯಂತ ಇರುವ ಸರ್ಕಾರಿ ಶಾಲಾ ಕಾಲೇಜುಗಳು ಸಹ ಇದಕ್ಕೆ ಹೊರತಾಗಿಲ್ಲ. ಹಾವೇರಿಯ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಆರಂಭವಾಗಿ 12 ವರ್ಷಗಳು ಕಳೆದರೂ ಸ್ವಂತ ಕಟ್ಟಡವಿಲ್ಲದೆ ನರಳುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದು ಇದುವರೆಗೂ ಆಳ್ವಿಕೆ ನಡೆಸಿದ ಸರಕಾರಗಳು ಹಾಗೂ ಜಿಲ್ಲಾಡಳಿತ ಜಿಲ್ಲೆಗೆ ಪ್ರಮುಖವಾಗಿ ಸರ್ಕಾರಿ ಕಾನೂನು ಕಾಲೇಜು, ಸರ್ಕಾರಿ ಡಿಪ್ಲೋಮಾ, ಪ್ರತಿ ತಾಲೂಕಿಗೂ ಐಟಿಐ ಕಾಲೇಜು ಸ್ಥಾಪಿಸಬೇಕೆಂದು ಪ್ರತಿಭಟನೆ ನಡೆಸಿದರೂ ಸ್ಪಂದಿಸುತ್ತಿಲ್ಲ ಎಂದರು. ವಿಭಾಗವಾರು ವಿದ್ಯಾರ್ಥಿಗಳ ವಸತಿ ನಿಲಯ ಆರಂಭಿಸಿ, ಹಾಸ್ಟೆಲ್ ವಿದ್ಯಾರ್ಥಿಗಳ ಆಹಾರ ಭತ್ಯೆ ಹೆಚ್ಚಳಕ್ಕಾಗಿ ಆಗ್ರಹಿಸಿದರು. ಪಿ.ಯು. ಮತ್ತು ಪದವಿ ಶಿಕ್ಷಣ ರಾಜ್ಯದಲ್ಲಿ ಚಿಂತಾಜನಕವಾಗಿದೆ. ಉನ್ನತ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಸರಕಾರ ಆಸಕ್ತಿ ತೋರುತ್ತಿಲ್ಲ.

ಎಸ್‌ಎಫ್‌ಐ ತಾಲೂಕು ಅಧ್ಯಕ್ಷರಾದ ಪ್ರಸನ್ನ ಹಿರೇಮಠ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುಭಾಸ. ಎಂ. ಮಾತನಾಡಿದರು. ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ತಾಲೂಕು ಕಾರ್ಯದರ್ಶಿಯಾದ ಇಮಾಮ್ ನದಾಫ, ಸಿಐಟಿಯು ಮುಖಂಡರಾದ ನಾರಾಯಣ ಕಾಳೆ, ವಿಜಯಕುಮಾರ ಶಂಕ್ರಪ್ಪನವರ, ಚನ್ನಬಸಪ್ಪ ದುರ್ಗದ, ಪ್ರದೀಪ ಉಪ್ಪಾರ, ಮಂಜುಳಾ ಪಡಿಗೋದಿ, ಶಿವಕುಮಾರ್ ಎಚ್, ಪ್ರಭು ಅಳೀಮರದ, ಸಿದ್ದಪ್ಪ ಕೊಡಮಂಗಿ, ಅರುಣ, ಸಂಜಯ ಕಾಗಿನೆಲೆ, ಅಕ್ಷಯ, ಕಿರಣ ಹಡಪದ, ಮಲ್ಲಿಕಾರ್ಜುನ, ಮಜುನಾಥ ರಾಜನಾಳಕರ ಮುಂತಾದವರಿದ್ದರು.

ಗದಗ

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸೇವಾ ಕ್ಷೇತ್ರವಾದ ಶಿಕ್ಷಣವನ್ನು ಕಡೆಗಣಿಸಿ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೋಮುವಾದೀಕರಣ ಮಾಡಲು ಹೊರಟಿರುವುದರ ವಿರುದ್ಧ ಹಾಗೂ ಶಿಕ್ಷಣ ವಿರೋಧಿ ನೀತಿಗಳ ವಿರುದ್ದ ಹಾಗೂ ರಾಜ್ಯದ ಶಿಕ್ಷಣ ಕ್ಷೇತ್ರ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳಬೇಕಾದರೆ ಮುಂಬರುವ ಬಜೆಟ್‌ನಲ್ಲಿ 1966 ರಲ್ಲಿ ಶಿಕ್ಷಣ ತಜ್ಞ ಕೊಠಾರಿ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರ ಶೇ.30ರಷ್ಟು, ಕೇಂದ್ರ ಸರ್ಕಾರ ಶೇ.10ರಷ್ಟು ಹಾಗೂ ಒಟ್ಟಾರೆ ಜಿಡಿಪಿಯಲ್ಲಿ ಶೇ.6ರಷ್ಟನ್ನು ಮೀಸಲಿಡಬೇಕೆಂದು ಹಾಗೂ ಈ ಮೂಲಕ ಶಿಕ್ಷಣ ಕ್ಷೇತ್ರವನ್ನು ಆದ್ಯತೆ–ಯಾಗಿ ಪರಿಗಣಿಸಬೇಕೆಂದು ಆಗ್ರಹಿಸಿ ನಡೆದ ಪ್ರತಿಭಟನೆಯಲ್ಲಿ ಗದಗ್ ನಗರದ ಶಾಲಾ–ಕಾಲೇಜು ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಗಾಂಧಿ ಸರ್ಕಲ್‌ನಲ್ಲಿ ಪ್ರದರ್ಶನ ನಡೆಸಿದರು. 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಾಗವಹಿಸಿದ್ದರು.

ಹೋರಾಟಗಾರರನ್ನು ಉದ್ದೇಶಿಸಿ ಎಸ್.ಎಫ್.ಐ. ಗದಗ್ ಜಿಲ್ಲಾ ಕಾರ್ಯದರ್ಶಿ ಶಿವಾನಂದ ಬೋಸ್ಲೆ ಮಾತನಾಡಿ ಸರ್ಕಾರಿ ಶಾಲಾ–ಕಾಲೇಜುಗಳು ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದೇ ನರಳುತ್ತಿವೆ. ಪಿ.ಯು. ಮತ್ತು ಪದವಿ ಶಿಕ್ಷಣ ರಾಜ್ಯದಲ್ಲಿ ಚಿಂತಾಜನಕವಾಗಿದೆ. ವೃತ್ತಿ ಶಿಕ್ಷಣ ಮಾರಾಟದ ಸರಕಾಗಿದೆ ಎಂದು ಖಂಡಿಸಿದರು. ಜಿಲ್ಲಾಧ್ಯಕ್ಷ ಶಿವು ಚವ್ಹಾಣ ಸಹ ಮಾತನಾಡಿದರು.

ಈ ಹೋರಾಟವನ್ನು ಬೆಂಬಲಿಸಿ ಡಿ.ವೈ.ಎಫ್.ಐ.ನ ಜಿಲ್ಲಾ ಸಂಚಾಲಕ ಪೀರು ರಾಠೋಡ ಮಾತನಾಡಿ ಗದಗ ಜಿಲ್ಲೆಯ ಗಜೇಂದ್ರಗಡದ ಆಶ್ರಮ ಶಾಲೆ ಪ್ರಾರಂಭಿಸಬೇಕು. ಗದಗ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಬಾಕಿ ಇರುವ 47ಲಕ್ಷ ಹಣವನ್ನು ಈ ಕೂಡಲೇ ಬಿಡುಗಡೆ ಮಾಡಬೇಕು. ಗದಗ ಜಿಲ್ಲೆಯಲ್ಲಿ ಅಗತ್ಯಕ್ಕೆ ತಕ್ಕಂತೆ ವಸತಿ ನಿಲಯಗಳನ್ನು ಪ್ರಾರಂಭಿಸಬೇಕು ಎಂದರು.

ಈ ಹೋರಾಟವನ್ನು ಬೆಂಬಲಿಸಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಂಚಾಲಕ ಬಾಲು ರಾಠೋಡ ಮಾತನಾಡಿ ಓಬಿಸಿ ಬಡ ವಿದ್ಯಾರ್ಥಿಗಳಿಗೆ ಸೌಲಭ್ಯ ನೀಡುವಾಗ ಅಂಕದ ಮಾನದಂಡ ಕೈಬಿಡಬೇಕು, ಓಬಿಸಿ ಬಡ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯತಿ ನೀಡಬೇಕು ಎಂದು ಒತ್ತಾಯಿಸಿದರು.

ಹೋರಾಟದ ನೇತೃತ್ವವನ್ನು ಜಿಲ್ಲಾ ಮುಖಂಡರಾದ ಸಂತೋಷ ಮಾಳೋತ್ತರ, ಮಲ್ಲಿಕಾರ್ಜುನ ಪೂಜಾರ, ನೇಹಲ್‌ಸಿಂಗ್ ಬ್ಯಾಳಿ, ಗಣೇಶ ರಾಠೋಡ, ಪರಮೇಶ ಪೂಜಾರ, ವಸಂತ, ರಾಘು, ಬಸು, ಮಾಂತೇಶ ಪೂಜಾರ, ದಾನರೆಡ್ಡಿ ರಾಠೋಡ, ಗೋಪಾಲ, ಕಾರ್ತಿಕ, ರೇಣುಕಾ, ಶಿಲ್ಪಾ, ಜ್ಯೋತಿ, ಸಾವಿತ್ರಿ, ಸರೋಜಾ, ರಮ್ಯಾ, ಮಾಲಾ ಮುಂತಾದವರು ಭಾಗವಹಿಸಿದ್ದರು.

ಚಿಂತಾಮಣಿ : ಯಶಸ್ವಿ ಶಾಲಾ–ಕಾಲೇಜು ಬಂದ್

ರಾಜ್ಯದ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿ ರಾಜ್ಯವ್ಯಾಪಿ ಕರೆ ನೀಡಿದ್ದ ಶಾಲಾ–ಕಾಲೇಜು, ವಿ.ವಿ. ಬಂದ್ ಕರೆಗೆ ಚಿಂತಾಮಣಿಯಲ್ಲಿ ಉತ್ತಮ ಪ್ರತಿಕ್ರಿಯೆ ದೊರೆಯಿತು.

ನಗರದ ವಿಕ್ರಮ್ ಕಾಲೇಜಿನಿಂದ ನೂರಾರು ವಿದ್ಯಾರ್ಥಿಗಳು ಮೆರವಣಿಗೆ ಹೊರಟು ಬೆಂಗಳೂರು ವೃತ್ತದಿಂದ ಸಾಗಿ ತಾಲ್ಲೂಕು ಕಛೇರಿ ಮುಂಭಾಗ ಸರ್ಕಾರದ ಭೂತ ದಹನ ಮಾಡಿ ತಾಲ್ಲೂಕು ದಂಡಾಧಿಕಾರಿಗಳಿಗೆ ಮನವಿಯನ್ನು

ಪುಟ 10 ಕ್ಕೆ


ಗಂಗಾವತಿ



ಹಾವೇರಿ



ಚಿಂತಾಮಣಿ



ಕೋಲಾರ



ಗಂಗಾವತಿ



ಕೊಪ್ಪಳ



ಗದಗ



ಧಾರವಾಡ

ಜಮ್ಮು-ಕಾಶ್ಮೀರದಲ್ಲಿ ಪ್ರವಾಹ ರಕ್ಷಣಾ ಮತ್ತು ಪರಿಹಾರ ಕಾರ್ಯ ಹೆಚ್ಚಬೇಕು. ಉದಾರ ಧನ ಸಹಾಕ್ಕಾಗಿ ಜನತೆಯಲ್ಲಿ ಮನವಿ



ಅತ್ಯಂತ ಘೋರ ಮತ್ತು ವಿಸ್ತೃತವಾಗಿ ಜಮ್ಮು ಕಾಶ್ಮೀರವನ್ನು ಅಪಾರವಾಗಿ ಹಾನಿ ಮಾಡಿರುವ ಭೀಕರ ಪ್ರವಾಹದ ಬಗ್ಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಪೋಲಿಟ್ ಬ್ಯೂರೋ ತನ್ನ ತೀವ್ರ ಆತಂಕ ಹಾಗೂ ಕಾಳಜಿಯನ್ನು ವ್ಯಕ್ತಪಡಿಸಿದೆ. ಈ ಪ್ರವಾಹವು ನೂರಾರು ಜೀವಗಳನ್ನು ಬಲಿ ತೆಗೆದುಕೊಂಡಿದೆ. ಅಪಾರವಾಗಿ ಆಸ್ತಿ-ಪಾಸ್ತಿಯನ್ನು ನಾಶಗೊಳಿಸಿದೆ. ಲಕ್ಷಾಂತರ ಜನರು ಮನೆ-ಮಾರು ಕಳೆದುಕೊಂಡು ನಿರ್ಗತಿಕರನ್ನಾಗಿಸಿ ನಿರಾಶ್ರಿತರನ್ನಾಗಿಸಿದೆ.

ಈಗ ಆಗಬೇಕಾದುದು ಬಹಳಾ ಇದೆ. ನಮ್ಮ ಸೈನ್ಯ, ಅರೆ ಮಿಲಿಟರಿ ಪಡೆಗಳು ಹಗಲೂ-ರಾತ್ರಿಯೆನ್ನದೇ ರಕ್ಷಣಾ ಕಾರ್ಯದಲ್ಲಿ ತೊಡಗಿವೆ. ರಾಜ್ಯ ಸರಕಾರದ ಆಡಳಿತಕ್ಕೆ ಪ್ರಸ್ತುತ ಸಂದರ್ಭವನ್ನು ಎದುರಿಸಲು ಸಾಧ್ಯವಾಗುತ್ತಿಲ್ಲ. ಈಗಲೂ ರಕ್ಷಣಾ ಮತ್ತು ಪರಿಹಾರ ಕಾರ್ಯಗಳು ನಡೆದಿರುವಾಗಲೂ ಆಹಾರ ಹಾಗೂ ಅಗತ್ಯ ವಸ್ತುಗಳ ಕೊರತೆ, ಸಂಪರ್ಕದ ಕಡಿತದಂತಹ ಸಮಸ್ಯೆಗಳಿಂದ ನರಳುವ ಸ್ಥಿತಿ ಇದೆ. ವಿವಿಧ ಏಜನ್ಸಿಗಳ ಮೂಲಕ ಪರಿಹಾರ ಮತ್ತು ರಕ್ಷಣಾ ಕಾರ್ಯಗಳನ್ನು ಕೇಂದ್ರ ಸರಕಾರ ಹೆಚ್ಚಿಸಬೇಕು.

ಇಂತಹ ತೀವ್ರ ಸಂಕಷ್ಟದಲ್ಲಿರುವ ಜನತೆಗೆ ಪರಿಹಾರ ಮತ್ತು ಪುನರ್ವಸತಿ ಕೆಲಸ ಮಾಡಲು ಪಕ್ಷದ ಎಲ್ಲಾ ಘಟಕಗಳು ಧುಮುಕಬೇಕು, ಹಣ ಸಂಗ್ರಹ ಮಾಡಬೇಕೆಂಬ ತನ್ನ ಕರೆಯನ್ನು 2014 ಸೆಪ್ಟಂಬರ್ 10ರಿಂದ 12 ರವರೆಗೆ ನವದೆಹಲಿಯಲ್ಲಿ ಸಭೆ ಸೇರಿರುವ ಸಿ.ಪಿ.ಐ.(ಎಂ) ಪಿ.ಬಿ. ಪುನರುಚ್ಛರಿಸಿದೆ.

ಉದಾರವಾಗಿ ಧನ ಸಹಾಯ ನೀಡಲು ಜನತೆಯಲ್ಲಿ ವಿನಂತಿಸಿದೆ. ●

ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗಾಗಿ...

ಪುಟ 8 ರಿಂದ

ಸಲ್ಲಿಸಲಾಯಿತು.

ಬರ ಪೀಡಿತ ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಶಾಲಾ- ಕಾಲೇಜು ಶುಲ್ಕಗಳು ವಿನಾಯಿತಿ ಮಾಡಬೇಕು. ಬಯಲು ಸೀಮೆಗೆ ಡಾ.ಪರಮಶಿವಯ್ಯ ವರದಿ ಆಧಾರಿತ ಶಾಶ್ವತ ನೀರಾವರಿ ಯೋಜನೆಗಳು ಜಾರಿಯಾಗಬೇಕು. ಅರ್ಜಿ ಸಲ್ಲಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್‌ನಲ್ಲಿ ಪ್ರವೇಶ ನೀಡಬೇಕು. ಖಾಸಗಿಯಾಗಿ ತೇರ್ಗಡೆಯಾದ ಪಿಯುಸಿ ವಿದ್ಯಾರ್ಥಿಗಳ ದಾಖಲಾತಿಯನ್ನು ರದ್ದುಪಡಿಸಿರುವುದನ್ನು ತೆರವುಗೊಳಿಸಬೇಕೆಂದು ಎಸ್.ಎಫ್.ಐ. ಜಿಲ್ಲಾ ಉಪಾಧ್ಯಕ್ಷ ಬಾಬುರೆಡ್ಡಿ ಆಗ್ರಹಿಸಿದರು.

ಎಸ್.ಎಫ್.ಐ. ತಾಲ್ಲೂಕು ಅಧ್ಯಕ್ಷರಾದ ಸುಮತಿ, ಮುಖಂಡರಾದ ವೇಣು, ನರಸಿಂಹ, ಕೃಷ್ಣ, ಆನಂದ ಇನ್ನಿತರರು ನೇತೃತ್ವ ವಹಿಸಿದ್ದರು.

ಇದೇ ರೀತಿ ರಾಜ್ಯದ ನಾನಾ ಜಿಲ್ಲೆಗಳಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಪಾಲ್ಗೊಂಡ ಪ್ರತಿಭಟನೆಗಳು ನಡೆದಿವೆ.

ಎಸ್‌ಎಫ್‌ಐ ನಿಯೋಗದಿಂದ ಸಚಿವರ ಭೇಟಿ

ಚಳುವಳಿಯ ಬೇಡಿಕೆಗಳ ಕುರಿತು ಒತ್ತಾಯಿಸಲು ಎಸ್‌ಎಫ್‌ಐ ಮುಖಂಡರ ನಿಯೋಗವು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ, ಉನ್ನತ ಶಿಕ್ಷಣ ಸಚಿವರಾದ ಆರ್.ವಿ. ದೇಶಪಾಂಡೆಯವರನ್ನು ಕಂಡು ಮನವಿ ಸಲ್ಲಿಸಿ ಚರ್ಚೆ ನಡೆಸಿದೆ. ಅದೇ ರೀತಿ ರಾಜ್ಯದ ಮುಖ್ಯಂತ್ರಿಯವರಿಗೂ ಮನವಿ ಸಲ್ಲಿಸಲಾಗಿದೆ. ರಾಜ್ಯ ಸರ್ಕಾರದ ಪ್ರತಿಕ್ರಿಯೆಯನ್ನು ಕಾದು ನೋಡಲಾಗುತ್ತಿದೆ. ●



ಮೈಸೂರು



ಯಲಬುರ್ಗಾ



ಕಾರವಾರ

ದಲಿತರ ಮೇಲಿನ ದೌರ್ಜನ್ಯ ಖಂಡಿಸಿ..........

ಪುಟ 5 ರಿಂದ

ವೃತ್ತದ ಬಳಿ ಪ್ರತಿಭಟನಾ ಪ್ರದರ್ಶನ ನಡೆಯಿತು. ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಸರ್ಕಾರದ ತುರ್ತು ಸ್ಪಂದನೆಗೆ ಆಗ್ರಹಿಸಿದರು. ಸಿಪಿಐ(ಎಂ) ಮುಖಂಡರು ಹಾಗೂ ದಲಿತ ಹಕ್ಕು ಸಮಿತಿಯ ಮುಖಂಡರಾದ ಗೋಪಾಲ ಕೃಷ್ಣ ಹರಳಹಳ್ಳಿ, ನಾಗರಾಜ್, ಹನುಮಂತರಾವ್ ಹವಾಲ್ದಾರ್ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ

ರಾಜ್ಯ ಸಮಿತಿ ಕರೆನೀಡಿದ ಸೆ. 11 ಒಂದು ದಿನ ಮೊದಲೇ ಅಂದರೆ ಸೆ. 10 ರಂದೇ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ, ಗೌರಿಬಿದನೂರು ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಛೇರಿಯ ಮುಂದೆ ಪ್ರತಿಭಟನೆ ನಡೆಸಲಾಗಿದೆ.

ಕೋಲಾರ: ಡಿಸಿಗೆ ಮನವಿ

ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ ಕಚೇರಿಯ ಮುಂದೆ ನಡೆದ ಪ್ರತಿಭಟನೆಯ ನಂತರ ಸಿಪಿಐ(ಎಂ) ನಿಯೋಗ ಜಿಲ್ಲಾಧಿಕಾರಿಗಳನ್ನು ಕಂಡು ಮನವಿ ಪತ್ರ ಸಲ್ಲಿಸಿದೆ.

ಗುಲ್ಬರ್ಗಾದಲ್ಲಿ

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯಲ್ಲಿ ಶರಣ ಬಸಪ್ಪ ಮಮಶೆಟ್ಟಿಯವರ ನೇತೃತ್ವದಲ್ಲಿ ಕಾರ್ಯಕರ್ತರು ಮುಖಂಡರು ಪ್ರತಿಭಟನೆ ನಡೆಸಿದ್ದಾರೆ. ಜಿಲ್ಲಾ ಕೇಂದ್ರವಾದ ಗುಲ್ಬರ್ಗಾದಲ್ಲಿ ಪಕ್ಷದ ನಿಯೋಗ ಪೋಲಿಸ್ ಉನ್ನತಾಧಿಕಾರಿಯಾದ ಐಜಿಪಿಯವರನ್ನು ಕಂಡು ಮಾತನಾಡಿ ಸೂಕ್ತ ಕ್ರಮಕ್ಕಾಗಿ ಮನವಿ ಸಲ್ಲಿಸಿದೆ.

ಯಾದಗಿರ್

ಯಾದಗಿರ್ ಜಿಲ್ಲಾ ಕೇಂದ್ರದಲ್ಲಿ ಸುಮಾರು ನೂರು ಜನರ ಪ್ರತಿಭಟನೆ ನಡೆದಿದೆ.

ರಾಯಚೂರು ಪ್ರತಿಭಟನೆ

ಜಿಲ್ಲಾ ಕೇಂದ್ರವಾದ ರಾಯಚೂರಿನಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಮುಖಂಡರು ಪಾಲ್ಗೊಂಡ ಪ್ರತಿಭಟನೆ ನಡೆದಿದೆ.

ದಾವಣಗೆರೆಯಲ್ಲಿ ಪ್ರತಿಭಟನಾ ಪ್ರದರ್ಶನ

ದಾವಣಗೆರೆಯ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯಲ್ಲಿ ಕಾರ್ಯಕರ್ತರು, ಮುಖಂಡರು ಸಾಮಾಜಿಕ ನ್ಯಾಯ ಕೇಳಿದವರ ಮೇಲೆ ಹಲ್ಲೆ ನಡೆಸುವ ಸಂಸ್ಕೃತಿಯನ್ನು ಖಂಡಿಸಿದರು.

ಮೈಸೂರು ಮತ್ತು ಮಂಡ್ಯದಲ್ಲಿ

ಇದೇ ರೀತಿಯಾಗಿ ಮೈಸೂರು ಮತ್ತು ಮಂಡ್ಯದ ಎಸ್.ಪಿ. ಕಚೇರಿಯ ಮುಂದೆ ಸಹ ಪ್ರತಿಭಟನೆ ನಡೆದಿದೆ. ●

ಉಡುಪಿ ಹಾಗೂ ಕರಾವಳಿ ಜನರ ಬದುಕಿನ ಜೀವಂತ ಪ್ರಶ್ನೆಗಳು

ವಾರಾಹಿ ನೀರಾವರಿ ಯೋಜನೆ ಅಪೂರ್ಣ ! ಮುಚ್ಚಿದ ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ

ಕೆ. ಶಂಕರ್


ವಾರಾಹಿ ನೀರಾವರಿ

ಕರ್ನಾಟಕ ರಾಜ್ಯದ ಕರಾವಳಿ ಭಾಗದ ಜನರ ಬದುಕಿನ ಕೆಲವು ಮುಖ್ಯ ಪ್ರಶ್ನೆಗಳು ವಾರಾಹಿ ವಿದ್ಯುತ್ ಯೋಜನೆ ಪೂರ್ಣಗೊಂಡು ವಿದ್ಯುತ್ ತಯಾರು ಮಾಡಿದ ಬಳಿಕ ಹೆಚ್ಚುವರಿ ನೀರನ್ನು ನೀರಾವರಿ ಯೋಜನೆಯ ಮೂಲಕ ಬೇಸಾಯಕ್ಕಾಗಿ ಉಪಯೋಗಿಸಲು ಮತ್ತು ಕುಡಿಯುವ ನೀರಿಗಾಗಿ ಬಳಸುವ ಉದ್ದೇಶವಿತ್ತು. ಆದರೆ ಕಾಲುವೆ ನಿರ್ಮಾಣ ವಿಳಂಬವಾದುದರಿಂದ ನೀರಾವರಿ ಯೋಜನೆ ಪೂರ್ಣಗೊಳಿಸಲು ಕಳೆದ 35 ವರ್ಷಗಳಿಂದಲೂ ಸಾಧ್ಯವಾಗಿಲ್ಲ.

ನೀರಾವರಿ ಯೋಜನೆಯ ಕಾಲುವೆ ನಿರ್ಮಾಣಗೊಳಿಸಿ ಯೋಜನೆ ಪೂರ್ಣಗೊಳಿಸಿದಲ್ಲಿ ಕುಂದಾಪುರ ಮತ್ತು ಉಡುಪಿ ತಾಲೂಕುಗಳ ಹೆಚ್ಚಿನ ಪ್ರದೇಶಗಳಲ್ಲಿ ಬೇಸಾಯಕ್ಕೆ ಉಪಯೋಗಿಸಬಹುದು. ಒಂದು ಬೆಳೆ ಬೆಳೆಸುವವರು ಎರಡು ಬೆಳೆ ಬೆಳೆಸಬಹುದು. ಎರಡು ಬೆಳೆ ಬೆಳೆಸುವವರು ಮೂರು ಬೆಳೆ ಬೆಳೆಸಬಹುದು. ಕುಡಿಯುವ ನೀರಿನ ಸಮಸ್ಯೆ ಇದ್ದ ಪ್ರದೇಶಕ್ಕೆ ಸಿಹಿ ನೀರು ಹರಿಸಬಹುದು. ಇಷ್ಟು ಉಪಯುಕ್ತವಾದ ನೀರಾವರಿ ಯೋಜನೆ ಪೂರ್ಣಗೊಳಿಸಲು ಸುಮಾರು 35 ವರ್ಷಗಳು ಕಳೆದರೂ ಯಾಕೆ ಸಾಧ್ಯವಾಗಲಿಲ್ಲ? ಕೋಟಿಗಟ್ಟಲೆ ಹಣ ಖರ್ಚು ಮಾಡಿ ಕಾಲುವೆ ನಿರ್ಮಾಣ ವಿಳಂಬ ಯಾಕೆಂಬುದನ್ನು ಜನರಿಗೆ ತಿಳಿಸಬೇಕಾಗಿದೆ. ಯಾರು ಎಷ್ಟು ಭ್ರಷ್ಟಾಚಾರ ನಡೆಸಿದ್ದಾರೆ. ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು? ಈವರೆಗೆ ಖರ್ಚಿನ ಅಂದಾಜು, ಮುಂದೆ ಎಷ್ಟು ಬೇಕು ಅನ್ನುವ ಬಗ್ಗೆ ಸರ್ಕಾರ ಮತ್ತು ಅಧಿಕಾರಿಗಳು ಸ್ಪಷ್ಟಪಡಿಸಬೇಕಿದೆ.

'ರೈತರ ಆಸ್ತಿ' – ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ ಪುನಃಶ್ಚೇತನಗೊಳ್ಳಲಿ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಶ್ರೇಯೋಭಿವೃದ್ಧಿಗಾಗಿ ರೈತರಿಂದ ರೈತರಿಗಾಗಿ ವಿಶಾಲವಾದ 110 ಎಕರೆ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟ ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆ 'ರೈತರ ಆಸ್ತಿ' ಎನ್ನುವ ವಿಚಾರ ಎರಡು ಜಿಲ್ಲೆಯ ರೈತರು ಮನಗಾಣ ಬೇಕಾಗಿದೆ. ಸಕ್ಕರೆ ಕಾರ್ಖಾನೆಯ ಪುನಃಶ್ಚೇತನದ ಬಗ್ಗೆ ರೈತರ ಹೋರಾಟ ತೀರಾ ಅವಶ್ಯವಿದೆ.

ಒಟ್ಟು 3,880 ಎಕರೆ ನೀರಾವರಿಗೆ ಕೆ.ಎಸ್.ಎನ್ ನಿಂದ ಸುಮಾರು 850 ಕೋಟಿ ವೆಚ್ಚ ಮಾಡುವ ವಾರಾಹಿ ನೀರಾವರಿ ಯೋಜನೆಯಲ್ಲಿ 19,000 ಎಕರೆ ಪ್ರದೇಶದಲ್ಲಿ ಕಬ್ಬಿನ ಬೆಳೆಗೆ ನೀರಾವರಿ ಒದಗಿಸುವ ಉದ್ದೇಶವಿದೆ. ನೀರಾವರಿ ಯೋಜನೆ ಅನುಷ್ಠಾನವಾದಲ್ಲಿ ಗದ್ದೆಗಳ ಸುತ್ತ ಕಾಲುವೆಗಳಲ್ಲಿ ಹರಿಯುವ ನೀರಿನಲ್ಲಿ ಸೂಕ್ತ ಬೆಳೆ ಬೆಳೆಸದೇ ಹೋದಲ್ಲಿ ನೀರು ವ್ಯರ್ಥವಾಗಿ ಸಮುದ್ರ ಸೇರಲು ಬಿಡಬೇಕೆ? ಎನ್ನುವ ಪ್ರಶ್ನೆ ಬರುತ್ತದೆ. ವಾರಾಹಿ ನೀರಾವರಿ ಯೋಜನೆಗೆ ಹೊಂದಿಕೊಂಡು ಸ್ಥಾಪಿಸಿದ ಈ ಕಬ್ಬಿನ ಕಾರ್ಖಾನೆಯ ಪುನಃಶ್ಚೇತನಕ್ಕೆ ಸರ್ಕಾರ ಗಮನ ನೀಡಬೇಕಾಗಿದೆ. ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಲ್ಲಿ ತೀರಾ ಅಗತ್ಯಬೇಕಾಗಿದೆ.

ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಜಿಲ್ಲೆಯ ರೈತರ ಆಸ್ತಿ. ಬ್ರಹ್ಮಾವರದಲ್ಲಿರುವ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾದ ಹೆಚ್. ಜಯಶೀಲ ಶೆಟ್ಟಿಯವರು ಇತ್ತೀಚೆಗೆ ನೀಡಿದ ಪತ್ರಿಕಾ ಹೇಳಿಕೆಯಿಂದ ಕಾರ್ಖಾನೆಯ ಜಮೀನು ಪರಭಾರೆ ಮಾಡುವ ಉದ್ದೇಶ ಹೊಂದಿದೆಯೇ ಎಂಬ ಅನುಮಾನಕ್ಕೆ ದಾರಿ ಮಾಡಿಕೊಟ್ಟಿದೆ.


ಬ್ರ.ಸ.ಸಕ್ಕರೆ. ಕಾರ್ಖಾನೆ

ಕಾರ್ಖಾನೆಗೆ ಸುಮಾರು 110 ಎಕರೆ ಜಮೀನು ಇದೆ ಎಂದು ಅಧ್ಯಕ್ಷರು ಹೇಳಿದ್ದಾರೆ.

ಯಾವುದೇ ಕಾರಣಕ್ಕೂ ಕಾರ್ಖಾನೆಯ ಜಮೀನನ್ನು ಪರಭಾರೆ ಮಾಡಬಾರದು. ಬದಲಾಗಿ ಸಕ್ಕರೆ ಕಾರ್ಖಾನೆಯನ್ನು ಲಾಭದಾಯಕವಾಗಿ ಹೇಗೆ ನಡೆಸಬಹುದು ಎಂಬುದರ ಬಗ್ಗೆ ಆಡಳಿತ ಮಂಡಳಿ ಗಮನ ಹರಿಸಬೇಕು. ಜತೆಯಲ್ಲಿ ಕಬ್ಬು ಮತ್ತು ಇತರೆ ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿದ ವಸ್ತುಗಳ ಉತ್ಪಾದನೆಗೂ ಕಾರ್ಖಾನೆ ಗಮನ ಹರಿಸಬೇಕು. ವಿದ್ಯುತ್ ಉತ್ಪಾದನೆಗೂ ಅವಕಾಶ ಇದೆ ಎಂದು ಪರಿಣಿತರು ಹೇಳುತ್ತಾರೆ.

ಕಾರ್ಖಾನೆ ಕಾರ್ಮಿಕರು ಮತ್ತು ರೈತರಿಗೆ ಬಾಕಿ ಪಾವತಿಸಲು ಈಗಾಗಲೇ 25 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ.ಗೆ ಅಡವಿಟ್ಟು ಹಣ ಪಡೆಯಲಾಗಿದೆ ಎಂದು ವರದಿಯಾಗಿದೆ. ಅಂದರೆ ಈ ಜಮೀನನ್ನು ಇತರೆ ಖಾಸಗಿ ಉದ್ದಿಮೆದಾರರಿಗೆ ಹಂಚುವ ಹುನ್ನಾರ ನಡೆಯುತ್ತಿದೆ ಎಂಬ ಅನುಮಾನ ಬಲವಾಗುತ್ತಿದೆ.

ಕಾರ್ಖಾನೆಯ ಅಧ್ಯಕ್ಷರು ಪತ್ರಿಕಾ ಹೇಳಿಕೆ ನೀಡಿ ಹಲವು ದಿನ ಕಳೆದರೂ ಕಾಂಗ್ರೆಸ್ ಮುಖಂಡರಾಗಲೀ, ಬಿಜೆಪಿ ಮುಖಂಡರಾಗಲೀ ಯಾವುದೇ ಹೇಳಿಕೆ ನೀಡದೆ ಇರುವುದನ್ನು ಗಮನಿಸಿದರೆ ಜಮೀನು ಪರಭಾರೆ ಮಾಡಿರುವುದರಲ್ಲಿ ಈ ಎರಡೂ ರಾಜಕೀಯ ಪಕ್ಷಗಳು ಶಾಮೀಲಾಗಿವೆ ಎಂದೇ ಅರ್ಥ.

ರೈತರು, ಕಬ್ಬು ಬೆಳೆಗಾರರು ನಿರಾಸಕ್ತರಾದರೆ ಕಾರ್ಖಾನೆ ಬಗ್ಗೆ ಮೌನಕ್ಕೆ ಶರಣಾದರೆ, ಭವಿಷ್ಯದಲ್ಲಿ ರೈತರ ಮಕ್ಕಳಿಗೆ ಅನ್ಯಾಯವಾಗುವುದು ಖಂಡಿತ. ಜನರ ಅಭಿವೃದ್ಧಿ ಕೃಷಿಕ್ಷೇತ್ರದಿಂದ ಹಾಗೂ ಜತೆಯಲ್ಲಿ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯಿಂದ ಮಾತ್ರ ಸಾಧ್ಯ. ಜಿಲ್ಲೆಯಲ್ಲಿರುವ ಒಂದು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಉಳಿಸಲು ವಾರಾಹಿ ವಿದ್ಯುತ್ ಯೋಜನೆ ಜತೆಯಲ್ಲಿ ವಾರಾಹಿ ನೀರಾವರಿ ಯೋಜನೆ ಸಂಪೂರ್ಣ ಕಾರ್ಯಗತಗೊಳಿಸಲು ಸಾಧ್ಯವಾಗಬೇಕಾಗಿದೆ. ಕೃಷಿ ಕ್ಷೇತ್ರದ ಅವಗಣನೆಯಿಂದಾಗುವ ದುಷ್ಪರಿಣಾಮ ರಾಷ್ಟ್ರದ ಸಮಸ್ಯೆಯಾಗಲಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ಉಡುಪಿ ಜಿಲ್ಲಾ ಘಟಕದ ನೇತೃತ್ವದಲ್ಲಿ ಹೋರಾಟದ ಕಾರ್ಯಕ್ರಮ ರೂಪುಗೊಳ್ಳಲಿದೆ. ವಾರಾಹಿ ವಿದ್ಯುತ್ ಯೋಜನೆ ಮತ್ತು ವಾರಾಹಿ ನೀರಾವರಿ ಯೋಜನೆ ಪೂರ್ಣಗೊಳಿಸಲು ಒತ್ತಾಯಿಸಿ ಈ ಹಿಂದೆ ಎರಡು ಬಾರಿ ಜಾಥಾ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಹೋರಾಟವನ್ನು ಮುಂದಕ್ಕೆ ಕೊಂಡೊಯ್ಯಬೇಕಾಗಿದೆ. ■

ಮೀನುಗಾರರ ಮತ್ತು ಮೀನುಗಾರಿಕಾ ಕಾರ್ಮಿಕರ ಬವಣೆ

ಭಾರತ ವಿಶಾಲವಾದ ದೇಶ. ವಿಶಾಲ ಕರಾವಳಿ, ಹಲವಾರು ದೊಡ್ಡ ನದಿಗಳು, ಅಣೆಕಟ್ಟುಗಳು, ಸರೋವರಗಳನ್ನು ಮತ್ತಿತರ ಹಲವಾರು ವಿವಿಧ ಮೀನುಗಾರಿಕಾ ಸೌಲಭ್ಯಗಳನ್ನು ಹೊಂದಿರುವ ದೇಶ. ಜಗತ್ತಿನಲ್ಲಿ ಸಮುದ್ರ ಮೀನುಗಾರಿಕೆಯಲ್ಲಿ ಭಾರತಕ್ಕೆ ಮೂರನೇ ಸ್ಥಾನ ಹಾಗೂ ಸಿಹಿ ನೀರು ಮೀನುಗಾರಿಕೆಯಲ್ಲಿ ಎರಡನೇ ಸ್ಥಾನವಿದೆ. ದೇಶದ ಸಾಮಾಜಿಕ, ಅರ್ಥಿಕ ಚಟುವಟಿಕೆಗಳಲ್ಲಿ ಮೀನುಗಾರಿಕಾ ವಲಯಕ್ಕೆ ಪ್ರಮುಖ ಸ್ಥಾನವಿದೆ. ಇದು ಹಲವಾರು ಇತರ ಪೂರಕ ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾಗಿದ್ದು, ವಿದೇಶಿ ಗಳಿಕೆ ದೃಷ್ಟಿಯಿಂದಲೂ ವಿಶಿಷ್ಟ ಸ್ಥಾನ ಗಳಿಸಿದೆ. ಈ ವ್ಯವಸಾಯವು ದೇಶದಲ್ಲಿ ಅರ್ಥಿಕವಾಗಿ ಹಿಂದುಳಿದ ಹಾಗೂ ಸಾಮಾಜಿಕವಾಗಿ ತುಳಿತಕ್ಕೊಳಗಾದ ವಿಶಾಲ ಜನಸಮುದಾಯಕ್ಕೆ ಉದ್ಯೋಗವನ್ನೊದಗಿಸುತ್ತದೆ.



ಯೋಜನಾ ಆಯೋಗದ ವರದಿಯ ಪ್ರಕಾರ ಸುಮಾರು 38.40 ಲಕ್ಷ ಜನರು ಈ ಉದ್ಯಮದ ಉತ್ಪಾದನಾ ಚಟುವಟಿಕೆಗಳಲ್ಲಿ ತೆ–ೂಡಗಿದ್ದಾರೆ. ಸುಮಾರು 38 ಲಕ್ಷ ಜನರು ಸಂಸ್ಕರಣ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ಒಟ್ಟಾರೆ ದೇಶದಲ್ಲಿ ಸುಮಾರು 3 ಕೋಟಿಗೂ ಹೆಚ್ಚು ಜನರು ಬದುಕು ಈ ಉದ್ಯಮವನ್ನು ಅವಲಂಬಿಸಿದೆ.

ಆದರೆ ಮೀನುಗಾರರ ಬದುಕು ಮಾತ್ರ ಅತ್ಯಂತ ಕಷ್ಟದಲ್ಲಿದೆ. ಅತ್ಯಂತ ಸಾಹಸಮಯ ದುಡಿಮೆಯಿಂದ ದೇಶದ ಅರ್ಥಿಕ ಬೆಳವಣಿಗೆಗೆ ಅಮೂಲ್ಯ ಕೊಡುಗೆ ನೀಡುತ್ತಿರುವ ಮೀನುಗಾರರು ಮತ್ತು ಮೀನುಗಾರಿಕಾ ಕಾರ್ಮಿಕರ ಬದುಕು ಮಾತ್ರ ಅತ್ಯಂತ ಬಡತನದಲ್ಲಿದೆ. ಅದರಲ್ಲೂ ಸಮುದ್ರದಲ್ಲಿ ಮೀನು ಹಿಡಿಯುವವರು ಯಾವುದೇ ಸಾಮಾಜಿಕ ಭದ್ರತೆಯಿಲ್ಲದೆ ಸಂಕಷ್ಟ ಎದುರಿಸುತ್ತಿದ್ದಾರೆ. ಅದೂ ವೃದ್ಧಾಪ್ಯದಲ್ಲಿ ಸಾಮಾಜಿಕವಾಗಿ ಕಡೆಗಣಿಸಲ್ಪಟ್ಟವರಾಗಿ ಯಾವುದೇ ಸವಲತ್ತುಗಳಿಲ್ಲದೆ ಒದ್ದಾಡುತ್ತಿದ್ದಾರೆ. ಅನಾರೋಗ್ಯ ಮತ್ತು ಅನಕ್ಷರತೆ, ಅವರ ಜೀವ ಹಿಂಡುತ್ತಿದೆ. ಅವರ ವಾಸಸ್ಥಳಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ವ್ಯವಸ್ಥೆಗಳಿಲ್ಲ.

ಮೀನುಗಾರರು ಮಳೆಗಾಲದಲ್ಲಿ 3–4 ತಿಂಗಳುಗಳ ಕಾಲ ಸಮುದ್ರಕ್ಕೆ ಹೋಗಲು ಸಾಧ್ಯವಾಗದೇ ಸಂಪಾದನೆ ಇಲ್ಲದೇ ಬಹಳ ಸಂಕಷ್ಟಕ್ಕೆ ಗುರಿಯಾಗುತ್ತಾರೆ. ಅಸಮರ್ಪಕ ಹಾಗೂ ಪರಿಣಾಮಕಾರಿಯಲ್ಲದ ಪೂರ್ವ ಸೂಚನಾ ವಿಧಾನಗಳಿಂದಾಗಿ ಸುಂಟರಗಾಳಿ, ಚಂಡಮಾರುತ ಮತ್ತು ಸುನಾಮಿ ಮತ್ತಿತರ ನೈಸರ್ಗಿಕ ವಿಕೋಪಗಳು ಹಲವಾರು ಬಾರಿ ನೂರಾರು ಮೀನುಗಾರರ ಕುಟುಂಬಗಳನ್ನು ನಿರ್ಗತಿಕರನ್ನಾಗಿಸಿದೆ. ತಮ್ಮ ದಾರಿಗಳನ್ನು ಕಳಕೊಂಡು ನೆರೆಯ ದೇಶಗಳ ಸಮುದ್ರಗಳಿಗೆ ಸೆಳೆಯಲ್ಪಟ್ಟ ಮೀನುಗಾರರು ಬಂಧಿಸಲ್ಪಟ್ಟು ಮರ್ಧನಕ್ಕೊಳಗಾಗುತ್ತಿದ್ದಾರೆ. ಎಷ್ಟೋ ಜನ ಮೀನುಗಾರರು ಈಗಲೂ ವಿದೇಶಗಳ ಜೈಲುಗಳಲ್ಲಿದ್ದಾರೆ.

ಮೀನುಗಾರಿಕಾ ಕ್ಷೇತ್ರದಲ್ಲಿ ಹೆಚ್ಚಾಗಿ ಮಹಿಳೆಯರು ಮತ್ತು ಇತರ ಪ್ರದೇಶಗಳಿಂದ ವಲಸೆ ಬಂದವರು ಇನ್ನೂ ಹೆಚ್ಚಿನ ಸುಲಿಗೆಗೊಳಗಾಗುತ್ತಿದ್ದಾರೆ. ಅವರಿಗೆ ಕನಿಷ್ಟ ವೇತನವಿಲ್ಲ. ಸಾಮಾಜಿಕ ಭದ್ರತೆ–ಯ ಸೌಲಭ್ಯಗಳಿಲ್ಲ. ಮೀನು ಸಂಸ್ಕರಣೆಯಲ್ಲಿ ದುಡಿಯುವ ಮಹಿಳಾ ಕಾರ್ಮಿಕರು ಲೈಂಗಿಕ ಕಿರುಕುಳಗಳನ್ನು ಎದುರಿಸಬೇಕಾದ ಸ್ಥಿತಿಗಳಿವೆ. ಮೀನು ಮಾರಾಟಗಾರರು ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ತಮ್ಮ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಕರ್ಯಗಳ ಕೊರತೆಯಿದೆ.

ಕೇಂದ್ರಸರಕಾರ ಮೀನುಗಾರಿಕಾ ಉದ್ಯಮಕ್ಕಿರುವ ಅರ್ಥಿಕ ಪಾಲು ಹಂಚಿಕೆ ಹೆಚ್ಚಿಸಬೇಕು. ರಾಜ್ಯ–ಕ್ಕೆ ಅದು ಸಮಾನವಾಗಿ ಹಂಚಿಕೆ ಹಾಗೂ

ಪುಟ 12 ಕ್ಕೆ

ಆರಂಭಗೊಂಡ 'ಪ್ರಜಾಸತ್ತಾತ್ಮಕ ಮಹಾ ಮಂಥನ'ದ ಪ್ರಕ್ರಿಯೆ

2015ರ ಎಪ್ರಿಲ್– ಆಂಧ್ರಪ್ರದೇಶದ ವಿಶಾಖ ಪಟ್ಟಣದಲ್ಲಿ ಸಿಪಿಐ(ಎಂ)ನ 21ನೇ ಮಹಾಧಿವೇಶನ

ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಮ್ಮೇಳನ

18 ರಿಂದ 21 ಜನವರಿ 2015 – ಸ್ವಾಗತ ಸಮಿತಿ ರಚನೆ

ಕಮ್ಯೂನಿಸ್ಟರ ಬಗೆಗೆ ಕಮ್ಯೂನಿಸ್ಟ್ ಪಕ್ಷದ ಬಗೆಗೆ ಸಮಾಜದಲ್ಲಿ ಎಷ್ಟೋ ತಪ್ಪು ಕಲ್ಪನೆಗಳನ್ನು ಹರಡಲಾಗಿದೆ. ಇದರಲ್ಲಿ 'ಕಮ್ಯೂನಿಸ್ಟರು ಪ್ರಜಾಪ್ರಭುತ್ವ ವಿರೋಧಿಗಳು, ಕಮ್ಯೂನಿಸ್ಟ್ ಪಕ್ಷದೊಳಗೆ ಪ್ರಜಾಪ್ರಭುತ್ವ ಇಲ್ಲ.' ಎಂಬ ಅರೋಪವು ಪ್ರಮುಖವಾದುದು. ವಿಚಿತ್ರವೆಂದರೆ ಕಮ್ಯೂನಿಸ್ಟ್ ಪಕ್ಷದೊಳಗೆ ಆಂತರಿಕ ಪ್ರಜಾಪ್ರಭುತ್ವ, ಪ್ರಜಾಸತ್ತಾತ್ಮಕ ಕಾರ್ಯಾಚರಣೆಗೆ ನೀಡಲಾಗುವ ಆದ್ಯತೆ ಬೇರೆ ಯಾವ ಪಕ್ಷದಲ್ಲಿಯೂ ಇಲ್ಲ.

ತನ್ನ ಸಂಘಟನಾ ವ್ಯಾಪ್ತಿಯಲ್ಲಿರುವ ಒಟ್ಟು ಸದಸ್ಯ ಬಳಗವನ್ನು ತನ್ನ ರಾಜಕೀಯ ಸೈದ್ಧಾಂತಿಕ, ಸಂಘಟನಾ ನೀತಿ ರೂಪಿಸುವ ಮತ್ತು ನಾಯಕತ್ವದ ಸಮಿತಿಗಳನ್ನು ಚುನಾಯಿಸುವ ಪ್ರಕ್ರಿಯೆಯಲ್ಲಿ ಅರ್ಥಪೂರ್ಣವಾಗಿ ತೊಡಗಿಸಲು ಯಾವುದೇ ನೈಜ ಕಮ್ಯೂನಿಸ್ಟ್ ಪಕ್ಷ ಗಂಭೀರವಾಗಿ ಪ್ರಯತ್ನಿಸುತ್ತದೆ.

ಒಂದು ರಾಜಕೀಯ ಪಕ್ಷದ ಆಂತರಿಕ ಪ್ರಜಾಪ್ರಭುತ್ವ ಅರ್ಥಪೂರ್ಣವಾದ ಅಚರಣೆ ಎಂದ–ರೆ ಸ್ಪಷ್ಟವಾದ ಖಚಿತವಾದ ಪ್ರಜಾಸತ್ತಾತ್ಮಕವಾದ ಸಂಘಟನಾ ಕ್ರಮಗಳ ಆಧಾರದಲ್ಲಿ ನಡೆಯುವ ಶಿಸ್ತುಬದ್ಧವಾದ ಸಮ್ಮೇಳನಗಳು. ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಅಖಿಲ ಭಾರತ ಸಮ್ಮೇಳನ ಅಥವಾ 'ಮಹಾಧಿವೇಶನ'ದ ಸಿದ್ಧತೆಗಳು ಆರಂಭವಾಗಿವೆ. ಸಿಪಿಐ(ಎಂ)ನ 21ನೇ ಮಹಾಧಿವೇಶನವು 2015ರ ಎಪ್ರಿಲ್14 ರಿಂದ 19 ರ ವರೆಗೆ ಆಂಧ್ರಪ್ರದೇಶದ ವಿಶಾಖ ಪಟ್ಟಣದಲ್ಲಿ ನಡೆಯಲಿದೆ. ಇದಕ್ಕೆ ಪೂರ್ವಭಾವಿಯಾಗಿ ನಾನಾ ರಾಜ್ಯ ಸಮ್ಮೇಳನಗಳು ನಡೆಯಲಿವೆ.

ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮ್ಮೇಳನವನ್ನು 2015ರ ಜನವರಿ 18ರಿಂದ 21ರ ವರೆಗೆ ಬೆಂಗಳೂರಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸುಮಾರು 26 ವರ್ಷಗಳ ನಂತರ ರಾಜ್ಯ ಸಮ್ಮೇಳನವು ಮತ್ತೆ ಬೆಂಗಳೂರಿನಲ್ಲಿ ನಡೆಯಲಿದೆ. ಈ ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸಲು ವಿಶಾಲವಾದ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಈ ಸಂಬಂಧ 7–9–2014 ಭಾನುವಾರ ಸಿಪಿಐ(ಎಂ)ನ ರಾಜ್ಯ 21ನೇ ಸಮ್ಮೇಳನದ ಸ್ವಾಗತ ಸಮಿತಿ ರಚನಾ ಸಭೆಯು ಬಬ್ಬೂರು ಗಿಡ್ಡಣ್ಣ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆದಿದೆ.



ಪೂರ್ವಭಾವಿ ಸಮ್ಮೇಳನಗಳು

ಈ ರಾಜ್ಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಜಿಲ್ಲಾ ಮಟ್ಟದ ಸಮ್ಮೇಳನಗಳು ನಡೆಯುತ್ತವೆ. ವಾಸ್ತವವಾಗಿ ಜನಸಮುದಾಯಗಳ ನಡುವೆ ಕೆಲಸ ಮಾಡುವ ತಳಹಂತದ ಶಾಖಾ ಸಮ್ಮೇಳನಗಳಿಂದ ಕ್ರಮವಾಗಿ ಈ ಪ್ರಕ್ರಿಯೆ ಆರಂಭವಾಗುತ್ತದೆ.

ಜ ನ ಸ ವ ು ು ದಾ ಂ ು ು ಗ ಳ ಭಾವನೆ, ಚಿಂತನೆ, ಟೀಕೆ, ವಿಮರ್ಶೆ, ಅವರ ಹೋರಾಟದ ಅನುಭವಗಳಿಂದ ಕಲಿಯುವ ಈ ಮಹಾ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಖಂಡಿತ ಒಂದು ಯಾಂತ್ರಿಕವಾದ ಕ್ರಿಯೆಗಳ ಸರಣಿಯಲ್ಲ. ನೈಜ ಪ್ರಜಾಪ್ರಭುತ್ವ ಅರಳುವ ಇಂತಹ ಪ್ರಕ್ರಿಯೆಯ ಮಹತ್ವದ ಬಗೆಗೆ ಎಷ್ಟೋ ಪಕ್ಷಗಳು, ಸಂಘಟನೆಗಳಿಗೆ ಅರ್ಥವೇ ಆಗುವುದಿಲ್ಲ. ಆದರೆ 'ಜನಶಕ್ತಿ ಕನ್ನಡ ವಾರಪತ್ರಿಕೆ'ಯು ನಿಜವಾಗಿಯೂ 'ಜನಶಕ್ತಿ' ಅಭಿವ್ಯಕ್ತಿಗೊಳ್ಳುವ ಇಂತಹ ಸಮ್ಮೇಳನಗಳ ರಾಜಕೀಯ ಚರ್ಚೆ–ವಿಮರ್ಶೆ ಚಿಂತನ ಮಂಥನಗಳ ವರದಿಯನ್ನು ನೀಡಲು ಪ್ರಯತ್ನಿಸಲಿದೆ. – ನೀರಿಕ್ಷಿಸಿ.

ಸ್ವಾಗತ ಸಮಿತಿ

ಪೋಷಕರು

ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಮಾಜಿ ಶಾಸಕರು, ವಿಜೆಕೆ ನಾಯರ್, ಜಿ.ಎನ್. ನಾಗರಾಜ್, ನಿತ್ಯಾನಂದ ಸ್ವಾಮಿ, ಎಸ್. ವರಲಕ್ಷ್ಮಿ, ಯು. ಬಸವರಾಜು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು. ಜಿ.ಸಿ.ಬಯ್ಯಾರೆಡ್ಡಿ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರು, ಅಮಾನುಲ್ಲಾ ಖಾನ್, ಅಧ್ಯಕ್ಷರು, ಅಖಿಲ ಭಾರತ ವಿಮಾ ನೌಕರರರ ಸಂಘ.

ಅಧ್ಯಕ್ಷರು

ಎಸ್. ಪ್ರಸನ್ನಕುಮಾರ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಸಿಐಟಿಯು ಪ್ರಧಾನ ಕಾರ್ಯದರ್ಶಿಗಳು.

ಕಾರ್ಯಾಧ್ಯಕ್ಷರು

ಹೆಚ್.ಎನ್.ಗೋಪಾಲಗೌಡ, ಸಿಐಟಿಯು ರಾಜ್ಯ ಉಪಾಧ್ಯಕ್ಷರು, ಎನ್.ವೆಂಕಟಾಚಲಯ್ಯ, ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷರು.

ಪ್ರಧಾನ ಕಾರ್ಯದರ್ಶಿಗಳು

ಪ್ರಕಾಶ್ ಕೆ., ಸಿಪಿಐ(ಎಂ) ದಕ್ಷಿಣ ಜಿಲ್ಲಾ ಕಾರ್ಯದರ್ಶಿ, ಮೀನಾಕ್ಷಿ ಸುಂದರಂ, ಸಿಪಿಐ(ಎಂ) ಉತ್ತರ ಜಿಲ್ಲಾ ಕಾರ್ಯದರ್ಶಿ.

ಸಂಘಟನಾ ಕಾರ್ಯದರ್ಶಿ

ಕೆ.ಎನ್. ಉಮೇಶ್.

ಖಜಾಂಚಿ

ಪ್ರತಾಪ್ ಸಿಂಹ, ಸಿಐಟಿಯು ಉತ್ತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ.

ಇವರಲ್ಲದೇ ಹಲವು ಹಿರಿಯ ಸಂಗಾತಿಗಳು, ಹಿತೈಷಿಗಳನ್ನು ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಸಹ ಕಾರ್ಯದರ್ಶಿಗಳು, ಸದಸ್ಯರುಗಳನ್ನಾಗಿ ಒಳಗೊಂಡ ಸಮಿತಿ ರಚನೆಯಾಗಿದೆ.

'ಚೀನಾ ಅಧ್ಯಯನ' ತಂಡದಲ್ಲಿ ಕಾಂ. ಎಸ್. ವರಲಕ್ಷ್ಮಿ



ಚೀನಾ ದೇಶದ ಸಮಾಜ, ಚೀನಾ ದೇಶದ ಅಭಿವೃದ್ಧಿ, ಚೀನಾ ಕಮ್ಯೂನಿಸ್ಟ್ ಪಕ್ಷದ ತಳಹಂತದಲ್ಲಿನ ಸಂಘಟನಾ ಸ್ವರೂಪ, ಜನರೊಂದಿಗಿನ ಒಡನಾಟ, ಪಕ್ಷದ ಸಿದ್ಧಾಂತ–ನೀತಿ ರೂಪಿಸುವ ಕ್ರಮ, ಪಕ್ಷದ ಸಂಘಟನೆ ಕಟ್ಟುವ ವಿಧಾನ, ರೈತ ತರಬೇತಿ ವಿಧಾನ ಇತ್ಯಾದಿ ವಿಷಯಗಳ ಕುರಿತ ಅಧ್ಯಯನದ ಉದ್ದೇಶಗಳೊಂದಿಗೆ ಚೀನಾ ದೇಶಕ್ಕೆ ಸಿಪಿಐ(ಎಂ) ತಂಡವೊಂದು ಭೇಟಿ ನೀಡುತ್ತಿದೆ.

ಸೆಪ್ಟೆಂಬರ್ 15 ರಿಂದ 24, 2014 ರವರೆಗೆ ಚೀನಾ ಆಧ್ಯಯನ ಪ್ರವಾಸ ಕೈಗೊಳ್ಳಲಿರುವ ಈ ತಂಡದಲ್ಲಿ ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವರಲಕ್ಷ್ಮಿಯವರು ಆಯ್ಕೆಯಾಗಿದ್ದಾ–ರೆ. ಎಸ್. ವರಲಕ್ಷ್ಮಿಯವರ ಆಧ್ಯಯನ ಪ್ರವಾಸ ಯಶಸ್ವಿಯಾಗಲಿ ಎಂದು 'ಜನಶಕ್ತಿ' ಹಾರೈಸುತ್ತದೆ.

ಮೀನುಗಾರರ ಮತ್ತು ಮೀನುಗಾರಿಕಾ ....

ಪುಟ 11 ರಿಂದ

ಮೀನುಗಾರಿಕಾ ಉದ್ಯಮಕ್ಕೆ ಸರಕಾರ ವಿತರಣೆ ಮಾಡಲು ಕ್ರಮಕೈಗೊಳ್ಳಬೇಕಾಗಿದೆ. ಮೀನುಗಾರರು ಮತ್ತು ಮೀನುಗಾರಿಕಾ ಕಾರ್ಮಿಕರಿಗೆ ಕೆಲಸದ ನಿಯಮಾವಳಿಗಳು, ಕನಿಷ್ಟ ವೇತನ ಮತ್ತು ಸಾಮಾಜಿಕ ಭದ್ರತಾ ಸವಲತಮ್ತುಗಳನ್ನೊದಗಿಸುವ ಕೇಂದ್ರೀಯ ಕಾಯಿದೆಯನ್ನು ಜಾರಿಗೊಳಿಸಬೇಕು.

ದೊಡ್ಡ ವಿದೇಶಿ ಹಡಗುಗಳಿಂದ ನಡೆಸಲಾಗುವ ಮೀನುಗಾರಿಕೆಗೆ ಸಂಬಂಧಪಟ್ಟಂತೆ 'ಮುರಾರಿ ಆಯೋಗ'ದ ತೀರ್ಪು ಜಾರಿಗೊಳಿಸಬೇಕು ಮತ್ತು ಭಾರತೀಯ ಸಮುದ್ರದಲ್ಲಿ ವಿದೇಶಿ ಮೀನುಗಾರಿಕೆಯನ್ನು ನಿಷೇಧಿಸಬೇಕು. ನಮ್ಮ ದೇಶದ ಮೀನುಗಳ ಜೀವ ವೈವಿಧ್ಯವನ್ನು ರಕ್ಷಿಸಲು ಬೇಕಾದ ಸೂಕ್ತ ಕ್ರಮಗಳನ್ನೊಳಗೊಳ್ಳುವ ಮೀನುಗಾರಿಕಾ ನಿಯಮಗಳನ್ನು ರೂಪಿಸಬೇಕು. ನಮ್ಮ ದೇಶದ ಮೀನುಗಾರರು ಬಿರುಗಾಳಿ ಚಂಡಮಾರುತಗಳಂತಹ ನೈಸರ್ಗಿಕ ವಿಕೋಪಗಳ ಪ್ರಭಾವದಿಂದ ನೆರೆದೇಶದ ಸಮುದ್ರದೊಳಗೆ ಪ್ರವೇಶಿಸಬೇಕಾದ ಪರಿಸ್ಥಿತಿಯಿಂದ ಅವರನ್ನು ರಕ್ಷಿಸಲು ಸೂಕ್ತ ಕಾನೂನು ಕ್ರಮವಹಿಸಬೇಕು.

ಸುನಾಮಿ, ಬಿರುಗಾಳಿ, ಚಂಡಮಾರುತಗಳಂತಹ ಹವಾಮಾನ ವೈಪರಿತ್ಯಗಳ ಕುರಿತ ಸಾಕಷ್ಟು ಮುಂಚಿತವಾಗಿ ಮೀನುಗಾರರಿಗೆ ತಿಳಿಸುವ ಕ್ರಮ ಕೈಗೂಳ್ಳಬೇಕು. ಮೀನು ಮಾರುಕಟ್ಟೆಗಳನ್ನು ಏಲಂ ಮಾಡಬಾರದು. ಮಹಿಳಾ ವ್ಯಾಪಾರಿಗಳಿಗೆ ಮತ್ತು ಅವರ ಸಹಕಾರಿ ಸಂಘಗಳಿಗೆ ಸಾಂ–ಕೇತಿಕ ಬಾಡಿಗೆಯಲ್ಲಿ ಒದಗಿಸಬೇಕು. ಮೀನು ಮಾರುಕಟ್ಟೆಗಳಲ್ಲಿ ನೀರು, ನೈರ್ಮಲ್ಯೀಕರಣ ಚರಂಡಿ, ಪಾಯಿಖಾನೆಗಳಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ತೀರಾ ಅವಶ್ಯ.

ಎಲ್ಲಾ ಮೀನುಗಾರಿಗೆ ಮತ್ತು ಮೀನುಗಾರಿಕಾ ಕಾರ್ಮಿಕರಿಗೆ ಬಿಪಿಎಲ್ ರೇಷನ್ ಕಾರ್ಡ್ ಒದಗಿಸಬೇಕು. ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ವಿತರಿಸಬೇಕು ಎನ್ನುವ ರಾಷ್ಟ್ರೀಯ ಮಾನ್ಯದ ಬೇಡಿಕೆಗಳನ್ನು ಅಖಿಲ ಭಾರತ ಮೀನುಗಾರರ ಮತ್ತು ಮೀನುಗಾರಿಕಾ ಕಾರ್ಮಿಕರ ಒಕ್ಕೂಟ (AIFFWF) ಮುಂದಿಟ್ಟು ಹೋರಾಟ ಮಾಡುತ್ತ ಬಂದಿದೆ. ರಾಜ್ಯದಲ್ಲಿ ಕೂಡಾ ಈ ಮೇಲಿನ ಬೇಡಿಕೆಗಳಿಗಾಗಿ ಮೀನುಗಾರರು ಮತ್ತು ಮೀನುಗಾರಿಕಾ ಕಾರ್ಮಿಕರನ್ನು ಸಂಘಟಿಸಿ, ಹೋರಾಟಗಳನ್ನು ರೂಪಿಸಬೇಕಾಗಿದೆ.

ಕರಾವಳಿಯಲ್ಲಿ ಹಾಗೂ ಕರ್ನಾಟಕದ ಒಳನಾಡು ಪ್ರದೇಶಗಳಲ್ಲಿ ಮೀನುಗಾರರ ಮತ್ತು ಮೀನು ಕಾರ್ಮಿಕರನ್ನು ಸಂಘಟಿಸುವ ಕೆಲಸ ಆರಂಭವಾಗಬೇಕಿದೆ. ಆ ಕ್ಷೇತ್ರದಲ್ಲಿರುವ ಕಾರ್ಮಿಕರ ನಡುವೆ ಸಂಘಟನೆ ಮತ್ತು ಹೋರಾಟಗಳನ್ನು ಬೆಳೆಸುವ ಮೂಲಕ ದುಡಿಯುವ ವರ್ಗದ ಒಂದು ಮುಖ್ಯ ಭಾಗವಾದ ಮೀನುಗಾರರ ಮತ್ತು ಮೀನು ಕಾರ್ಮಿಕರನ್ನು ಸಂಘಟಿಸ ಬೇಕಾಗಿದೆ ಮತ್ತು ಅವರ ಬೇಡಿಕೆಗಳನ್ನು ಇತ್ಯರ್ಥಪಡಿಸಲು ಸಾಧ್ಯವಾಗುವಂತಹ ಪ್ರಬಲ ಚಳುವಳಿ ರೂಪಿಸಬೇಕಿದೆ.

“ನಿರ್ಣಾಯಕ ಜನಾದೇಶದಿಂದಾಗಿ ಜಿಡಿಪಿ ಏರಿಕೆ ಎಂಬುದು ಬೌದ್ಧಿಕ ಬಾಲಿಶತನದ ಪ್ರದರ್ಶನ”

–ಪ್ರೊ.ಪ್ರಭಾತ್ ಪಟ್ನಾಯಕ್

ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಏರಿಕೆ ದರ 4.7ಶೇ.ದಿಂದ 5.7ಶೇ.ಕ್ಕೆ ಜಿಗಿದಿದೆ, ಇದು ತನ್ನ ಸರಕಾರ ಕೇವಲ ನೂರೇ ದಿನಗಳಲ್ಲಿ ತೋರಿಸಿರುವ ಸಾಧನೆ ಎಂದು ನರೇಂದ್ರ ಮೋದಿಯವರು ಮತ್ತು ಅವರ ಹಿಂಬಾಲಕರೆಲ್ಲ ಡಂಗುರ ಸಾರುತ್ತಿದ್ದಾರೆ. ಕಾರ್ಪೊರೇಟ್ ಪತ್ರಿಕೆಗಳು “ನರೇಂದ್ರ ಮೋದಿ ಸರಕಾರ ಪಡೆದ ಒಂದು ನಿರ್ಣಾಯಕ ಜನಾದೇಶ ಮತ್ತು ನಂತರದ ಅದರ ಕ್ರಮಗಳಿಂದಾಗಿ ಚುರುಕುಗೊಂಡ ಆರ್ಥಿಕ ಕಳೆದೆರಡು ವರ್ಷಗಳಲ್ಲಿಯೇ ಅತಿ ವೇಗದ ಬೆಳವಣಿಗೆ ಕಂಡಿದೆ” ಎಂದು ಬೋಪರಾಕು ಹಾಡುತ್ತಿವೆ.

“ಆದರೆ ಇವೆಲ್ಲ ಕೇವಲ ಬೊಗಳೆ ಎಂಬುದು ಈ ಮೂರು ತಿಂಗಳ ಬೆಳವಣಿಗೆಯ ಅಂಕಿ–ಅಂಶಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ” ಎನ್ನುತ್ತಾರೆ ಪ್ರಸಿದ್ಧ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್.

ಈ ತ್ರೈಮಾಸಿಕ ಎಂದರೆ ಎಪ್ರಿಲ್ 1, 2014ರಿಂದ ಜೂನ್ 30, 2014 ರವರೆಗಿನ ಅವಧಿ. ಕಳೆದ ವಾರ ಈ ಪತ್ರಿಕೆಯಲ್ಲಿ ಪ್ರಕಟವಾಗಿರುವ ಸೀತಾರಾಮ್ ಯೆಚೂರಿಯವರ ಲೇಖನದಲ್ಲಿ ಗಮನಿಸಿದಂತೆ ಈ ಮೂರು ತಿಂಗಳಲ್ಲಿ ಮೋದಿ ಸರಕಾರದ ಆಡಳಿತದ ಅವಧಿ ಒಂದೇ ತಿಂಗಳು. ಅಂದರೆ ಜೂನ್ 2014 ಮಾತ್ರ. ಏಕೆಂದರೆ ಮೋದಿಯವರು ಪ್ರಧಾನ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡದ್ದು ಮೇ 26ರಂದಷ್ಟೇ.

ಆದರೆ ಈ ಬೊಗಳೆಯ ಪ್ರಮಾಣ ಕೇವಲ ಒಂದು ತಿಂಗಳ ಆಳ್ವಿಕೆಯಲ್ಲಿ ಮೂರು ತಿಂಗಳ ಸಾಧನೆಯೆಲ್ಲ ತನ್ನದೇ ಎಂಬುದಷ್ಟೇ ಅಲ್ಲ. ಕೇಂದ್ರೀಯ ಅಂಕಿ–ಅಂಶಗಳ ಸಂಘಟನೆ(ಸಿಎಸ್‌ಒ) ಕಳೆದ ತಿಂಗಳ ಕೊನೆಯಲ್ಲಿ ಪ್ರಕಟಿಸಿದ ಈ ಮುಂದಿನ ಅಂಕಿ–ಅಂಶಗಳನ್ನು ನೋಡಿ:

* ಕೃಷಿಯಲ್ಲಿ ಉತ್ಪಾದನೆ ಏರಿಕೆ ದರ 2013–14ರ ಮೊದಲ ತ್ರೈಮಾಸಿಕದಲ್ಲಿ 4ಶೇ. ಇತ್ತು. ಆದರೆ ಈ ವರ್ಷದ(2014–15) ಮೊದಲ ತ್ರೈಮಾಸಿಕದಲ್ಲಿ ಅದು 3.8ಶೇ.ಕ್ಕೆ ಇಳಿದಿದೆ!
* ಸೇವಾ ವಲಯದಲ್ಲೂ ಗಮನಾರ್ಹ ಏರಿಕೆಯೇನೂ ಇಲ್ಲ.
* ಗಮನಾರ್ಹ ಏರಿಕೆ ಕಳೆದ ವರ್ಷದ ಮೊದಲ ತ್ರೈಮಾಸಿಕ ಅವಧಿಗೆ ಹೋಲಿಸಿದರೆ ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ಆಗಿರುವುದು ಗಣಿಗಾರಿಕೆ, ಸರಕು ಉತ್ಪಾದನೆ, ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ಕಟ್ಟಡ ನಿರ್ಮಾಣ ರಂಗದಲ್ಲಿ ಮಾತ್ರ. ಅದರಲ್ಲೂ ಸರಕು ಉತ್ಪಾದನೆಯಲ್ಲಿ. ಈ ಕ್ಷೇತ್ರಕ್ಕೆ ಒಟ್ಟಾರೆ ಬೆಳವಣಿಗೆ ದರದ ಲೆಕ್ಕಾಚಾರದಲ್ಲಿ ಹೆಚ್ಚಿನ ಒತ್ತು ಕೊಡಲಾಗುತ್ತದೆ ಎಂಬುದನ್ನು ಗಮನಿಸಬೇಕು.

ಹಿಂದಿನ ವರ್ಷದ ಮತ್ತು ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕ ಅವಧಿಯ ಹೋಲಿಕೆಯಲ್ಲಿ ಆಗಿರುವ, ಮೋದಿ ಸರಕಾರ ಮತ್ತು ಅವರ ಬೋಪರಾಕು ಮಂದಿ ಹಾಡಿ ಹೊಗಳುತ್ತಿರುವ 1ಶೇ. ಏರಿಕೆಯಲ್ಲಿ 0.75ಶೇ. ಏರಿಕೆ ಬಂದಿರುವುದು ಕೇವಲ ಸರಕು ಉತ್ಪಾದನೆಯ ರಂಗದಲ್ಲಿಯೇ.

ಆದ್ದರಿಂದ ಮೋದಿ ಸರಕಾರ ತನ್ನ ಒಂದು ತಿಂಗಳ ಅವಧಿಯಲ್ಲಿ ನಿಜವಾಗಿಯೂ ಏನಾದರೂ ಪವಾಡ ನಡೆಸಿದ್ದರೆ ಅದು ಈ ರಂಗದಲ್ಲಿಯೇ ಇರಬೇಕು. ಆದರೆ ಈ ರಂಗದ ಅಂಕಿ–ಅಂಶಗಳನ್ನು ನೋಡಿದರೆ, ವಾಸ್ತವವಾಗಿ ಈ ರಂಗದಲ್ಲಿ ಗಮನಾರ್ಹ ಏರಿಕೆಯಗಿರುವುದು ನಿಜವಾದರೂ, ಅದು ಆಗಿರುವುದು ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ಮಾತ್ರ. ಮೋದಿಯವರ ಅಧಿಕಾರದ ಜೂನ್ ತಿಂಗಳಲ್ಲಿ ವಾಸ್ತವವಾಗಿ ಅದು ಏರುವ ಬದಲು ಇಳಿದಿದೆ. ಮೇ ತಿಂಗಳಿಗೆ ಹೋಲಿಸಿದರೆ ಈ ಸಂಗತಿ ಗೊತ್ತಾಗುತ್ತದೆ ಎಂದು ಪ್ರೊ. ಪಟ್ನಾಯಕ್ ಗಮನ ಸೆಳೆಯುತ್ತಾರೆ. ಸಿಎಸ್‌ಒ ಪ್ರಕಟಿಸಿರುವ ಈ ಅಂಕಿ–ಅಂಶಗಳನ್ನು ನೋಡಿ:

ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ (2004–05=100)

	ಮೇ 2014	ಜೂನ್ 2014
ಗಣಿಗಾರಿಕೆ ಮತ್ತು ಕಲ್ಲುಗಣಿಗಾರಿಕೆ	125.6	121.5
ಸರಕು ಉತ್ಪಾದನೆ	181.6	178.2
ವಿದ್ಯುಚ್ಛಕ್ತಿ	183.2	181.6
ಸಾಮಾನ್ಯ ಸೂಚ್ಯಂಕ	173.8	170.5

ಅಂದರೆ ಮೋದಿಯವರು ಜಪಾನಿನಲ್ಲಿ ಡಂಗುರ ಹೊಡೆದ ಜಿಡಿಪಿ ಏರಿಕೆಯಲ್ಲಿ ಮೋದಿ ಸರಕಾರದ ಪಾತ್ರ ಏನೂ ಇಲ್ಲ. ಅದಕ್ಕಿಂತ ಮುಖ್ಯವಾದ ವಿಷಯವೆಂದರೆ ಮೋದಿ ಅವಧಿ ವಿನಾಶಕಾರಕ ಎಂದೇ ಹೇಳಬೇಕಾಗುತ್ತದೆ ಎನ್ನುತ್ತಾರೆ ಪ್ರಭಾತ್ ಪಟ್ನಾಯಕ್. ಏಕೆಂದರೆ 2014–15ರ ಮೊದಲ ತ್ರೈಮಾಸಿಕದಲ್ಲಿ ಗಮನಾರ್ಹ ಜಿಡಿಪಿ ಏರಿಕೆಗೆ ಕಾಣಿಕೆ ನೀಡಿದ ಎಲ್ಲ ರಂಗಗಳಲ್ಲೂ ಮೋದಿ ಆಳ್ವಿಕೆಯ ಜೂನ್ ತಿಂಗಳಲ್ಲಿ ಬೆಳವಣಿಗೆಯ ದರ ಅದರ ಹಿಂದಿನ ತಿಂಗಳಿಗೆ ಹೋಲಿಸಿದರೆ ವಾಸ್ತವವಾಗಿ ಋಣಾತ್ಮಕವಾಗಿದೆ.

ಹೀಗಿರುವಾಗ, ಭಾರತೀಯ ಆರ್ಥಿಕದಲ್ಲಿ ತಾನು ‘ಒಳ್ಳೆಯ ದಿನಗಳನ್ನು ‘ತಂದಿದ್ದೇನೆ’ ಎಂಬ ಮೋದಿಯವರ ಹೇಳಿಕೆಯಾಗಲಿ, ಕಾರ್ಪೊರೇಟ್ ಮಾಧ್ಯಮಗಳು, ಮೋದಿ ಸರಕಾರ ಮೊದಲ ನೂರು ದಿನಗಳಲ್ಲೇ ದೇಶದ ಆರ್ಥಿಕದಲ್ಲಿ ಪವಾಡವನ್ನೇ ನಡೆಸಿದೆ ಎಂದು ಹೊಗಳುವ ಸ್ಪರ್ಧೆಗಿಳಿದಿರುವುದಾಗಲೀ ದಿಗಿಲುಗೊಳಿಸುವಂತಹ ಮೋಸವೇ ಸರಿ ಎನ್ನುತ್ತಾರೆ ಪ್ರೊ. ಪಟ್ನಾಯಕ್.

ನಿಜ, ಈ ಒಂದು ತಿಂಗಳಲ್ಲಿ ನಕಾರಾತ್ಮಕ ಬೆಳವಣಿಗೆಗೆ ಮೋದಿ ಧೋರಣೆಗಳು ಕಾರಣ, ಈ ತ್ರೈಮಾಸಿಕದ ಮೊದಲ ಎರಡು ತಿಂಗಳಲ್ಲಿ ಏರಿಕೆ ಕಾಣಲು ಚಿದಂಬರಂ ಹೇಳುವಂತೆ ಯುಪಿಎ–2 ಧೋರಣೆಗಳು ಕಾರಣ ಎನ್ನುವುದೂ ಕೂಡ ಅಸಂಬದ್ಧ ಎನ್ನುತ್ತಾರೆ ಅವರು. ಈ ತ್ರೈಮಾಸಿಕದ ಆರ್ಥಿಕ ಬೆಳವಣಿಗೆಗೆ ಮೋದಿಯವರ ನಿರ್ಣಾಯಕ ಆಳ್ವಿಕೆ ಕಾರಣ ಎನ್ನುವ ಮೋದಿ ಜಂಗುಳಿಯ ಬೋಪರಾಕಿನಂತೆ ಅದೂ ಕೂಡ ಅವಾಸ್ತವ. ತುಂಬಾ ವಿಲಕ್ಷಣವೆನಿಸುವ ಈ ಅಂಶವನ್ನು ನೋಡಿ. ಒಂದು ಸರಕಾರ ಒಂದು ತಿಂಗಳಲ್ಲಿ ತನ್ನ ಹಿಂದಿನ ಸರಕಾರಕ್ಕಿಂತ ಭಿನ್ನವಾದುದನ್ನೇನೂ ಮಾಡದಿರುವಾಗ ತನ್ನಿಂದಾಗಿಯೇ ಆರ್ಥಿಕ ಬೆಳವಣಿಗೆಯಾಗಿದೆ ಎನ್ನುವುದು ಬೌದ್ಧಿಕ ಬಾಲಿಶತನದ ಪ್ರದರ್ಶನವಲ್ಲವೆ. ಅದಕ್ಕಿಂತ ಹೆಚ್ಚು ವಿಲಕ್ಷಣವಾದುದು ಸಹ ಇದೆ. ವಾಸ್ತವವಾಗಿ ಋಣಾತ್ಮಕ ಬೆಳವಣಿಗೆ ದಾಖಲಾಗಿದ್ದರೂ ಇಂತಹ ಬೌದ್ಧಿಕ ಬಾಲಿಶತನದ ಪ್ರದರ್ಶನ ಮಾಡಲಾಗುತ್ತಿದೆ !!!.

ಸಾಮಾನ್ಯವಾಗಿ ಸರಕಾರಗಳು ತಮ್ಮ ಸಾಧನೆಗಳ ಬಗೆಗೆ ಉತ್ಪ್ರೇಕ್ಷೆ ಮಾಡಿಕೊಂಡು ಹೊಗಳಿಕೊಳ್ಳುತ್ತವೆ. ಆದರೆ ಒಂದು ಸರಕಾರ ತಾನು ಏನೂ ಕೊಡುಗೆ ನೀಡಿರದ್ದ ಅವಧಿಯ ಬಗೆಗೆ, ನಕಾರಾತ್ಮಕ ಕೊಡುಗೆ ನೀಡಿರುವ ಅವಧಿಯ ಬಗ್ಗೆ ಉತ್ಪ್ರೇಕ್ಷಿತ ದಾವೆಗಳನ್ನು ಮಾಡಿದರೆ ಅದು **ನಾಚಿಕೆಹೀನ ಪ್ರಚಾರವೆಂದೇ ಹೇಳಬೇಕಾಗುತ್ತದೆ. ಮತ್ತು ಇಂತಹ ಲಜ್ಜೆಗೆಟ್ಟ ಪ್ರಚಾರ ಜನತೆಯ ಬಗ್ಗೆ ಅದು ಹೊಂದಿರುವ ತುಚ್ಛಭಾವನೆಯನ್ನು ತೋರಿಸುತ್ತದೆ. ಜನತೆ ತಾವು ಏನು ಹೇಳಿದರೂ ಕಣ್ಣುಮುಚ್ಚಿ ಒಪ್ಪಿಕೊಳ್ಳುವಷ್ಟು ಮೊದ್ದುಗಳು ಎಂಬ ತಿರಸ್ಕಾರ ಹೊಂದಿರುವುದನ್ನು ತೋರಿಸುತ್ತದೆ ಎನ್ನುತ್ತಾರೆ ಪ್ರೊ. ಪಟ್ನಾಯಕ್.**

ಪ್ರೊ. ಪಟ್ನಾಯಕ್ ಇನ್ನೊಂದು ಸಂಗತಿಯತ್ತವೂ ಗಮನ ಸೆಳೆಯುತ್ತಾರೆ. ಅದು, ಸತತವಾಗಿ 5ಶೇ.ಕ್ಕಿಂತ ಹೆಚ್ಚಿನ ಬೆಳವಣಿಗೆ ದರವನ್ನು ದಾಖಲಿಸಿದ 70ರ ದಶಕದ, 80ರ ದಶಕದ ಆರ್ಥಿಕ ಬೆಳವಣಿಗೆಯನ್ನು ಹೀಗಳೆಯುವ ಈ ಎನ್‌ಡಿಎ ಮತ್ತು ಯುಪಿಎ ಮಂದಿ, ಈಗ ಅದು 5ಶೇ. ದಾಟಿರುವುದೇ ಒಂದು ದೊಡ್ಡ ಸಾಧನೆ, ಅದು ತಮ್ಮ ಸಾಧನೆ ಎಂದು ಹೇಳಿಕೊಳ್ಳುವ ಸ್ಪರ್ಧೆಗಿಳಿದಿರುವ ವಿಲಕ್ಷಣ ಸನ್ನಿವೇಶದ ಬಗ್ಗೆ. ಇದು ನಮ್ಮ ಆರ್ಥಿಕವನ್ನು ನವ–ಉದಾರವಾದ ಎಂಬುದು ಎಂತಹ ಕುರುಡುಗಲ್ಲಿಗೆ ಒಯ್ದಿದೆ ಎಂಬುದನ್ನು ತೋರಿಸುತ್ತದೆಯಷ್ಟೇ ಎನ್ನುತ್ತಾರೆ ಅವರು. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಿಶ್ವ ಜನಾಭಿಪ್ರಾಯ ಆಸ್ತಿಗಳ, ಆದಾಯಗಳ ಹಂಚಿಕೆಯಲ್ಲಿನ ಅಸಮಾನತೆಯನ್ನು ನೀಗುವಂತಹ ಮರು ಹಂಚಿಕೆಯ ಅಗತ್ಯದ ಬಗ್ಗೆ ಜಾಗೃತಗೊಳ್ಳುತ್ತಿದೆ. ಆದರೆ ನಮ್ಮಲ್ಲಿ ಈ ಎರಡೂ ಆಳುವ ಕೂಟಗಳು 5ಶೇ. ಬೆಳವಣಿಗೆಯ ಒಣ ಚರ್ಚೆಗಳಲ್ಲಿಯೇ ಮಗ್ನವಾಗಿವೆ ಎಂದು ಪ್ರೊ. ಪಟ್ನಾಯಕ್ ಖೇದ ವ್ಯಕ್ತಪಡಿಸುತ್ತಾರೆ.

ಭಾರತದಲ್ಲಿ ತಯಾರಿಸಲು ಎಲ್ಲರಿಗೂ ಸುಸ್ವಾಗತ



......ಐಎಸ್‌ಐಎಸ್, ಅಲ್ ಖೈದಾ....ಎಲ್ಲರಿಗೂ
ಡಿಎನ್‌ಎ ದಲ್ಲಿ ಮಂಜುಲ್ ವ್ಯಂಗ್ಯ

‘ಒಳ್ಳೆಯ ದಿನ’ಗಳ ಡೈರಿ

ವೇದರಾಜ ಎನ್.ಕೆ.



ದೇಶೀ-ವಿದೇಶೀ ಹೂಡಿಕೆದಾರರಲ್ಲಿ ‘ಹೊಸ ವಿಶ್ವಾಸ’ ಮೂಡಿಸಿದ ಪರಿಸರ ಮಂತ್ರಾಲಯ!

ಇದು ಮೋದಿ ಸರಕಾರದ ಪರಿಸರ ಮಂತ್ರಿಗಳ ನೂರು ದಿನಗಳ ಸಾಧನೆ. ಮೋದಿ ಸರಕಾರ ನೂರು ದಿನಗಳನ್ನು ‘ಯಶಸ್ವಿ’ಯಾಗಿ ಪೂರ್ಣಗೊಳಿಸಿರುವ ಸಂದರ್ಭದಲ್ಲಿ ಅವರ ಸಂಪುಟದ ಮಂತ್ರಿಗಳು ತಂತಮ್ಮ ಇಲಾಖೆಗಳ ಸಾಧನೆಗಳ ಬಗ್ಗೆ ಪತ್ರಿಕಾ ಸಮ್ಮೇಳನ ನಡೆಸುತ್ತಿದ್ದು, ಪರಿಸರ ಮಂತ್ರಿಗಳು ಪರಿಸರ ಮಂತ್ರಾಲಯದ ಬಗ್ಗೆ ಹೂಡಿಕೆದಾರರಲ್ಲಿ ‘ಹೊಸ ವಿಶ್ವಾಸ’ ಮೂಡಿಸಿರುವುದು ತಮ್ಮ ಸಾಧನೆ ಎಂದು ಹೆಮ್ಮೆಯಿಂದ ಹೇಳಿಕೊಂಡರು. ಯುಪಿಎ ಕಾಲದಲ್ಲಿ ಅದು ‘70ರ ದಶಕದ ‘ಲೈಸೆನ್ಸ್–ಪರ್ಮಿಟ್ ರಾಜ್ಯಭಾರ’ವನ್ನೇ ಇನ್ನೂ ನಡೆಸುತ್ತಿದ್ದ ಇಲಾಖೆಯಾಗಿತ್ತು. ‘ಸ್ಪೀಡ್–ಬ್ರೇಕರ್ ಮಂತ್ರಾಲಯವಾಗಿತ್ತು.’, ಈಗ ಅದರ ಈ ಸ್ವರೂಪವನ್ನು ಸಂಪೂರ್ಣವಾಗಿ ಬದಲಿಸಿ ದೇಶಿ–ವಿದೇಶಿ ಹೂಡಿಕೆದಾರರ ವಿಶ್ವಾಸ ಗಳಿಸಿರುವುದೇ ಅವರ ಸಾಧನೆಯಾಗಿದೆ, ಪರಿಸರ ರಕ್ಷಣೆಗಿಂತಲೂ ಮುಖ್ಯವಾಗಿ!

ಅವರು ಹೀಗೆ ಹೇಳುತ್ತಿರುವಾಗಲೇ ಮೋದಿ ಸರಕಾರ ಸುಪ್ರಿಂ ಕೋರ್ಟ್‌ನ ತಡೆಯಾಜ್ಞೆಯ ಹಿನ್ನೆಲೆಯಲ್ಲಿ ‘ರಾಷ್ಟ್ರೀಯ ವನ್ಯಜೀವನ ಮಂಡಳಿ’ಯನ್ನು ಪುನರ್ರಚಿಸಿ ಒಂದು ಅಧಿಸೂಚನೆ ಜಾರಿ ಮಾಡುತ್ತಿದೆ ಎಂಬ ವರದಿಗಳೂ ಬಂದಿವೆ. ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ಸ್ವಲ್ಪದರಲ್ಲೇ ಈ ಮಂಡಳಿಯ ಸ್ಥಾಯೀ ಸಮಿತಿಯನ್ನು ರಚಿಸಿ ಅದು ಪರಿಸರ ಮಂತ್ರಿಗಳು ಹೇಳಿಕೊಂಡ ವೇಗದಲ್ಲಿ ಕೆಲಸ ಮಾಡಿ 100ಕ್ಕೂ ಹೆಚ್ಚು ಪ್ರಸ್ತಾವನೆಗಳನ್ನು ಮಂಜೂರು ಮಾಡಿತ್ತು. ಆದರೆ ಈ ಸ್ಥಾಯೀ ಸಮಿತಿ ವನ್ಯಜೀವನ ರಕ್ಷಣಾ ಕಾಯ್ದೆಯ ಉಲ್ಲಂಘನೆ ಮಾಡಿದೆ ಎಂಬ ಆಕ್ಷೇಪವನ್ನು ಕಳೆದ ತಿಂಗಳು ಸುಪ್ರಿಂ ಕೋರ್ಟ್ ಎತ್ತಿ ಹಿಡಿದು ಪರಿಸರ ಮಂತ್ರಾಲಯ ಹೂಡಿಕೆದಾರರ ವಿಶ್ವಾಸ ಗಳಿಸಲು ಅತಿ ‘ಸ್ಪೀಡಿನಿಂದ’ ಮಂಜೂರು ಮಾಡಿದ್ದ ಈ ಎಲ್ಲ ಪ್ರಸ್ತಾವನೆಗಳಿಗೆ; ‘ಬ್ರೇಕ್’ ಹಾಕಿತು., ಅಂದರೆ ಸ್ಥಾಯೀ ಸಮಿತಿ ಮಂಜೂರು ಮಾಡಿರುವ ಯಾವುದೇ ಪ್ರಸ್ತಾವನೆಯನ್ನು ಸದ್ಯಕ್ಕೆ ಜಾರಿಗೆ ತರಬಾರದು ಎಂದು ತಡೆಯಾಜ್ಞೆ ನೀಡಿತು.

ವನ್ಯಜೀವನ ಕಾಯ್ದೆಯ ಪ್ರಕಾರ ಈ ಮಂಡಳಿಯಲ್ಲಿ 10 ಸರಕಾರೇತರ ಸದಸ್ಯರು, ಐದು ಸ್ವತಂತ್ರ ಎನ್‌ಜಿಒಗಳ ಪ್ರತಿನಿಧಿಗಳು ಮತ್ತು ಕನಿಷ್ಟ 10 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು ಇರಬೇಕು. ಆದರೆ ಮೋದಿ ಸರಕಾರ ‘ಸ್ಪೀಡ್ ಬ್ರೇಕರ್’ ಸ್ವರೂಪವನ್ನು ಬದಲಿಸುವ ತರಾತುರಿಯಲ್ಲಿ ಪೂರ್ಣ ಪ್ರಮಾಣದ ಮಂಡಳಿಯನ್ನು ರಚಿಸದೆ ಕೇವಲ ಇಬ್ಬರು ಸರಕಾರೇತರ ಪ್ರತಿನಿಧಿಗಳು, ಒಬ್ಬ ಸರಕಾರೀ ಪ್ರತಿನಿಧಿ ಮತ್ತು ಕೇವಲ ಆಂಧ್ರಪ್ರದೇಶದ ಪ್ರತಿನಿಧಿ ಇದ್ದ ಸ್ಥಾಯೀ ಸಮಿತಿಯನ್ನು ರಚಿಸಿ ನೂರಕ್ಕೂ ಹೆಚ್ಚು ಪ್ರಸ್ತಾವನೆಗಳಿಗೆ ಶರವೇಗದಲ್ಲಿ ಮಂಜೂರಾತಿ ನೀಡಲಾಗಿತ್ತು.

ಅಧಿಕಾರಕ್ಕೆ ದಿಲ್ಲಿಯಲ್ಲಿ ಕುದುರೆ ವ್ಯಾಪಾರ
ಉತ್ತರ ಪ್ರದೇಶದಲ್ಲಿ ‘ಲವ್‌ಜಿಹಾದ್’ ಗೂಳಿ ಓಟ!

ರಾಜಧಾನಿಯ
ಕುದುರೆ ವ್ಯಾಪಾರವಂತೂ
ಉಪನಗರದ
ಗೂಳಿ ಓಟಕ್ಕಿಂತ
ಎದ್ದು ಕಾಣುತ್ತದೆ!



ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಇ.ಪಿ.ಉನ್ನಿಯವರ ವ್ಯಂಗ್ಯ

- ಬೆಂಗಳೂರಿನಲ್ಲಿ 'ಶಾಲಾ ಶಿಕ್ಷಣದಲ್ಲಿ ದೇಶಭಾಷೆಗಳು' – ಕುರಿತು 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಮತ್ತು 'ಸಾಹಿತ್ಯ ಅಕಾಡೆಮಿ' ಸಂಘಟಿಸಿದ ರಾಷ್ಟ್ರೀಯ ವಿಚಾರ ಸಂಕಿರಣ.
- ಭಾಷಾ ವಿಜ್ಞಾನಿಗಳು ಮತ್ತು ಶಿಕ್ಷಣ ಕ್ಷೇತ್ರದ ಪರಿಣತರು, ಆಸಕ್ತರ ಚರ್ಚೆ....

'ಜನಭಾಷೆಗಳಲ್ಲಿ ಶಿಕ್ಷಣ'ಕ್ಕಾಗಿ ಚಳುವಳಿಗೆ ಕರೆ

– ಎನ್. ಕೆ. ವಸಂತ ರಾಜ

ಕರ್ನಾಟಕದ ಶಿಕ್ಷಣ ಲಾಬಿಯ ಪವರ್ ಬಗ್ಗೆ ಎಲ್ಲರಿಗೂ ಗೊತ್ತಿದೆ. ಈ ಲಾಬಿಯಲ್ಲಿ ಇರುವುದು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ನಡೆಸುವವರು ಮಾತ್ರವಲ್ಲ, ಇಂಗ್ಲಿಷ್ ಸ್ಕೂಲುಗಳನ್ನು ನಡೆಸುವವರ ಸಂಘಟನೆಗಳಾದ 'ಕುಸುಮ' ಮುಂತಾದ ಸಂಸ್ಥೆಗಳೂ ಅಷ್ಟೇ ಪ್ರಬಲವಾಗಿ ಇವೆ. ಪ್ರಮುಖ ಪಕ್ಷಗಳ ಪ್ರಮುಖ ರಾಜಕಾರಣಿಗಳು ಈ ಲಾಬಿಯ ಭಾಗವಾಗಿದ್ದು ಅದರ ರಾಜಕೀಯ ಪವರ್ ಸಹ ಗಣನೀಯವಾಗಿದೆ. ನರ್ಸರಿಯಿಂದ ಯುನಿವರ್ಸಿಟಿ ಹಂತದ ತನಕ ಎಲ್ಲಾ ಶಿಕ್ಷಣಗಳನ್ನು ನಡೆಸುವ ಭಾರೀ ಸಂಸ್ಥೆಗಳೂ ಇದರಲ್ಲಿ ಇವೆ. ಶಿಕ್ಷಣದ ಯಾವುದೇ ಅಂಶವನ್ನು ನಿಬಂಧನೆಗೆ ಒಳಪಡಿಸುವ ಯಾವುದೇ ಕ್ರಮವನ್ನು ವಿರೋಧಿಸಿ ಕೋರ್ಟಿನ ಮೆಟ್ಟಲು ಹತ್ತುವ ಅವರ ಅಭ್ಯಾಸ ನೋಡಿದ್ದೇವೆ. ಇತ್ತೀಚಿನ ವಿಬ್‌ಗ್ಯೋರ್ ಸ್ಕೂಲಿನ ಮಗುವಿನ ರೇಪ್ ಸಂದರ್ಭದಲ್ಲಿ, ಜನರ ಆಕ್ರೋಶ ಮುಗಿಲು ಮುಟ್ಟುವವರೆಗೆ ಆ ಸ್ಕೂಲಿನ ಮ್ಯಾನೇಜ್‌ಮೆಂಟಿನ ಉದ್ಧಟ ನಡವಳಿಕೆಯನ್ನು ನೋಡಿದ್ದೇವೆ.

ಇದೇ ರೀತಿಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆ ಮಾಧ್ಯಮದಲ್ಲಿ ಶಿಕ್ಷಣವನ್ನು ಕಡ್ಡಾಯ ಮಾಡುವ ಕರ್ನಾಟಕ ಸರಕಾರದ 1994ರ ಆದೇಶದ ಬಗ್ಗೆ ಈ ಖಾಸಗಿ ಶಾಲೆಗಳು ನಡೆದುಕೊಂಡಿವೆ. 1994ರ ಆದೇಶದ ವಿರುದ್ಧ ಖಾಸಗಿ ಶಿಕ್ಷಣ ಲಾಬಿಯ ಕೇಸಿನ ಬಗ್ಗೆ ಇತ್ತೀಚೆಗೆ (ಮೇ 2014ರಲ್ಲಿ) ಸುಪ್ರೀಂಕೋರ್ಟು ತೀರ್ಪು ನೀಡಿ, ಶಿಕ್ಷಣ ಲಾಬಿಯ ವಾದಗಳನ್ನು ಮನ್ನಿಸಿದೆ. ಈ ತೀರ್ಪು ಬರಿಯ ಶಿಕ್ಷಣದ ಮಾಧ್ಯಮದ ಬಗ್ಗೆ ಮಾತ್ರವಲ್ಲ, ಇನ್ನೂ ಹಲವು ಅಂಶಗಳ ಬಗ್ಗೆ ದೂರಗಾಮಿ ದುಷ್ಪರಿಣಾಮ ಬೀರಲಿದೆ. ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಶಾಲಾ ಶಿಕ್ಷಣದ ಗುಣಮಟ್ಟ, ಜನಭಾಷೆಗಳ ಅಳಿವು–ಉಳಿವು, ಮುಂದಿನ ಪೀಳಿಗೆಯ ಮಾನವ ಸಂಪನ್ಮೂಲದ ಗುಣಮಟ್ಟ – ಹೀಗೆ ಹತ್ತು ಹಲವು ಅಂಶಗಳ ಬಗ್ಗೆ ದುಷ್ಪರಿಣಾಮ ಬೀರಲಿದೆ. ಈಗಾಗಲೇ ಸುಪ್ರೀಂಕೋರ್ಟಿನಲ್ಲಿ ಕರ್ನಾಟಕ ಸರಕಾರ ಮರುಪರಿಶೀಲನಾ (ರಿವ್ಯೂಪೆಟಿಶನ್) ಅರ್ಜಿ ಸಲ್ಲಿಸಿದೆ. ಆದರೆ ಕರ್ನಾಟಕ ಸರಕಾರದ ಕಾನೂನು ಹೋರಾಟ ಮಾತ್ರ ಇದಕ್ಕೆ ಸಾಲದು ಎಂಬುದೂ ಸ್ಪಷ್ಟವಾಗುತ್ತಾ ಬಂದಿದೆ.

ಸಂಕೀರ್ಣ ಬಹು–ಭಾಷಿಕ ಸ್ಥಿತಿಯಲ್ಲಿ ಶಿಕ್ಷಣ ಮಾಧ್ಯಮ

ಈ ಹಿನ್ನೆಲೆಯಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಸಾಹಿತ್ಯ ಅಕಾಡೆಮಿ ಈ ಬಗ್ಗೆ ನಿಲುವುಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮ ರೂಪಿಸಲು, ಬೆಂಗಳೂರಲ್ಲಿ ಸೆಪ್ಟೆಂಬರ್ 6–7 ರಂದು ಸಂಘಟಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣ ಅತ್ಯಂತ ಸಕಾಲಿಕ ಮತ್ತು ಸ್ವಾಗತಾರ್ಹ ಪ್ರಯತ್ನ. 'ಶಾಲಾಶಿಕ್ಷಣದಲ್ಲಿ ದೇಶಭಾಷೆಗಳು' ಎಂದು ಕರೆಯಲಾಗಿದ್ದ ಈ ವಿಚಾರ ಸಂಕಿರಣದಲ್ಲಿ ಭಾಷಾ ವಿಜ್ಞಾನಿಗಳು ಮತ್ತು ಶಿಕ್ಷಣ ಕ್ಷೇತ್ರದ ಪರಿಣತರು ಭಾಗವಹಿಸಿದ್ದರು. ಹೆಚ್ಚು ಕಡಿಮೆ ಎಲ್ಲಾ ಪ್ರಮುಖ ರಾಜ್ಯಗಳ ಶಿಕ್ಷಣ ಕ್ಷೇತ್ರಗಳ ಮತ್ತು ಜನಭಾಷೆಗಳ (ಅಲ್ಪಸಂಖ್ಯಾತ ಮತ್ತು ಸಣ್ಣ ಆದಿವಾಸಿ ಭಾಷೆಗಳು ಸೇರಿದಂತೆ) ಸವಾಲು–ಸಮಸ್ಯೆಗಳ ಅರಿವಿರುವ ಪರಿಣತರೂ ಭಾಗವಹಿಸಿದ್ದರು ಮತ್ತು ಪ್ರಬಂಧಗಳನ್ನು ಮಂಡಿಸಿದರು. ಡಾ. ಚಂದ್ರಶೇಖರ ಕಂಬಾರ ಅವರು ಸಂಕಿರಣವನ್ನು ಉದ್ಘಾಟಿಸಿದರು. ರಾಜ್ಯ ಎಡ್ವೋಕೇಟ್ ಜನರಲ್ ರವಿವರ್ಮಕುಮಾರ್ ಅವರು ಕಾನೂನು ಅಂಶಗಳ ಬಗ್ಗೆ ಮತ್ತು ಮುಂದಿನ ಹೆಜ್ಜೆಗಳ ಬಗ್ಗೆ ಸಂಕಿರಣವನ್ನು ಉದ್ದೇಶಿಸಿ ಮಾತನಾಡಿದರು. ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳ ಕನ್ನಡ ಅನುವಾದವನ್ನು ಒಳಗೊಂಡ ಪುಸ್ತಕವನ್ನು ಆರಂಭದಲ್ಲೇ ಸಂಕಿರಣದ ಆರಂಭದಲ್ಲೇ ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು.

ಮೂರು ಸಾವಿರದಷ್ಟು ಭಾಷೆಗಳಿರುವ ಮತ್ತು ಒಂದೇ ರಾಜ್ಯದಲ್ಲಿ ಒಂದು ಬಹುಸಂಖ್ಯಾತ ಮತ್ತು ಹಲವು ಅಲ್ಪಸಂಖ್ಯಾತ ಭಾಷೆಗಳಿರುವ ಅಥವಾ ಹಲವು ಗಮನಾರ್ಹ ಸಂಖ್ಯೆಯಲ್ಲಿರುವ ಭಾಷೆಗಳು ಇರುವ, ಸಂಕೀರ್ಣ ಬಹು–ಭಾಷಿಕ ಪರಿಸ್ಥಿತಿಯಲ್ಲಿ ಶಿಕ್ಷಣ ಮಾಧ್ಯಮ ಯಾವುದಿರಬೇಕು? ಶಿಕ್ಷಣ ಮಾಧ್ಯಮವನ್ನು ಯಾರು ನಿರ್ಧರಿಸಬೇಕು–ಮಗುವಿನ ಪರವಾಗಿ ಪಾಲಕರೇ ಅಥವಾ ಶಿಕ್ಷಣ ತಜ್ಞರ ಸಲಹೆ ಪಡೆದು ಸರಕಾರವೇ ಅಥವಾ ಶಿಕ್ಷಣ ಸಂಸ್ಥೆಗಳೇ? ದೇಶ 1960ರ ದಶಕದಲ್ಲಿ ಅಂಗೀಕರಿಸಿದ ತ್ರಿಭಾಷಾ ಸೂತ್ರಜಾರಿಯ ಸಾಫಲ್ಯಗಳು ವೈಫಲ್ಯಗಳೇನು? – ಇವು ಸಂಕಿರಣದ ಮುಂದಿದ್ದ ಮುಖ್ಯ ಪ್ರಶ್ನೆಗಳು. ಈ ಪ್ರಶ್ನೆಗಳಿಗೆ ಕಂಡುಕೊಂಡ ಉತ್ತರದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟಿನ ತೀರ್ಪಿನಿಂದ ಉಂಟಾದ ಪರಿಸ್ಥಿತಿಯ ಬಗ್ಗೆ ಯಾವ ನಿಲುವು ಕ್ರಮ ಕೈಗೊಳ್ಳಬೇಕು ಎಂಬುದೂ ಸಂಕಿರಣದ ಮುಂದಿದ್ದ ಸವಾಲು.

ಪಾಲಕರು ಶಿಕ್ಷಣ ಪಠ್ಯಕ್ರಮ ನಿರ್ಧರಿಸಬಹುದೆ?

ಇಂಗ್ಲಿಷ್ ಮಾಧ್ಯಮ ಮೋಹ 1980ರ ದಶಕದಿಂದ ತೀವ್ರವಾಗಿ ಹೆಚ್ಚಿರುವುದು, ದೇಶಭಾಷೆಗಳಲ್ಲಿ ಶಿಕ್ಷಣದ ಗುಣಮಟ್ಟ ಕುಸಿಯುತ್ತಿರುವುದು, ಈ ಶಾಲೆಗಳಲ್ಲಿ ನೊಂದಣಿ ಕುಸಿಯುತ್ತಿರುವುದು, ಇದನ್ನೇ ನೆಪ ಮಾಡಿಕೊಂಡು ಸರಕಾರಗಳು ಈ ಶಾಲೆಗಳನ್ನು ಮುಚ್ಚಿ ಖಾಸಗಿ ಇಂಗ್ಲಿಷ್ ಮಾಧ್ಯಮಗಳಿಗೆ ಅನುವು ಮಾಡಿಕೊಡುತ್ತಿರುವುದು, ಸರಕಾರಿ ಶಾಲೆಗಳಲ್ಲೇ ಇಂಗ್ಲಿಷ್ ಮಾಧ್ಯಮ ತರಗತಿಗಳನ್ನು ತೆರೆಯುತ್ತಿರುವುದು–ಇತ್ಯಾದಿ ಕನ್ನಡಿಗರ 'ಅಭಿಮಾನ ಶೂನ್ಯತೆ'ಯಿಂದಾಗಿ ಕರ್ನಾಟಕದಲ್ಲಿ ಮಾತ್ರ ಕಂಡು ಬರುತ್ತಿರುವ ವಿದ್ಯಮಾನಗಳಲ್ಲ. ಎಲ್ಲಾ ರಾಜ್ಯಗಳಲ್ಲೂ ಇದೇ ಪ್ರಕ್ರಿಯೆ ನಡೆದಿದೆ. ಅದರಲ್ಲೂ ಭಾಷಾ 'ಅಭಿಮಾನ ಶೂರರು' ಎಂದು ನಾವು ಅಂದುಕೊಂಡಿರುವ ನೆರೆಯ ತಮಿಳುನಾಡು, ಆಂಧ್ರಗಳಲ್ಲೂ ಇದೇ ಪ್ರಕ್ರಿಯೆ ನಡೆಯುತ್ತಿದೆ. ಅಥವಾ ಭಾಷಾ ಅಭಿಮಾನಕ್ಕೂ ಮಾಧ್ಯಮದ ಆಯ್ಕೆಗೂ ಯಾವುದೇ ಸಂಬಂಧವಿಲ್ಲ. ಇದು ಸಂಕಿರಣದಲ್ಲಿ ವಿವಿಧ ರಾಜ್ಯಗಳ ಬಗ್ಗೆ ಬಂದ ಪ್ರಬಂಧಗಳಿಂದ ಢಾಳಾಗಿ ಗೋಚರಿಸಿದ ಸಂಗತಿ.

ಮಾತೃ ಭಾಷೆಯಲ್ಲಿ ಶಿಕ್ಷಣ ಮಗುವಿನ ಹಕ್ಕು. ಅದನ್ನು ಪಾಲಕರು ನಿರಾಕರಿಸುವಂತಿಲ್ಲ. ಪಾಲಕರೇ ಮಗುವಿನ ಶಿಕ್ಷಣದ ಬಗ್ಗೆ ನಿರ್ಧರಿಸುವುದಾದರೆ, ಶಿಕ್ಷಣವೇ ಬೇಡ ಎನ್ನುವ ಹಕ್ಕು ಅವರಿಗಿದೆಯೆ? ಪಠ್ಯಕ್ರಮ ಹೀಗೇ ಇರಬೇಕು ಎನ್ನುವ ಹಕ್ಕು ಕೊಡಲು ಸಾಧ್ಯವೇ? ಅದೇ ರೀತಿ ಶಿಕ್ಷಣ ಸಂಸ್ಥೆಗಳಿಗೂ ಮಾಧ್ಯಮ, ಪಠ್ಯಕ್ರಮಗಳ ಬಗ್ಗೆ ಸ್ವಾತಂತ್ರ್ಯ ಕೊಡಲು ಹೇಗೆ ಸಾಧ್ಯ? ಎಂಬ ಪ್ರತಿ–ಪ್ರಶ್ನೆಗಳನ್ನು ಹಾಕಲಾಯಿತು.



ಇಂಗ್ಲಿಷ್ ಮಾಧ್ಯಮದ ನಂಬಿಕೆಗಳು

ಇಂಗ್ಲಿಷ್ ವಿಜ್ಞಾನ–ತಂತ್ರಜ್ಞಾನದ, ವಾಣಿಜ್ಯದ 'ಸ್ವಾಭಾವಿಕ' ಭಾಷೆ. ಅವನ್ನು ಇಂಗ್ಲಿಷಿನಲ್ಲಿ ಕಲಿಯುವುದೇ ಉತ್ತಮ. ಇಂಗ್ಲಿಷ್ ಜಾಗತಿಕ ಜ್ಞಾನಕ್ಕೆ ಕಿಟಕಿ. ಆದ್ದರಿಂದ ಇಂಗ್ಲಿಷ್ ಕಲಿಯುವುದು ಆದ್ಯತೆಯ ವಿಷಯ. ಜನಭಾಷೆಯಲ್ಲಿ ಕಲಿತರೆ ಅದು ಮುಂದೆ ಇಂಗ್ಲಿಷ್ ಕಲಿಯುವುದಕ್ಕೆ ಅಡ್ಡಿಯಾಗುತ್ತದೆ. ಜನಭಾಷೆಯಲ್ಲಿ ವಿಜ್ಞಾನ–ತಂತ್ರಜ್ಞಾನದ, ವಾಣಿಜ್ಯ ಕಲಿಸುವುದು ಸಾಧ್ಯವಿಲ್ಲ. ಇವೇ ಮುಂತಾದ ಇಂಗ್ಲಿಷಿನ ಬಗೆಗಿನ ನಂಬಿಕೆಗಳು ಜನತೆಯಲ್ಲಿ ವ್ಯಾಪಕವಾಗಿರುವುದರಿಂದ ಮತ್ತು ಅದನ್ನು ಪಟ್ಟಭದ್ರ ಹಿತಾಸಕ್ತಿಗಳು ವ್ಯವಸ್ಥಿತವಾಗಿ ಹರಡುತ್ತಿರುವುದರಿಂದ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಬೇಡಿಕೆ ಮತ್ತು ಬೆಂಬಲ ಇದೆ. ಸರಕಾರಿ ಮತ್ತು ಜನಭಾಷೆ ಮಾಧ್ಯಮದ ಶಾಲೆಗಳ ಗುಣಮಟ್ಟ ಇಳಿಯುತ್ತಿರುವುದರಿಂದ ಇದಕ್ಕೆ ಇನ್ನಷ್ಟು ಕುಮ್ಮಕ್ಕು ಇದೆ. ಆದರೆ ಈ ನಂಬಿಕೆಗಳಿಗೆ ಯಾವುದೇ ವಾಸ್ತವಿಕ ನೆಲೆ ಇಲ್ಲ ಎಂಬುದು ಸಂಕಿರಣದಲ್ಲಿ ಪ್ರಬಲವಾಗಿ ಮೂಡಿ ಬಂತು.

ವಿಜ್ಞಾನ–ತಂತ್ರಜ್ಞಾನದ (ಸ್ವತಂತ್ರ ಸಮೀಕ್ಷೆಯ ಪ್ರಕಾರ) ಶಿಕ್ಷಣದಲ್ಲಿ ಅತ್ಯಂತ ಮುಂದುವರೆದ 10 ದೇಶಗಳಲ್ಲಿ ಒಂದು ದೇಶದಲ್ಲಿ ಬಿಟ್ಟು ಉಳಿದ 9 ದೇಶಗಳಲ್ಲೂ ದೇಶಭಾಷೆಗಳಲ್ಲೇ ವಿಜ್ಞಾನ–ತಂತ್ರಜ್ಞಾನ ಕಲಿಸಲಾಗುತ್ತಿದೆ. ಉನ್ನತ ಶಿಕ್ಷಣ ತೆಗೆದುಕೊಂಡರೂ ಏಶ್ಯಾದ 50 ವಿಶ್ವವಿದ್ಯಾಲಯಗಳಲ್ಲಿ ಎರಡರಲ್ಲಿ ಬಿಟ್ಟು ಉಳಿದೆಲ್ಲ ವಿ.ವಿ.ಗಳಲ್ಲಿ ಶಿಕ್ಷಣದ ಮಾಧ್ಯಮ ದೇಶಭಾಷೆಗಳೇ. ಈ 50ರಲ್ಲಿ ಒಂದೂ ಭಾರತದ ವಿ.ವಿ. ಇಲ್ಲ ಎಂದೂ ಗಮನಿಸಬೇಕು. ಇಂಗ್ಲಿಷ್ ಸ್ವತಃ ಜಾಗತಿಕ ಜ್ಞಾನದ ಪ್ರಧಾನ ಭಾಷೆಯ ಸ್ಥಾನ ಕಳೆದುಕೊಳ್ಳುತ್ತಿದೆ. ಉದಾಹರಣೆಗೆ ಇಂಟರ್‌ನೆಟ್‌ನಲ್ಲಿ ಇಂಗ್ಲಿಷಿನ ಪಾಲು ಕಳೆದ ಒಂದು ದಶಕದಲ್ಲಿ ಗಣನೀಯವಾಗಿ ಕಡಿಮೆ ಆಗಿದೆ. ಮಾಧ್ಯಮಗಳಲ್ಲೂ ವಿವಿಧ ದೇಶಭಾಷೆಗಳ ಪಾಲು ಗಣನೀಯವಾಗಿ ಏರುತ್ತಿದ್ದು ಇಂಗ್ಲಿಷಿನ ಪಾಲು ಕಡಿಮೆ ಆಗುತ್ತಿದೆ. ಇದರರ್ಥ ಇಂಗ್ಲಿಷ್ ಅಥವಾ ಇತರ ವಿದೇಶಿ ಭಾಷೆಗಳನ್ನು ಕಲಿಯುವುದು ಬೇಕಾಗಿಲ್ಲ ಎಂದಲ್ಲ. ಇಂಗ್ಲಿಷ್ ಮಾಧ್ಯಮ ಅಥವಾ ಪ್ರಾಥಮಿಕ ಹಂತದಿಂದ ಕಲಿಕೆ ಅದಕ್ಕೆ ಅಗತ್ಯವೇ ಎಂಬುದೇ ಪ್ರಶ್ನೆ.

ಇಂಗ್ಲಿಷ್ ಮಾಧ್ಯಮದ ನಂಬಿಕೆಗಳು ಭ್ರಮೆ

ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಮಕ್ಕಳ ಕಲಿಕೆಗೆ ಅತ್ಯುತ್ತಮ. ಮಾತೃಭಾಷೆಯ ಉತ್ತಮ ಕಲಿಕೆಯ ಗಟ್ಟಿ ನೆಲೆಯ ಮೇಲೆ ವಿಜ್ಞಾನ–ತಂತ್ರಜ್ಞಾನ ಮುಂತಾದ ಇತರ ವಿಷಯಗಳನ್ನೂ, ಇಂಗ್ಲಿಷ್ ಅಥವಾ ಇತರ ವಿದೇಶೀ ಭಾಷೆಗಳನ್ನು ಕಲಿಯುವುದು ಸೂಕ್ತ. ಇದು ಯುನೆಸ್ಕೊ ಮತ್ತಿತರ ಅಧ್ಯಯನಗಳಿಂದ ತಿಳಿದು ಬರುವ ಅಂಶ. ಇಂಗ್ಲಿಷನ್ನು (ಅಥವಾ ಇತರ ವಿದೇಶೀ ಭಾಷೆಯನ್ನು) ಇಂಗ್ಲಿಷ್ ಮಾಧ್ಯಮದಲ್ಲೇ ಕಲಿತವರಿಗಿಂತ ವೇಗವಾಗಿ ಮತ್ತು ಚೆನ್ನಾಗಿ, ಮಾತೃಭಾಷೆಯಲ್ಲಿ ಉತ್ತಮ ಕಲಿಕೆಯ ನಂತರ ಇಂಗ್ಲಿಷ್ ಕಲಿಯುತ್ತಾರೆ. ಬಹುಭಾಷಾ ಕಲಿಕೆ ಹೊರೆ ಅಲ್ಲ. ಬದಲಾಗಿ ಅದು ವಿಷಯ ಗ್ರಹಿಕೆಗೆ ಪೂರಕವಾಗಿದೆ –ಎಂಬುದೂ ಜಗತ್ತಿನಾದ್ಯಂತ ಅಧ್ಯಯನಗಳಿಂದ ಧೃಢಪಟ್ಟಿರುವ ಅಂಶ. ವಿಜ್ಞಾನ–ತಂತ್ರಜ್ಞಾನ ಮುಂತಾದ ವಿಷಯಗಳಲ್ಲಿ ಉನ್ನತ ಅಧ್ಯಯನ–ಸಂಶೋಧನೆಗಳಿಗೆ ವಿದೇಶಗಳಿಗೆ ಹೋಗುವ ಅಸಂಖ್ಯಾತ ವಿದ್ಯಾರ್ಥಿಗಳು 3–4 ತಿಂಗಳುಗಳಲ್ಲಿ ಕಲಿತು ಆ ಭಾಷೆಯಲ್ಲಿ ತಮ್ಮ ಪ್ರೌಢ ಪ್ರಬಂಧ ಬರೆಯುತ್ತಾರೆಂಬುದು ಎಲ್ಲರಿಗೂ →

ಎರಡು ನಿರ್ಣಯಗಳು

ಸಂಕಿರಣ ಶಾಲಾಶಿಕ್ಷಣದಲ್ಲಿ ದೇಶಭಾಷೆಗಳ ಬಳಕೆಯ ಪರವಾಗಿ ಮತ್ತುಇಂಗ್ಲಿಷ್ ಮಾಧ್ಯಮದ ದುಷ್ಪರಿಣಾಮಗಳ ಬಗ್ಗೆ ಜನಾಭಿಪ್ರಾಯ ರೂಪಿಸುವ ಚಳುವಳಿಯ ಅಗತ್ಯ ಮನಗಂಡಿದೆ. ಇದಕ್ಕಾಗಿ ಪ್ರಧಾನ ಮಂತ್ರಿಗಳಿಗೆ ಚಂದ್ರಶೇಖರಕಂಬಾರ ಅವರು ತಯಾರಿಸಿರುವ ಮನವಿಗೆ ಕೋಟಿ–ಕೋಟಿ ಸಹಿ ಸಂಗ್ರಹಿಸುವ ಚಳುವಳಿಗೆ ಕರೆ–ಕೊಟ್ಟಿದೆ. ಅದನ್ನು http : //www.change.org/savemothertongue ನಲ್ಲಿ ನೋಡಿ ಸಹಿ ಹಾಕಬಹುದು. ಮಾತ್ರವಲ್ಲ, ಸಂಕಿರಣ ಎರಡು ನಿರ್ದಿಷ್ಟ ನಿರ್ಣಯಗಳನ್ನು ಅಂಗೀಕರಿಸಿತು. ಸುಪ್ರೀಂಕೋರ್ಟಿನ ತೀರ್ಪಿಗೆ ಕರ್ನಾಟಕ ಸರಕಾರ ಸಲ್ಲಿಸಿರುವ ಮರುಪರಿಶೀಲನಾ ಅರ್ಜಿಯಲ್ಲಿ ಜನರಲ್ ಮಧ್ಯಪ್ರವೇಶಿಸಲು ಕೇಂದ್ರ ಸರಕಾರ ನಿರ್ದೇಶಿಸಬೇಕು. ಶಿಕ್ಷಣ ಹಕ್ಕು ಕಾಯಿದೆ ಮತ್ತು ಸಂವಿಧಾನದಲ್ಲಿ ಪ್ರಾಥಮಿಕ ಹಂತದಲ್ಲಿ ಎಲ್ಲಾ ಶಾಲೆಗಳಲ್ಲೂ ಮಾತೃಭಾಷೆಯಲ್ಲೇ ಕಲಿಸಲು ಅಗತ್ಯ ತಿದ್ದುಪಡಿ ಮಾಡಬೇಕು. ಇವು ಈ ನಿರ್ಣಯಗಳ ಸಾರಾಂಶ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಪಾನಿನಲ್ಲಿ ಅಣು ಬಾಂಬ್ ವಿರೋಧಿ ಜಾಗತಿಕ ಸಮ್ಮೇಳನ......

ಪುಟ 16 ರಿಂದ

ಅಂತಾರಾಷ್ಟ್ರೀಯ ಮಹಿಳಾ ಸಮಾವೇಶಗಳು ನಡೆಯಿತು.

ಜನರ ನೆಮ್ಮದಿಯ ಬದುಕಿಗೆ ಯುದ್ಧಗಳು ಬೇಕಿಲ್ಲ, ಗಡಿಗಳ ಅವಶ್ಯಕತೆಯೂ ಇಲ್ಲ. ಆದರೆ ಎಲ್ಲಾ ದೇಶಗಳೂ 'ತಮಗೆ ಹೊರಗಿನವರಿಂದ ಬೆದರಿಕೆ ಇದೆ' 'ದೇಶಭಕ್ತಿ' 'ದೇಶದ ಹಿತಾಸಕ್ತಿ' 'ಗಡಿ ರಕ್ಷಣೆ' ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿ ವ್ಯಯಿಸುತ್ತಿವೆ.

ಜಗತ್ತಿನಲ್ಲಿ 6,000ಕ್ಕೂ ಅಧಿಕ ಅಣ್ವಸ್ತ್ರಗಳಿವೆ ಎಂದು ಅಭಿಪ್ರಾಯಕ್ಕೆ ಬರಲಾಗಿದೆ. ಹಿರೋಶಿಮಾ ಹಾಗೂ ನಾಗಾಸಾಕಿ ಮೇಲೆ ಕೇವಲ 2 ಬಾಂಬ್– 'ಲಿಟ್ಲ ಬಾಯ್' ಹಾಗೂ 'ಫ್ಯಾಟ್ ಮನ್'– ಹಾಕಿದಾಗಲೇ ಮಾನವ ಜೀವಿತಕ್ಕೆ ಮಹಾದುರಂತ ತಂದ ನರಮೇಧ ನೋಡಿದ್ದೇವೆ. ಆದರೆ ಈಗಿರುವ 6,000 ಅಣ್ವಸ್ತ್ರಗಳ ಪೈಕಿ 1% ಬಳಸಿದರೂ ವಿಶ್ವವ್ಯಾಪಿ ಹವಾಮಾನ ಬದಲಾವಣೆ, ದುರ್ಭಿಕ್ಷ್ಯಕ್ಕೆ ಮೂಲವಾಗುತ್ತದೆ. ಅಲ್ಲದೇ ಈ ಅಣ್ವಸ್ತ್ರಗಳ ಯುದ್ಧಾಸ್ತ್ರಗಳ ಶಸ್ತ್ರಾಗಾರ ನಿರ್ವಹಣೆ ಮತ್ತು ಆಧುನಿಕರಣಕ್ಕೆ 1.7 ಟ್ರೆಲ್ಲಿಯನ್ ಡಾಲರ್ ಖರ್ಚು ತಗಲುತ್ತಿದೆ. ಜಗತ್ತಿನಾದ್ಯಂತ ಈ ಹಣಕಾಸು ಸಂಪನ್ಮೂಲವನ್ನು ಬಡತನ ನಿವಾರಣೆ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಿಗೆ, ಆರೋಗ್ಯ, ಶಿಕ್ಷಣ ರಂಗದ ಸವಾಲು, ಸಮಸ್ಯೆ ಬಗೆಹರಿಸಲು ಉದ್ಯೋಗ ನೀಡಲು ಬಳಸಬೇಕಿದೆ.

ಅಮೇರಿಕಾ ತನ್ನದಲ್ಲದ ಜಾಗದಲ್ಲಿ ಯುದ್ಧಾಸ್ತ್ರ ಪರೀಕ್ಷೆ ನಡೆಸಲು, ವಿವಿಧ ದೇಶಗಳನ್ನು ಬೆದರಿಸಿ ಅದರ ಆಂತರಿಕ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದನ್ನು, ಅದೀನಗೊಳಿಸಿಕೊಳ್ಳುವದನ್ನು ಖಂಡಿಸಿ ಮಾರ್ಶಲ್ ಐಲ್ಯಾಂಡ್ ದೇಶದ ಶಾಂತಿ ಸಂಘಟನೆಗಳು ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ದಾವೆ ಹೂಡಿದ್ದನ್ನು ಸಮ್ಮೇಳನ ಸ್ವಾಗತಿಸಿತು.

'ಅಣ್ವಸ್ತ್ರ ಮತ್ತು ಮಾನವರು ಸಹಬಾಳ್ವೆ ಮಾಡಲಾಗದು; ಇನ್ನೆಂದಿಗೂ ಅಣ್ವಸ್ತ್ರಗಳು ಬೇಡಾ; ಮತ್ತೊಂದು ನರಕ ನೋಡೋದು ಬೇಡಾ; ತಮ್ಮ ಜೀವಿತಾವಧಿಯಲ್ಲೇ ಅಣ್ವಸ್ತ್ರ ಮುಕ್ತ ವಿಶ್ವ ನಮ್ಮದಾಗಲಿ' ಎಂಬುದು ವಿಕಿರಣ ಸಂತ್ರಸ್ತ ಹಿಬಾಕುಶಾಗಳು ಪ್ರಪಂಚಕ್ಕೆ ಕರೆನೀಡಿದ್ದರು. ಇದು 70 ನೇ ವರ್ಷದ ದುರಂತ ವರ್ಷಾಚರಣೆಯ ಸಂದರ್ಭದಲ್ಲಿ ಮತ್ತು 2015ರಲ್ಲಿ ನಡೆಯುವ ಎನ್.ಪಿ.ಟಿ. ರಿವ್ಯೂ ಸಮ್ಮೇಳನಗಳ ಫಲಿತಾಂಶದಲ್ಲಿ ಹೊರಹೊಮ್ಮಲಿ. ಹಾಗಾಗಿ ಎಲ್ಲಾ ದೇಶಗಳೂ ಒಮ್ಮತದಿಂದ ಅಣ್ವಸ್ತ್ರ ನಿರ್ಮೂಲನೆ ಮಾಡುವುದು ಮಾನವೀಯ ಕರ್ತವ್ಯ ಎಂದು ಒಕ್ಕೊರಲ ಅಭಿಪ್ರಾಯಕ್ಕೆ ಬರಲಾಯಿತು.



ಇಸ್ರೇಲ್ ದೇಶದ ಯುದ್ಧಕೋರತನಕ್ಕೆ ಬಲಿಯಾಗುತ್ತಿರುವ ಪ್ಯಾಲಿಸ್ಟೈನ್ ಹೋರಾಟಕ್ಕೆ ಜಾಗತಿಕವಾಗಿ ಸೌಹಾರ್ದ ಬೆಂಬಲ ನೀಡುವ, ಜಪಾನ್ ದೇಶ ತನ್ನ ಸಂವಿಧಾನದ 9 ನೇ ಕಲಂ ಮಾರ್ಪಡಿಸುವುದರ ವಿರುದ್ಧ ಚರ್ಚೆಗಳು ಮೂಡಿಬಂದುವು.

ಭಾರತದ ಸಿಐಟಿಯು ಪ್ರತಿನಿಧಿಯಾಗಿ ನಾನು 10 ದಿನಗಳ ಕಾಲ ಎಲ್ಲಾ ಚಟುವಟಿಕೆಗಳಲ್ಲಿ, ಸಭೆ, ಕಾರ್ಯಾಗಾರದಲ್ಲಿ ಪಾಲ್ಗೊಂಡು ಅನುಭವ ವಿಸ್ತರಿಸಿಕೊಳ್ಳುವ ಪ್ರಯತ್ನ ಮಾಡಿದೆ. ಹಿರೋಶಿಮಾ ಮತ್ತು ನಾಗಾಸಾಕಿಗಳಲ್ಲಿ, ಅಣ್ವಸ್ತ್ರಕ್ಕೆ ಬಲಿಯಾದವರಿಗೆ ಶಾಂತಿವನದಲ್ಲಿ ನಡೆದ ಶ್ರದ್ಧಾಂಜಲಿ ಸಭೆ, ಅಣ್ವಸ್ತ್ರ ನಿಶ್ಯಸ್ತ್ರೀಕರಣಕ್ಕೆ ಪ್ರಪಂಚದ ದೇಶಗಳ ಮೇಲೆ ಒತ್ತಡ ಹೇರಲು ಶಾಂತಿ ಸಂಘಟನೆಗಳ ಪಾತ್ರ, ನಮ್ಮ ಅನುಭವ ಕುರಿತು ಚರ್ಚೆಯಲ್ಲಿ ಮಾತನಾಡಿದ್ದು, ಯುದ್ಧ ವಿರೋಧಿ, ಅಣ್ವಸ್ತ್ರ ನಿರ್ಮೂಲನೆಗೆ ಸಂಘಟನೆಗಳು ನಡೆಸಬಹುದಾದ ಚಟುವಟಿಕೆಗಳ ಕುರಿತು ಕಾರ್ಯಾಗಾರದ ಅಧ್ಯಕ್ಷೀಯ ಮಂಡಳಿಯ ಕೆಲಸದ ಭಾಗವಾಗಿ ಕಾರ್ಮಿಕ ಸಂಘಟನೆಗಳು ಶಾಂತಿ ಪ್ರಕ್ರಿಯೆಯಲ್ಲಿ ಯಾಕಿರಬೇಕೆಂಬ ಕುರಿತು ಮಾತನಾಡಿದ್ದು, ಸಮುದಾಯದ ಮೂಲಕ ಕಲಾವಿದ ಸೊಲಬಕ್ಕನವರ್ 1986ರಲ್ಲಿ ಚಿತ್ರಿಸಿದ 'ನೂರಡಿ ಬಣ್ಣದ ನಡೆ, ಅಣು ಸಮರಕ್ಕೆ ತಡೆ' ಚಿತ್ರ ಅಭಿವ್ಯಕ್ತಿಯ ಡಿವಿಡಿ, ಚಿಂತನ ರಂಗ ಅಧ್ಯಯನ ಕೇಂದ್ರದ ಡಾ. ಶ್ರೀಪಾದ್ ಭಟ್ ನಿರ್ದೇಶಿಸಿದ 'ರೆಕ್ಕೆ ಕಟ್ಟುವಿರಾ? (ಹಿರೋಶಿಮಾ–ನಾಗಾಸಾಕಿ ಮೇಲೆ ಬಾಂಬ್ ದಾಳಿಯ ದುಷ್ಪರಿಣಾಮ ಬಿಂಬಿಸುವ ನಾಟಕ) ನಾಟಕದ ಡಿವಿಡಿ ಪ್ರತಿಯನ್ನು, ಸೌಹಾರ್ದತೆಯ, ಭಾವೈಕ್ಯದ, ಯುದ್ಧ ವಿರೋಧಿ ಹೋರಾಟದ ಹಾಡುಗಳ ಸಂಗ್ರಹದ ಪುಸ್ತಕವನ್ನು ಸಂಘಟಕರಿಗೆ ನೀಡಲಾಯಿತು. ನ್ಯೂ ಜಪಾನ್ ವುಮೆನ್ಸ್ ಅಸೋಶಿಯೇಶನ್ ಸಂಘಟಿಸಿದ ಅಂತಾರಾಷ್ಟ್ರೀಯ ಮಹಿಳಾ ಸಮಾವೇಶದಲ್ಲಿ ಮಾತನಾಡಿದ್ದು ಎಲ್ಲವೂ ಹೊಸ ಅನುಭವ. ನಾಗಾಸಾಕಿಯ ಬೀದಿಯಲ್ಲಿ ಅಣ್ವಸ್ತ್ರ ನಿಶ್ಯಸ್ತ್ರೀಕರಣಕ್ಕೆ ನಾಗರಿಕರಿಂದ ಸಹಿಸಂಗ್ರಹದ ಕೆಲಸದಲ್ಲಿ ನಾನು ಮುಂಚೂಣಿ ಪಾತ್ರ ವಹಿಸಿದ್ದು ನಮ್ಮ ಪ್ರದೇಶದಲ್ಲಿ/ಸಂಘಟನೆಯಲ್ಲಿ ಈ ಅನುಭವ ಅನ್ವಯಿಸಲು ಹುಮ್ಮಸ್ಸು ಮೂಡಿಸಿತು.

ಅಗಸ್ಟ್ 6 ರಂದು ಹಿರೋಶಿಮಾದ ನದಿ ನೀರಿನಲ್ಲಿ ನಮ್ಮ ಶಾಂತಿ ಸಂದೇಶ ಹೊತ್ತ ದೀಪದ ಗೂಡುಗಳನ್ನು ತೇಲಿಬಿಡುವ ಅನುಭವ ಹೃದಯಸ್ಪರ್ಶಿಯಾಗಿತ್ತು. ಹಿರೋಶಿಮಾದಲ್ಲಿ 6ರಂದು, ನಾಗಾಸಾಕಿಯಲ್ಲಿ 9 ರಂದು ನಡೆದ ಶಾಂತಿನಡಿಗೆಯ ಕಾರ್ಯಕ್ರಮದಲ್ಲಿ, ವಿಶ್ವಸಂಸ್ಥೆಯ ಪ್ರತಿನಿಧಿಗಳಿಗೆ ಅಣ್ವಸ್ತ್ರ ನಿಶ್ಯಸ್ತ್ರೀಕರಣಕ್ಕೆ ಆಗ್ರಹಿಸಿ ಅಂತಾರಾಷ್ಟ್ರೀಯ ಪ್ರತಿನಿಧಿಗಳೆಲ್ಲ ಸೇರಿ ಮನವಿ ಅರ್ಪಿಸಿದೆವು. ಹಿಬಾಕುಶಾಗಳೊಂದಿಗೆ ಸಂದರ್ಶನ, ಶಿಕ್ಷಕರ ಸಂಘದ ಮುಖಂಡರ ಜೊತೆ ಸಂವಾದ, ಕಾರ್ಮಿಕ ಸಂಘ ಝೆನ್ ರೋರೆನ್ ರಾಷ್ಟ್ರೀಯ ನಾಯಕರೊಂದಿಗೆ ಒಡನಾಟ, ಮಹಿಳಾ ಸಂಘಗಳ ಅನುಭವ ಹಂಚಿಕೊಳ್ಳುವುದಕ್ಕೆ ಪ್ರಯತ್ನಿಸಿದೆ.

ಅಂತಿಮವಾಗಿ, ಪ್ರಪಂಚದ ಎಲ್ಲಾ ದೇಶಗಳ ಸರ್ಕಾರಗಳೂ ಅಣ್ವಸ್ತ್ರ ನಿರ್ಮೂಲನೆಗೆ ಸಹಿ ಹಾಕಬೇಕೆಂದು, ಯುದ್ಧಕ್ಕೆ ಆಸ್ಪದ ನೀಡದೇ, ಅದಕ್ಕಾಗಿ ಹೆಚ್ಚು ಹಣ ಮೀಸಲಿಡದೇ ಸಮುದಾಯದ ಸೌಲಭ್ಯಕ್ಕಾಗಿ ಸಮಾಜ ಕಲ್ಯಾಣಕ್ಕಾಗಿ ಸರ್ಕಾರಗಳು ಹಣ ಮೀಸಲಿಡಲಿ, 2015ರಲ್ಲಿ ನಡೆಯುವ ಎನ್.ಪಿ.ಟಿ. ರಿವ್ಯು ಸಮ್ಮೇಳನವನ್ನು ವಾಸ್ತವಿಕವಾಗಿ ಯಶಸ್ವಿಗೊಳಿಸಲು ಕರೆ ನೀಡುವ ಅಂತಾರಾಷ್ಟ್ರೀಯ ಘೋಷಣೆಯನ್ನು ಅಂಗೀಕರಿಸಲಾಯಿತು. ಆ ಸಂದರ್ಭದಲ್ಲಿ ಸಾಹಿತಿಗಳು, ಕಲಾವಿದರುಗಳು ಭಾಗವಹಿಸಿದ್ದರು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಎಲ್ಲವೂ ಅಚ್ಚುಕಟ್ಟಾಗಿ ಸಮಯ ಪ್ರಜ್ಞೆಯೊಂದಿಗೆ ಜವಾಬ್ದಾರಿಯೊಂದಿಗೆ ನಡೆದುದು ನನಗೆ ವಿಶೇಷ ಅನುಭವ. ಜಪಾನ್ ಸಮ್ಮೇಳನದ ಸಂದರ್ಭದಲ್ಲಿ ವಿವಿಧ ದೇಶಗಳ ಪ್ರತಿನಿಧಿಗಳ ಅನುಭವ, ಅಲ್ಲಿಯ ದುಡಿಯುವ ಜನರ ಪರಿಸ್ಥಿತಿ, ಸರ್ಕಾರಗಳ ನಿಲುವು ಕೇಳುವ ಮೂಲಕ, ನನ್ನ ಅನುಭವದ ವಿಸ್ತಾರವಾದುದಲ್ಲದೇ ಬದ್ಧತೆಯನ್ನು ಗಟ್ಟಿಗೊಳಿಸಿತು.

→

ಗೊತ್ತಿರುವ ವಾಸ್ತವ.

ಹೀಗೆ ನಮ್ಮ ದೇಶದಲ್ಲಿ ಇಂಗ್ಲಿಷಿನ ಬಗೆಗಿನ ನಂಬಿಕೆಗಳು ಬರಿಯ ಭ್ರಮೆ ಎಂಬುದೂ ಸಂಕಿರಣದಲ್ಲಿ ಬಂದ ಪ್ರಬಲ ಅಭಿಪ್ರಾಯ. ಈ ನಂಬಿಕೆಗಳನ್ನು ಖಾಸಗಿ ಶಿಕ್ಷಣ ಲಾಬಿ ತಮ್ಮ ಲಾಭಕ್ಕಾಗಿ ವ್ಯವಸ್ಥಿತವಾಗಿ ಹರಡುತ್ತಿದೆ ಎಂಬುದೂ ಸ್ಪಷ್ಟ. ಇದರ ಜತೆಗೆ ರಾಜ್ಯಗಳ ಭಾಷಾ–ಅಲ್ಪಸಂಖ್ಯಾತರ ಭಾಷೆಗಳಲ್ಲಿ ಶಿಕ್ಷಣ ಅಥವಾ ಕನಿಷ್ಟ ಆ ಭಾಷೆಗಳ ಕಲಿಕೆಗೆ ಅವಕಾಶವೇ ಇಲ್ಲದಿರುವುದೂ ಸಮಸ್ಯೆಯನ್ನುಇನ್ನಷ್ಟು ಸಂಕೀರ್ಣಗೊಳಿಸಿದೆ. ನಮ್ಮ ರಾಜ್ಯದಲ್ಲೇ ತುಳು, ಕೊಂಕಣಿ, ಬ್ಯಾರಿ, ಕೊಡವ ಮುಂತಾದ ಭಾಷೆಗಳ ಸ್ಥಾನಮಾನವೇ ಇದಕ್ಕೆ ಉತ್ತಮ ಉದಾಹರಣೆ. ಒಬಿಸಿ ಮತ್ತು ದಲಿತರು ಇಂಗ್ಲಿಷ್ ಮಾಧ್ಯಮ ಶಿಕ್ಷಣ ತಮಗೆ ದಕ್ಕದ್ದರಿಂದ ತಮ್ಮ ಅವಕಾಶಗಳು ಸೀಮಿತಗೊಂಡಿವೆ ಎಂಬ ಭಾವನೆ ಹೊಂದಿದ್ದಾರೆ. ಇಂಗ್ಲಿಷ್ ಮಾಧ್ಯಮವನ್ನು ಪಾರಂಪರಿಕ ತಾರತಮ್ಯ ಉಳಿಸಿಕೊಳ್ಳುವುದಕ್ಕೆ ಬಳಸಲಾಯಿತು ಎಂಬುದು ನಿಜ. ಆದರೆ ಇಂಗ್ಲಿಷ್ ಮಾಧ್ಯಮ ಅದನ್ನು ಅಳಿಸಿ ಹಾಕುವುದಿಲ್ಲ. ಈಗಾಗಲೇ ಇಂಗ್ಲಿಷ್ ಮಾಧ್ಯಮ ಶಿಕ್ಷಣ ಸಂಸ್ಥೆಗಳೊಳಗೆ ಶ್ರೇಣೀಕರಣ ಆಗುತ್ತಿರುವುದು ಇದಕ್ಕೆ ಉದಾಹರಣೆ. ಅಲ್ಲದೆ ಈಗಾಗಲೇ ಕಲಿಕೆ ಹಲವು ತೊಡಕುಗಳಿರುವ ಒಬಿಸಿ, ದಲಿತರು ಮತ್ತು ಕೆಳವರ್ಗದವರು ಇಂಗ್ಲಿಷ್ ಮಾಧ್ಯಮದಿಂದ ಇನ್ನಷ್ಟು ಹಿಂದೆ ಬೀಳುವ ಸಾಧ್ಯತೆಯೇ ಹೆಚ್ಚು. ಇಂಗ್ಲಿಷ್, ಕನ್ನಡ ಅಥವಾ ಯಾವುದೇ ವಿಷಯದಲ್ಲೂ ಉತ್ತಮ ಕಲಿಕೆ ಇಲ್ಲದ ಒಂದು ಪೀಳಿಗೆಯೇ ಸೃಷ್ಟಿಯಾಗುವ ಅಪಾಯವೇ ಹೆಚ್ಚು.

ಸಂಕಿರಣದ ಒತ್ತು ಮಾಧ್ಯಮ, ಭಾಷಾ ಕಲಿಕೆ ಬಗೆಗೇ ಇತ್ತು. ಶಾಲಾ ಶಿಕ್ಷಣದ ಒಟ್ಟಾರೆ ಗುಣಮಟ್ಟ, ಲಭ್ಯತೆ ಎಲ್ಲವೂ ಇಳಿಮುಖವಾಗುತ್ತಿರುವ, ಆದರೆ ವೆಚ್ಚ ಮಾತ್ರ ಏರುತ್ತಿರುವ, ಹಲವು ರೀತಿಯ ಶಿಕ್ಷಣ ಸಂಸ್ಥೆಗಳ ಪಠ್ಯಕ್ರಮಗಳ ಗೊಂದಲ, ಸಮಾನ ಮತ್ತು ಉತ್ತಮ ಶಿಕ್ಷಣವನ್ನು ವ್ಯಾಪಕವಾಗಿ ಒದಗಿಸುವ ಬಗ್ಗೆ ಸರಕಾರಗಳ ರಾಜಕೀಯ ಇಚ್ಛಾಶಕ್ತಿಯ ಕೊರತೆ, ಮಾಹಿತಿ ತಂತ್ರಜ್ಞಾನದಿಂದ ಹೆಚ್ಚುತ್ತಿರುವ ಕಂದಕ– ಇವುಗಳ ಬಗ್ಗೆ ಪ್ರಸ್ತಾಪ ಬಂತಾದರೂ ಮುಖ್ಯ ವಿಷಯಕ್ಕೆ ಪೂರಕ ಅಂಶಗಳಾಗಿಯೂ ಇವು ಚರ್ಚೆಯಾಗಲಿಲ್ಲ. ಆದರೂ ಜನಭಾಷೆಗಳಲ್ಲಿ ಶಿಕ್ಷಣಕ್ಕೆ ಚಳುವಳಿಗೆ ಕರೆ ಈ ಸಂಕಿರಣದ ಅತ್ಯಂತ ಸಕಾರಾತ್ಮಕ ಕೊಡುಗೆ. ಈ ನಿಟ್ಟಿನಲ್ಲಿ ಕರ್ನಾಟಕ ಮಂಚೂಣಿಯಲ್ಲಿರುವುದು ಸಹ ಹೆಮ್ಮೆಯ ವಿಷಯವೇ.

ಮಮತಾ ಬ್ಯಾನರ್ಜಿ ಸುತ್ತಿಕೊಳ್ಳುತ್ತಿರುವ ಶಾರದ ಚಿಟ್ ಫಂಡ್ ಹಗರಣ........

ಪುಟ 6 ರಿಂದ

ಇರುವ ಮೈತ್ರಿ ಮುಂದುವರಿಸಿದರು. 2009ರ ಲೋಕಸಭಾ ಚುನಾವಣೆಗಳಲ್ಲಿ, ಪುನಃ, ಕಾಂಗ್ರೆಸ್ ಪಾಳಯಕ್ಕೆ ಮರಳಿದರು. ನಂತರ, 2011ರ ವಿಧಾನ ಸಭಾ ಚುನಾವಣೆಗಳಲ್ಲಿ ಗೆದ್ದು ಕಾಂಗ್ರೆಸ್ ಪಕ್ಷವನ್ನು ಸೇರಿಸಿಕೊಂಡು ತನ್ನ ಮಂತ್ರಿಮಂಡಲ ರಚಿಸಿದರು. ಒಂದೇ ವರ್ಷದಲ್ಲಿ ಕಾಂಗ್ರೆಸ್ ಪಕ್ಷವು ಮಂತ್ರಿಮಂಡಲದಿಂದ ಹೊರಬೀಳುವಂತಹ ಪರಿಸ್ಥಿತಿ ಉಂಟುಮಾಡಿದರು. 2014ರ ಲೋಕಸಭಾ ಚುನಾವಣಾ ಪೂರ್ವದಲ್ಲಿ ಬಿ.ಜೆ.ಪಿ. ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಘೋಷಣೆ ಮಾಡಿದಾಗ ಮಮತಾ ಚಕಾರ ಎತ್ತಲಿಲ್ಲ. ನಂತರ, ಚುನಾವಣಾ ಒತ್ತಡಗಳಿಂದಾಗಿ, 'ನೀನು ಒದ್ದಂಗೆ ಮಾಡು; ನಾನು ಅತ್ತಂಗೆ ಮಾಡ್ತೀನಿ' ಎನ್ನುವಂತಹ ನಾಟಕ ಮಾಡಿ ಅದರಿಂದ ಇಬ್ಬರೂ ಲಾಭ ಪಡೆದರು. ಇದು ತಕ್ಕಮಟ್ಟಿಗಿನ ಧೃವೀಕರಣಕ್ಕೂ ನೆರವಾಯಿತು, ಅಲ್ಲದೆ, ರಾಜ್ಯದ ಚುನಾವಣಾ ದೃಶ್ಯಾವಳಿಯನ್ನು ಬದಲಾಯಿಸಿತು.

ಮೋದಿಯವರು ಅಧಿಕಾರಕ್ಕೆ ಬಂದ ನಂತರ, ಪಶ್ಚಿಮ ಬಂಗಾಳದಲ್ಲಿ ಬಿ.ಜೆ.ಪಿ. ತನ್ನ ಬಲ ಹೆಚ್ಚಿಸಿಕೊಳ್ಳಲು ಹವಣಿಸುತ್ತಿದೆ. ಆರ್.ಎಸ್.ಎಸ್. ಹಾಗು ಅದರ ಅಂಗ ಸಂಸ್ಥೆಗಳು ಕೋಮು ಆಧಾರದ ಮೇಲೆ ತಮ್ಮ ಚಟುವಟಿಕೆಗಳನ್ನು ಹರಿತಗೊಳಿಸಿವೆ. ಅದಕ್ಕೆ ಪೂರಕವಾಗಿ ಮಮತಾ ಒಳ್ಳೆಯ ಭೂಮಿಕೆ ಒದಗಿಸಿದ್ದಾರೆ. ಆಳುವ ಪಕ್ಷದ ಪುಂಡು ಪೋಕರಿಗಳು ಎಡಪಕ್ಷಗಳ ಬೆಂಬಲಿಗರ ಕೊಲೆ, ಮಹಿಳೆಯರ ಮಾನಭಂಗ, ಅವರ ಮೇಲೆ ಮಾರಣಾಂತಿಕ ಹಲ್ಲೆ, ಬಲವಂತವಾಗಿ ಹಣ ಕೀಳುವುದು ಮುಂತಾದ ದುಷ್ಕೃತ್ಯಗಳಲ್ಲಿ ತೊಡಗಿ ಪ್ರಜಾಪ್ರಭುತ್ವದ ವಾತಾವರಣವನ್ನೇ ಹಾಳುಮಾಡಿದ್ದಾರೆ. ಇದು ಕೋಮುವಾದಿಗಳ ಬೆಳವಣಿಗೆಗೆ ಹೇಳಿ ಮಾಡಿಸಿದಂತಹ ಪರಿಸ್ಥಿತಿ. ಈ ವಾತಾವರಣದಲ್ಲಿ ಕೋಮುವಾದಿ ಸಿದ್ಧಾಂತದ ಮೇಲೆ ಹೋರಾಟ ಮಾಡುವುದು ಕಷ್ಟಕರವಾಗುತ್ತದೆ. ಹಾಗಾಗಿ, ತೃಣಮೂಲ ಪಕ್ಷದ ಜಾತ್ಯಾತೀತತೆ–ಯ ಬಗೆಗಿನ ಸೋಗಿನ ಮಾತುಗಾರಿಕೆ ಕುಸಿದು ಬೀಳುತ್ತದೆ. ಏಕೆಂದರೆ, ಒಂದು ಜಾತ್ಯಾತೀತ ಪ್ರಜಾಪ್ರಭುತ್ವದಲ್ಲಿ, ಪ್ರಜಾಪ್ರಭುತ್ವದ ಮೇಲೆ ಭೀಕರವಾದ ಹಲ್ಲೆ ನಡೆಸಿ ಜಾತ್ಯಾತೀತತೆಯನ್ನು ಕಾಪಾಡಲಾಗದು. ಅಲ್ಲದೆ, ಕುಲಗೆಟ್ಟ/ಭ್ರಷ್ಟ ನಾಯಕತ್ವ ಹೊಂದಿರುವ ತೃಣಮೂಲ ಪಕ್ಷವು ಸೈದ್ಧಾಂತಿಕವಾಗಿ ಬಿ.ಜೆ.ಪಿ.ಯೊಡನೆ ಸೆಣಸುವುದಾಗಲಿ ಅಥವಾ ಜಾತ್ಯಾತೀತತೆಯ ಮೌಲ್ಯಗಳನ್ನು ಸಮಾಜದಲ್ಲಿ ಮೊಳೆಸುವುದಾಗಲಿ ಕನಸಿನ ಮಾತಾಗುತ್ತದೆ.

ತೃಣಮೂಲ ಪಕ್ಷವು, ಜಾತಿ–ಉಪಜಾತಿ, ಪರಿಶಿಷ್ಟರು, ಆದಿವಾಸಿ ಹಾಗೂ ಮತ–ಕೋಮುಗಳ ಭಾವನೆಗಳನ್ನು ಜನರಲ್ಲಿ ಬಡಿದೆಬ್ಬಿಸಿ, ಅಂತಹ ವಿಭಜನೆಯ ಆಧಾರದ ಮೇಲೆ ಜನರನ್ನು ಗುಂಪುಗೂಡಿಸಿ ಚುನಾವಣೆಗಳಲ್ಲಿ ಗೆಲ್ಲುತ್ತಿದೆ. ಮಮತಾ ಸರ್ಕಾರ ಇಮಾಂಗಳಿಗೆ ಕೊಡುತ್ತಿರುವ ಮಾಶಾಸನ ಬಿ.ಜೆ.ಪಿ.ಗೆ ಬಯಸದೆ ಬಂದ ಭಾಗ್ಯವಾಗಿದೆ. ಈ ವಿಷಯವನ್ನು ಮುಂದಿಟ್ಟುಕೊಂಡು ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ. ತಮ್ಮ ಬತ್ತಳಿಕೆಯಲ್ಲಿರುವ ಅಸ್ತ್ರಗಳನ್ನು ನಿರಾಯಾಸವಾಗಿ ಬಳಸುತ್ತಿವೆ. ಹಿಂದುತ್ವ ಅಜೆಂಡಾವನ್ನು ಕಾರ್ಯಗತಗೊಳಿಸಲು, ಕಾಣುವ ಹಾಗೆ ಮತ್ತು ಕಾಣದ ಹಾಗೆ ಜನರನ್ನು ಧೃವೀಕರಣಗೊಳಿಸುವುದು ಬಿ.ಜೆ.ಪಿ.ಗೆ ಸುಲಭವಾಗಿದೆ. ಆರ್.ಎಸ್.ಎಸ್. ನಿರಾಯಾಸವಾಗಿ ತನ್ನ ಜಾಲವನ್ನು ವಿಸ್ತರಿಸುತ್ತಿದೆ. ಆರ್.ಎಸ್.ಎಸ್. ಆಯೋಜಿಸುತ್ತಿರುವ ದೊಡ್ಡ ದೊಡ್ಡ ಕ್ಯಾಂಪುಗಳಲ್ಲಿ ಸ್ವತಃ ಮೋಹನ್ ಭಾಗವತ್ ಭಾಗವಹಿಸುತ್ತಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಇಂದು ತೃಣಮೂಲ ಪಕ್ಷ ಮತ್ತು ಬಿ.ಜೆ.ಪಿ. ಒಂದಕ್ಕೊಂದು ಪೂರಕವಾಗಿವೆ. ಚುನಾವಣೆಗಳಲ್ಲಿ ಎಡಪಕ್ಷಗಳಿಗೆ ಆದ ಹಿನ್ನಡೆ–ಯ ನಂತರ ಜನರನ್ನು ಎರಡು ಬಲಪಂಥೀಯ ಪಕ್ಷಗಳ ನಡುವೆ ಧೃವೀಕರಣಗೊಳಿಸುವ ಪ್ರಯತ್ನ ನಡೆಯುತ್ತಿದ್ದು ಅದಕ್ಕೆ ಮುಖ್ಯವಾಹಿನಿಯ ವಾಣಿಜ್ಯ ಮಾಧ್ಯಮವು ಇಂಬುಕೊಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ, ಸಿ.ಪಿ.ಐ.(ಎಂ) ಮತ್ತು ಎಡಪಕ್ಷಗಳು ಜನತೆಯನ್ನು ಭಾದಿಸುತ್ತಿರುವ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅವುಗಳಿಗೆ ಪರಿಹಾರ ದೊರಕಿಸಲು ನಡೆಸುವ ಹೋರಾಟಗಳ ಮೂಲಕ ಪ್ರಜಾಪ್ರಭುತ್ವದ ಮರುಸ್ಥಾಪನೆ ಮತ್ತು ರಾಜಕೀಯ ಶಕ್ತಿಗಳ ಬಲಾಬಲ ಬದಲಿಸಲು ಕೋಮು ಶಕ್ತಿಗಳ ವಿರುದ್ಧ ಹೋರಾಡುತ್ತಿವೆ.

JANASHAKTHI KANNADA VARA PATRIKE SEPT 21, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಜಪಾನಿನಲ್ಲಿ ಅಣು ಮತ್ತು ಹೈಡ್ರೋಜೆನ್ ಬಾಂಬ್ ವಿರೋಧಿ ಜಾಗತಿಕ ಸಮ್ಮೇಳನ



ಯಮುನಾ ಗಾಂವ್ಕರ್



ಜಪಾನಿನಲ್ಲಿ ಅಣು ಮತ್ತು ಹೈಡ್ರೋಜೆನ್ ಬಾಂಬ್ ವಿರೋಧಿ ಜಾಗತಿಕ ಸಮ್ಮೇಳನ ನಡೆಯಿತು. 'ಸಂಪೂರ್ಣ ಅಣ್ವಸ್ತ್ರ ನಿಶ್ಯಸ್ತ್ರೀಕರಣ ಮತ್ತು ನಿರ್ಮೂಲನೆಗೆ ಶಾಂತಿಯುತ ನ್ಯಾಯಸಮ್ಮತ ವಿಶ್ವಕ್ಕೆ ಹಾರೈಸಿ' ನಡೆದ ಸಮ್ಮೇಳನಕ್ಕೆ ದೇಶದ ಕಾರ್ಮಿಕ ಸಂಘಟನೆ 'ಸಿಐಟಿಯು'ವನ್ನು ಪ್ರತಿನಿಧಿಸಿ ರಾಷ್ಟ್ರೀಯ ಉಪಾಧ್ಯಕ್ಷರಾದ ಓರಿಸ್ಸಾದ ವಿಷ್ಣುಚರಣ ಮೊಹಂತಿ ಮತ್ತು ನಾನು–ಯಮುನಾ ಗಾಂವ್ಕರ್ ತೆರಳಿದ್ದೆವು.

ಜಪಾನ್ 4 ಪ್ರಮುಖ ದೊಡ್ಡ ದ್ವೀಪ, 4 ಪ್ರಮುಖ ಮಹಾನಗರ, 6,852 ದ್ವೀಪಗಳ ಸಮುಚ್ಚಯ. ಜನಸಂಖ್ಯೆಯಲ್ಲಿ ಜಗತ್ತಿನ 10ನೇ ದೇಶ. ಸಮುದ್ರಕ್ಕೆ ಸೇತುವೆ ಕಟ್ಟಿ ದ್ವೀಪಗಳನ್ನು ಸೇರಿಸಿದ ಆ ಬ್ರಿಜ್‌ಗಳ ಮೇಲೂ ಸಮುದಾಯ ಉಪಯೋಗಿ ಕೆಲಸ ಮಾಡುವ ದೇಶ.

ಕೈಗಾರಿಕೆ ಮತ್ತು ಆರ್ಥಿಕತೆಯ ದೃಷ್ಟಿಯಿಂದ ಪ್ರಪಂಚದ ಅತ್ಯಂತ ಮುಂದುವರಿದ ದೇಶಗಳಲ್ಲಿ ಒಂದಾದ ದೇಶ ಜಪಾನ್. ಜಿಡಿಪಿಯಲ್ಲಿ ವಿಶ್ವದಲ್ಲಿ 3 ನೇ ಸ್ಥಾನದಲ್ಲಿರುವ ದೇಶ. ಕೊಳ್ಳುವ ಸಾಮರ್ಥ್ಯ ಹೆಚ್ಚಿರುವ ದೇಶ. ಚಕ್ರವರ್ತಿಯ ಅರಸೊತ್ತಿಗೆ ಜೊತೆಗೆ ಪ್ರಜಾಪ್ರಭುತ್ವದ ಸಂಸದೀಯ ವ್ಯವಸ್ಥೆಯನ್ನು ಸಮ್ಮಿಳಿತಗೊಳಿಸಿಕೊಂಡ ಬಂಡವಾಳಶಾಹಿ ದೇಶ.

ಮೂಲತಃ ಯುದ್ಧಕೋರ ಮನೋಸ್ಥಿತಿ ಜಪಾನಿನ ಆಳುವ ವ್ಯವಸ್ಥೆಯೊಳಗೇ ಇದ್ದಂತಿದೆ. ಮೊದಲ ಮಹಾಯುದ್ಧದ ಸಂದರ್ಭದಲ್ಲೇ ಅದೊಂದು ಸಾಮ್ರಾಜ್ಯಶಾಹಿಯ ರೂಪ ಪಡೆದಿತ್ತು. 'ಏಷ್ಯಾ ಖಂಡ ಏಷ್ಯಾ ಖಂಡದಲ್ಲಿದ್ದವರಿಗೆ' ಎನ್ನುತ್ತ ಹಲವು ಒಪ್ಪಂದಗಳನ್ನು ಬಹಳ ವರ್ಷಗಳ ಹಿಂದೆಯೇ ಮಾಡಿಕೊಂಡಿತ್ತು. ರಷ್ಯಾ, ಚೀನಾ, ಕೋರಿಯಾ, ಜೊತೆಗೆ ಪಾಶ್ಚಿಮಾತ್ಯ ದೇಶಗಳೊಂದಿಗೂ ಯುದ್ಧ ನಡೆಸಿದ, ಯುದ್ಧ ಘೋಷಿಸಿದ ದೇಶ. ಅಮೇರಿಕಾ ಜೊತೆ ಸಾಮರಿಕ, ರಾಜಕೀಯ, ಆರ್ಥಿಕ ಕಾದಾಟ ಇನ್ನೂ ನಡೆದೇ ಇದೆ.

1940 ರ ದಶಕದ ಮೊದಲ ಭಾಗದಲ್ಲಿ 2 ನೇ ಮಹಾಯುದ್ಧ ಸ್ಫೋಟಿಸಿತ್ತು. ಹಿಟ್ಲರ್‌ನ ನೇತೃತ್ವದ ಜರ್ಮನಿಯ ನಾಜಿಗಳು, ಮುಸೋಲಿನಿ ನೇತೃತ್ವದ ಇಟಲಿ ಹಾಗೂ ಜಪಾನ್‌ನ ಆಳುವವರು ಸೇರಿಕೊಂಡು ಇಡೀ ಜಗತ್ತನ್ನು ಕಪಿಮುಷ್ಠಿಗೆ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಯುದ್ಧಸಾರಿದ್ದವು. ಮೊದಲಿಗೆ ಸಾಮಾಜ್ಯಶಾಹಿ ದೇಶಗಳ ನಡುವಿನ ಕದನವಾಗಿದ್ದ ಮಹಾಯುದ್ಧವು ಹಿಟ್ಲರ್ ಸೋವಿಯತ್ ಒಕ್ಕೂಟದ ಮೇಲೆ ಆಕ್ರಮಣ ನಡೆಸುವ ಮೂಲಕ ಹೊಸ ಸ್ವರೂಪ ಪಡೆದುಕೊಂಡಿತು. ಕೋಟಿ ಕೋಟಿ ಜನರ ಜೀವಗಳನ್ನು ಬಲಿಪಡೆದ ಈ ಮಹಾಯುದ್ಧ ತನ್ನ ವಿನಾಶ ಲೀಲೆಯನ್ನು ವಿಸ್ತರಿಸುತ್ತಾ ಹೋಯಿತು. ಫ್ಯಾಸಿಸಂನ ಭೀಕರ



ಕ್ರೌರ್ಯಕ್ಕೆ ಸಿಲುಕಿ ಜಗತ್ತು ತತ್ತರಿಸಿ ಹೋದಾಗ ಸಮಾಜವಾದಿ ಸೋವಿಯತ್ ಒಕ್ಕೂಟ ಅದನ್ನು ಎದುರಿಸಿ ದಿಟ್ಟವಾಗಿ ನಿಂತಿತು. ಸೋವಿಯತ್ ಒಕ್ಕೂಟ ಹಿಟ್ಲರನ ನಾಜಿ ಪಡೆಯನ್ನು ನಿರ್ಣಾಯಕವಾಗಿ ಹಿಮ್ಮೆಟ್ಟಿಸಿ ಫ್ಯಾಸಿಸ್ಟ್ ಪಡೆಗಳಿಗೆ ಮಾರ್ಮಾಘಾತ ನೀಡಿತು. ಮಹಾ ವಿನಾಶವೊಂದರಿಂದ ಜಗತ್ತನ್ನು ಉಳಿಸಿದ ಈ ಚಾರಿತ್ರಿಕ ವಿಜಯಕ್ಕಾಗಿ ಸೋವಿಯತ್ ಒಕ್ಕೂಟದ ಎರಡು ಕೋಟಿ ಸೈನಿಕರು ಬಲಿದಾನ ಮಾಡಬೇಕಾಯಿತು.!! ಜಪಾನ್ ಕೂಡ ಇನ್ನೇನು ಸೋತು ಶರಣಾಗುವ ಹಂತ ತಲುಪಿತ್ತು. ಯುದ್ಧದ ನಿರ್ಣಾಯಕ ಘಟ್ಟದವರೆಗೂ ಯಾವ ಪ್ರಮುಖ ಪಾತ್ರವನ್ನೂ ವಹಿಸದೆ ಹಿನ್ನಲೆಯಲ್ಲಿದ್ದ ಅಮೆರಿಕ ಇನ್ನೇನು ಯುದ್ಧ ಮುಗಿಯುತ್ತಿದೆ ಎನ್ನುವ ಹಂತದಲ್ಲಿ ಯುದ್ಧರಂಗ ಪ್ರವೇಶಿಸಿತು. ಆಗ ಯುದ್ಧಾನಂತರದ ಜಗತ್ತಿನಲ್ಲಿ ಮುಂದೆ ಸಮಾಜವಾದಿ ಸೋವಿಯತ್ ಒಕ್ಕೂಟವು ಮಹಾನ್ ಜಾಗತಿಕ ಶಕ್ತಿಯಾಗಿ ಉದಯಿಸುವ ಸಾಧ್ಯತೆ ಕಾಣುತ್ತಿತ್ತು. ಅಲ್ಲಿಯವರೆಗೆ 'ಸೂರ್ಯ ಮುಳುಗದ ಸಾಮ್ರಾಜ್ಯ'ವಾಗಿದ್ದ ಇಂಗೆಂಡ್ ಮಹಾಯುದ್ಧದಲ್ಲಿ ನಲುಗಿ ವಸಾಹತುದೇಶಗಳನ್ನು ಕಳೆದುಕೊಂಡು ಶಕ್ತಿ ಗುಂದುವ ಪರಿಸ್ಥಿತಿ ತೇರು ತ್ತಿತ್ತು. ತಾನು ಒಂದು ಬಂಡವಾಳಶಾಹಿ ದೈತ್ಯನಾಗಿ ಬೆಳೆದು ನಿಂತಿದ್ದ ಅಮೆರಿಕಾ ಇದರಿಂದ ಬೆಚ್ಚಿ ತು. ಭವಿಷ್ಯದ ಜಗತ್ತಿನ ಮೇಲೆ ತನ್ನ ಹಿಡಿತದ ಛಾಪನ್ನು ಒತ್ತಲು 1945 ಅಗಸ್ಟ್ 6 ಮತ್ತು 9 ರಂದು ಅಣುಬಾಂಬ್‌ನ್ನು ಹಿರೋಶಿಮಾ–ನಾಗಾಸಾಕಿಯ ಮೇಲೆ ಎಸೆದು 2 ಲಕ್ಷಕ್ಕೂ ಅಧಿಕ ಜನರ ಸಾವಿಗೆ ಕಾರಣವಾಯಿತು. ಸಾಮಾನ್ಯ ನಾಗರೀಕರನ್ನು ಲಕ್ಷ ಲಕ್ಷಗಳ ಸಂಖ್ಯೆಯಲ್ಲಿ ಸಾಮೂಹಿಕವಾಗಿ ಹತ್ಯೆಗೈಯುವ ವಿನಾಶಕಾರಿ ಬಾಂಬ್ ಅನ್ನು ಅಲ್ಲೀತನಕ ಯಾರೂ ಬಳಸಿರಲಿಲ್ಲ. ಮುಗ್ಧ ಜನರನ್ನು ಅಣು ವಿಕಿರಣದ ನರಕಕ್ಕೆ ನೂಕುವ–ಜಗತ್ತು ಕಂಡು ಕೇಳರಿಯದ ಹಿಂಸೆಗಳಿಗೆ ಗುರಿ ಮಾಡುವ ಅಣು ಬಾಂಬ್ ಪ್ರಯೋಗದ ಮಾಡಿದ ಕುಖ್ಯಾತಿ ಅಮೆರಿಕಕ್ಕೆ ಸೇರಿದೆ. ತಾನು ಮಾತ್ರ ಇಂದಿಗೂ ರಾಶಿ ರಾಶಿ ಅಣ್ವಸ್ತ್ರಗಳನ್ನು ಪೇರಿಸಿಟ್ಟುಕೊಂಡು ಜಗತ್ತಿಗೆಲ್ಲಾ ಅಣ್ವಸ್ತ್ರ ತಯಾರಿಕೆ ವಿರುದ್ಧ ಎಚ್ಚರಿಕೆ ಕೊಡುವ ಅಮೆರಿಕದ ಧೋರಣೆ ಎಷ್ಟು ಅಭಾಸಕರ ಎಂಬುದು ಈ ಇತಿಹಾಸವನ್ನು ತಿಳಿದುಕೊಂಡರೆ ಅರ್ಥವಾಗುತ್ತದೆ.

'ಇತಿಹಾಸದಲ್ಲಿ ಅದೇ ಮೊದಲನೇ ಮತ್ತು ಕೊನೆಯ ಮಾರಣ ಹೋಮವಾಗಲಿ, ಮತ್ತೆಂದೂ ಯುದ್ಧಗಳು, ಪರಮಾಣು ಬಾಂಬ್ ಮತ್ತು ಹೈಡ್ರೋಜೆನ್ ಬಾಂಬ್ ಬೇಡ ಎಂದು 1955 ರಿಂದ ಜಪಾನಿನಲ್ಲಿ ಅಂತಾರಾಷ್ಟ್ರೀಯ ಗಮನ ಸೆಳೆಯುವ, ವಿಶ್ವದ ಎಲ್ಲಾ ರಾಷ್ಟ್ರಗಳಿಗೆ ಶಾಂತಿಗೆ ಕರೆಕೊಡುವ ಯುದ್ಧ ವಿರೋಧಿ ಸಮ್ಮೇಳನ ನಡೆಸುತ್ತಾ ಬರಲಾಗಿದೆ. 'ಜಪಾನ್ ಕೌನ್ಸಿಲ್ ಎಗೆನೆಸ್ಟ್ ಎ ಎಂಡ್ ಎಚ್ ಬಾಂಬ್ಸ್' (ಗೆನ್‌ಸ್ಯೂಕ್ಯೋ) ಈ ಸಮ್ಮೇಳನದ ರೂವಾರಿ. ಜನಸಮುದಾಯದ ಬದುಕು ಉತ್ತಮವಾಗಿರಲು ಶ್ರಮಿಸುತ್ತಿರುವ, ಯುದ್ಧಾಸ್ತ್ರಗಳಿಗೆ ಹೆಚ್ಚಿನ ಹಣ ಮೀಸಲಿಡುವುದನ್ನು, ಯುದ್ಧವನ್ನು ವಿರೋಧಿಸುವ ಶಾಂತಿ ಬಯಸುವ ಸಮಾನ ಮನಸ್ಕ ಸಂಘಟನೆಗಳ ಸಂಯುಕ್ತ ಕೂಟವಾಗಿಯೇ ಇದು ಕೆಲಸ ಮಾಡುತ್ತದೆ. ಸರ್ಕಾರದಿಂದಾಗಲೀ, ಸರ್ಕಾರೇತರ ಕಾರ್ಪೊರೇಟ್ ಸಂಸ್ಥೆಗಳಿಂದಾಗಲಿ ಹಣಕಾಸು ಪಡೆಯದೇ ಸ್ವಾಭಿಮಾನದಿಂದ ಈ ಕಾರ್ಯಕ್ರಮ ಮಾಡಿರುವುದಾಗಿ ಸಂಘಟಕರೇ ತಿಳಿಸಿದ್ದು ವಿಶೇಷ.

ಈ ಬಾರಿ ಎನ್.ಪಿ.ಟಿ. ರಿವ್ಯೂ ಸಮಾವೇಶಕ್ಕೆ ಒಮ್ಮತಕ್ಕೆ ಬರಲು ಆಗ್ರಹಿಸಿ, ಪ್ಯಾಲಿಸ್ಟೈನ್ ಮೇಲಿನ ಯುದ್ಧವನ್ನು ನಿಲ್ಲಿಸಲು ಆಗ್ರಹಿಸಿ ವಿಶ್ವ ಸಂಸ್ಥೆ ಪ್ರತಿನಿಧಿಗಳಿಗೆ ಮನವಿ ನೀಡಲಾಯಿತು. ಅಣ್ವಸ್ತ್ರ ಭಯಾನಕ ಮಾರಣಾಂತಿಕ ದುರಂತದ ಇತಿಹಾಸ ತಿಳಿಸುವುದು, ಹಿರೋಶಿಮಾ ನಾಗಾಸಾಕಿಯ ಅಣುಬಾಂಬ್ ವಿಕಿರಣ ಸಂತ್ರಸ್ತರಾದ 'ಹಿಬಾಕುಶಾ'ಗಳ ಬದುಕಿನ ಪರಿಸ್ಥಿತಿ, ದೇಶದೇಶಗಳ ದ್ವೇಷಗಳನ್ನು ಮಾತುಕತೆಯ ಮೂಲಕ ಶಾಂತಿ ಪ್ರಕ್ರಿಯೆಯಲ್ಲಿ ಬಗೆಹರಿಸಿಕೊಳ್ಳಲು, ಸಂಪೂರ್ಣ ಅಣ್ವಸ್ತ್ರ ನಿಶ್ಯಸ್ತ್ರೀಕರಣ ಮತ್ತು ನಿರ್ಮೂಲನೆಗಾಗಿ ಸರ್ಕಾರದ ಮೇಲೆ ಒತ್ತಡ ಹೇರಲು ಜಗತ್ತಿನಾದ್ಯಂತ ಶಾಂತಿ ಸಂಘಟನೆಗಳ ಪಾತ್ರ ಕುರಿತು ಮಹತ್ವದ ಚರ್ಚೆಗಳು ನಡೆದವು. ಪೂರಕ ಸಮಾವೇಶ, ಕಾರ್ಯಾಗಾರ, ಸಂವಾದ, ಸಾಂಸ್ಕೃತಿಕ ಕಾರ್ಯಕ್ರಮಗಳು, ಮೇ 5 ರಿಂದ 3 ತಿಂಗಳ ತನಕ ನಡೆದ ಯುದ್ಧವಿರೋಧಿ ಆಶಯದೊಂದಿಗೆ ಹಾಗೂ ಶಾಂತಿಗಾಗಿ ನಡೆದ ಪಾದಯಾತ್ರೆಯ ಸಮಾಗಮ, ಮೆರವಣಿಗೆ, ಬಾಂಬ್ ಹಾಕಿದ ದಿನ ಜಪಾನಿನ ಪ್ರಧಾನ ಮಂತ್ರಿ ಮತ್ತು ವಿವಿಧ ದೇಶಗಳ ರಾಯಬಾರಿಗಳು ಹಾಗೂ ಸರ್ಕಾರಿ ಪ್ರತಿನಿಧಿಗಳು ಹಿರೋಶಿಮಾದ 'ಶಾಂತಿ ವನದಲ್ಲಿ' ಬಾಗವಹಿಸಿದ ಬೃಹತ್ ಸಭೆ,

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**